ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೨೪ ಜನವರಿ–ಡಿಸೆಂಬರ್ ೨೦೧೦ ಸಂಚಿಕೆ : ೦೧–೦೨

ಸಂಪಾದಕರು

ಪ್ರೊ॥ ಜಿ. ಅಬ್ದುಲ್ ಬಷೀರ್

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ (ರಿ.)
೩ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು–೧೯
ದೂರವಾಣಿ : ೨೬೬೧೫೮೭೭

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೨೪ ಜನವರಿ–ಡಿಸೆಂಬರ್ ೨೦೧೦ ಸಂಚಿಕೆ : ೦೧–೦೨

ಸಂಪಾದಕರು

ಪ್ರೊ. ಜಿ. ಅಬ್ದುಲ್ ಬಷೀರ್

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಕಲಾಭವನ
೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು – ೫೬೦ ೦೧೯
ದೂರವಾಣಿ : ೨೬೬೧೫೪೭೭, ೨೬೬೭೬೭೭೩
ಇಮೇಲ್: bmsritrust@gmail.com

KARNATAKA LOCHANA - (Half yearly Research Journal)
Editor : Prof. G. Abdul Basheer. Published by B.M.Sri. Smaraka Prathistana, M.V.Si. Reseach Center, B.M.Sri. Kalabhavan, 3rd Main Road, Narasimharaja Colony, Bangalore - 560 019. Ph.No. 080-26615877, 26676773 Pages: IV+97

Year : January-December 2010 (Vol. 24 , No. 01 & 02),
Yearly Subscription : **Rs. 100/-** (for Libraries)
For Individual : **Rs. 50/-**
Singal issue : **Rs. 30/-**

ವಾರ್ಷಿಕ ಚಂದಾ : ರೂ. ೧೦೦/– (ಗ್ರಂಥಾಲಯಗಳಿಗೆ)
ಪ್ರತಿಷ್ಠಾನದ ಆಜೀವ ಸದಸ್ಯತ್ವ : ರೂ. ೫೦೦/–

ಮುದ್ರಣ
ಇಳಾ ಮುದ್ರಣ
ನಂ. ೩೬, ೪೦ ಅಡಿ ರಸ್ತೆ
ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು – ೫೬೦ ೦೨೬
ದೂರವಾಣಿ : ೨೬೭೫೭೮೧೫

ಸಂಪಾದಕೀಯ

ದಿನಾಂಕ: ೨೩-೧೦-೨೦೧೦ರಂದು ನಡೆದ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿಯಲ್ಲಿ ಜಾನಪದತಜ್ಞರೂ ಖ್ಯಾತ ಸಾಹಿತಿಗಳೂ ವಿ.ವಿ. ಪುರಂ ಕಾಲೇಜಿನ ನಿವೃತ್ತ ಕನ್ನಡ ಪ್ರಾಧ್ಯಾಪಕರೂ, ಪ್ರಾಂಶುಪಾಲರೂ ಆದ ಪ್ರೊ. ಡಿ. ಲಿಂಗಯ್ಯನವರು ಅವಿರೋಧವಾಗಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅವರಿಗೆ ಕರ್ನಾಟಕ ಲೋಚನ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಶ್ರೀಯುತರ ಅವಧಿಯಲ್ಲಿ ಪ್ರತಿಷ್ಠಾನದ ಕಾರ್ಯಕಲಾಪಗಳು ಸುಗಮವಾಗಿ ಸಾಗಲಿ ಎಂದು ಹಾರೈಸುತ್ತೇನೆ.

ಸಂಶೋಧನ ಲೇಖನಗಳಿಗೆ ಮೀಸಲಾದ 'ಲೋಚನ' ಪತ್ರಿಕೆ ಇತ್ತೀಚೆಗೆ ತಡವಾಗಿ ಓದುಗರ ಕೈಸೇರುತ್ತಿರುವುದಕ್ಕೆ ನಾನಾ ಕಾರಣಗಳು – ಮುಖ್ಯವಾಗಿ ಲೇಖನಗಳ ಕೊರತೆ. ಲೇಖಕರು ಇತ್ತೀಚೆಗೆ ಲೇಖನಗಳನ್ನು ಬರೆಯುವುದನ್ನೇ ನಿಲ್ಲಿಸಿಬಿಟ್ಟಿರ ಬಹುದು ಎಂಬ ಸಂಶಯ ನನ್ನನ್ನು ಕಾಡುತ್ತಿದೆ. ಸಾಹಿತ್ಯ ಪ್ರಿಯರು ಲೇಖನಗಳನ್ನು ಕಳುಹಿಸುವ ಕೃಪೆ ಮಾಡಬೇಕೆಂದು ಕೋರುತ್ತೇನೆ.

೨೦೧೧ನೆಯ ವರ್ಷ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸಂಸ್ಥಾಪಕರಾದ ದಿವಂಗತ ಪ್ರೊ. ಎಂ.ವಿ.ಸೀತಾರಾಮಯ್ಯನವರ ಜನ್ಮಶತಾಬ್ದಿ ವರ್ಷವನ್ನಾಗಿ ಆಚರಿಸ ಲಾಗುತ್ತದೆ. ಎಂ.ವಿ.ಸೀ.ಯವರ ಅಭಿಮಾನಿಗಳೂ ವಿಮರ್ಶಕ-ಸಂಶೋಧಕ ಬಂಧುಗಳೂ ಅವರನ್ನು ಕುರಿತ ಲೇಖನಗಳನ್ನು ದಯಮಾಡಿ ಕಳುಹಿಸಿಕೊಡಬೇಕೆಂದು ಕೋರುತ್ತೇನೆ. ಸಂಪುಟ ೨೫ರ ೧ನೆಯ ಸಂಚಿಕೆ ಪೂರ್ಣವಾಗಿ ಅವರನ್ನು ಕುರಿತ ಲೇಖನಗಳಿಗೆ ಮೀಸಲಾಗಿರುತ್ತದೆ. ಕವಿಯಾಗಿ, ಪ್ರಬಂಧಕಾರರಾಗಿ, ವಿಮರ್ಶಕರಾಗಿ, ಜೀವನ ಚರಿತ್ರಕಾರರಾಗಿ, ನಾಟಕಕಾರರಾಗಿ, ಗ್ರಂಥ ಸಂಪಾದಕರಾಗಿ, ಕಥೆಗಾರರಾಗಿ, ಕಾದಂಬರಿಕಾರರಾಗಿ, ಸಂಶೋಧಕರಾಗಿ ಶ್ರೀಯುತರು ಮಾಡಿದ ಕಾರ್ಯ ಅದ್ವಿತೀಯವಾದುದು. ಕಾವ್ಯಮೀಮಾಂಸೆ, ಛಂದಸ್ಸು ಮತ್ತು ವ್ಯಾಕರಣ ಕ್ಷೇತ್ರಗಳಿಗೆ ಎಂ.ವಿ.ಸೀಯವರು ಅಪೂರ್ವ ಕೊಡುಗೆಯನ್ನು ನೀಡಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಸೊಬಗನ್ನು ಹೆಚ್ಚಿಸಿದ ಲೇಖಕರಲ್ಲಿ ಎಂ.ವಿ.ಸೀ.ಯವರು ಅದ್ವಿತೀಯರು. ಒಂದು ನೂರು ಗ್ರಂಥಗಳನ್ನೂ, ನೂರಾರು ವಿದ್ವತ್‌ಪೂರ್ಣ-ವಿಚಾರಪೂರ್ಣ ಲೇಖನಗಳನ್ನೂ ನೀಡಿದ್ದಾರೆ. ಸೃಜನಶೀಲತೆ ಮತ್ತು ಪಾಂಡಿತ್ಯದಿಂದ ಬೆಳಗುತ್ತಿದ್ದ ಅವರು ಬಹುಮುಖ ಪ್ರತಿಭೆಯುಳ್ಳವರಾಗಿದ್ದರು.

ಪ್ರೊ. ಜಿ. ಅಬ್ದುಲ್ ಬಷೀರ್

ಪರಿವಿಡಿ

೧. ರನ್ನನ ಅಜಿತನಾಥಪುರಾಣ

• ಪ್ರೊ. ಜಿ. ಅಬ್ದುಲ್ ಬಷೀರ್

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತನೆಯ ಶತಮಾನ 'ಸುವರ್ಣಯುಗ'ವೆಂದು ಉಲ್ಲೇಖಗೊಂಡಿದೆ. ಸಾಹಿತ್ಯಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಈ ಕಾಲ ಅತ್ಯಂತ ಮಹತ್ವ ಪೂರ್ಣವಾದುದು. ಈ ಕಾಲದ 'ಕವಿಗಳು ರಾಜರನ್ನಾಶ್ರಯಿಸಿ ಬದುಕಿದರು; ರಾಜರು ಕವಿಗಳನ್ನಾಶ್ರಯಿಸಿ ಖ್ಯಾತಿ ಪಡೆದರು; ಒಟ್ಟಾರೆ ರಾಜರೂ ಕವಿಗಳೂ ಕರ್ನಾಟಕ ಸಂಸ್ಕೃತಿಯ ವಾಹಕರಾದರು. ರಾಜನನ್ನು ತೃಪ್ತಿಪಡಿಸಲು ಒಂದು ಲೌಕಿಕ ಕಾವ್ಯವನ್ನೂ ತಮ್ಮ ಆತ್ಮ ತೃಪ್ತಿಗಾಗಿ ಒಂದು ಆಗಮಿಕ ಕಾವ್ಯವನ್ನೂ ಈ ಕಾಲದ ಬಹುತೇಕ ಕವಿಗಳು ರಚಿಸಿದರು. ರತ್ನತ್ರಯರಲ್ಲಿ ಒಬ್ಬನಾದ 'ರನ್ನ' ಕವಿ ಈ ಮಾತಿಗೆ ನಿದರ್ಶನವಾಗಿದ್ದಾನೆ.

ಹತ್ತನೆಯ ಶತಮಾನದ ಸಾಹಿತ್ಯ ರಚನೆಯಂತೆ ರನ್ನನು ಕನ್ನಡದ ಆದಿ ಕವಿಯೂ ಅಗ್ರಕವಿಯೂ ಆದ ಪಂಪನನ್ನು ಕಾವ್ಯಮಾರ್ಗದ 'ಗುರು'ವನ್ನಾಗಿಟ್ಟು ಕೊಂಡು 'ಸಾಹಸಭೀಮ ವಿಜಯ' (ಗದಾಯುದ್ಧ)ವೆಂಬ ಲೌಕಿಕ ಕಾವ್ಯವನ್ನೂ, 'ಅಜಿತ ತೀರ್ಥಂಕರ ಪುರಾಣ ತಿಲಕ'ವೆಂಬ ಧಾರ್ಮಿಕ ಕಾವ್ಯವನ್ನೂ ರಚಿಸಿದನು.[೧] ಕಾವ್ಯ ಧರ್ಮ ಹಾಗೂ ಧರ್ಮಗಳ ಸಮನ್ವಯವನ್ನು ಪಂಪನಂತೆ ಸಾಧಿಸಿದ ಅತ್ಯಪೂರ್ವ ಕವಿರನ್ನ. ಮುಂದೆ ಬಂದ ಎಲ್ಲಾ ಕವಿಗಳೂ ಇವರಿಬ್ಬರ 'ಮಾರ್ಗ' ದಲ್ಲಿಯೇ ನಡೆದದ್ದು ಸಾಮಾನ್ಯವಾದ ಸಂಗತಿಯೇನಲ್ಲ! ಕನ್ನಡ ಸಾಹಿತ್ಯವನ್ನು ಅತ್ಯಪೂರ್ವವಾದ ರೀತಿಯಲ್ಲಿ ಪ್ರಾರಂಭಿಸಿದ ಹಾಗೂ ಅದನ್ನು ಉಚ್ಛ್ರಾಯ ಮಟ್ಟಕ್ಕೇರಿಸಿದ ಕೀರ್ತಿ ಜೈನಕವಿಗಳದು.

"ಎನಿತುಂಟಾಗಮವರ್ಣನ
ಮನಿತುಮನೊಳಕೊಂಡು ಸಕಲ ಭವ್ಯ ಜನಂಗ
ಳನುರಾಗಮನೊಡರಿಸಿದಪು
ದೆನಿಪ ಪುರಾಣಂ ಪುರಾಣ ತಿಲಕಮಿದಲ್ತೇ" (೧–೭೮)

ಎಂದು ರನ್ನ ಹೇಳಿದ್ದಾನೆ. ಅಜಿತಪುರಾಣ'ದಲ್ಲಿ ಪ್ರಥಮಾನುಯೋಗ, ಕರಣಾನು

ಯೋಗ, ಚರಣಾನುಯೋಗ, ದ್ರವ್ಯಾನುಯೋಗಗಳೆಂಬ ನಾಲ್ಕು ಅನುಯೋಗಗಳು ಅಂಗಾಂಗಿಭಾವದಿಂದ ಸೇರಿವೆ.[೨]

ಜಿನಸಮಯದೀಪಕನಾದ ರನ್ನನ 'ಅಜಿತಪುರಾಣ' ಹನ್ನೆರಡು ಆಶ್ವಾಸಗಳ ಏಳು ನೂರ ತೊಂಬತ್ತೆರಡು ಪದ್ಯ ಹಾಗೂ ಗದ್ಯದ ತುಣುಕುಗಳ ಅಷ್ಟಾದಶ ವರ್ಣನೆಗಳಿಂದ ಕೂಡಿದ ಒಂದು ಚಂಪೂ ಮಹಾ ಕಾವ್ಯ. ಭವಾವಳಿಗಳ ತೊಡಕಿಲ್ಲದ, ವೈರಾಗ್ಯದ ಪರಮಾವಧಿವರ್ಣನೆಗಳಿಂದಲೂ ಭಕ್ತಿಯ ಪರಾಕಾಷ್ಠೆಯಿಂದಲೂ ಕೂಡಿದ ಕಾವ್ಯವಿದು.[೩]

ಆಶ್ರಯದಾತೆ (ಅತ್ತಿಮಬ್ಬೆ) ಹಾಗೂ ಗುರುಗಳ (ಅಜಿತಸೇನಾ ಚಾರ್ಯ) ಹೆಸರುಗಳು ಶಾಶ್ವತವಾಗುಳಿಯಲಿ ಎಂದೂ, ದಾನಚಿಂತಾಮಣಿ, ಪುಣ್ಯಶೀಲೆ, ಅತ್ತಿಮಬ್ಬೆಯ ಗುಣಗಳಿಂದ ಆಕರ್ಷಿತಗೊಂಡು ಅನ್ನದಋಣವನ್ನೂ ಗುರುಋಣವನ್ನೂ ತೀರಿಸಲು ರನ್ನ ಈ ಕೃತಿಯನ್ನು ರಚಿಸಿದನು.[೪]

ಅಜಿತಪುರಾಣದ ಮೊದಲನೆಯ ಹಾಗೂ ಹನ್ನೆರಡನೆಯ ಆಶ್ವಾಸಗಳಲ್ಲಿ ಕವಿಕಾವ್ಯ ವಿವರಗಳ ಮತ್ತು ಅತ್ತಿಮಬ್ಬೆಯ ವಂಶ, ದಾನ, ಔದಾರ್ಯ ಗುಣಗಳ ಪ್ರಶಂಸೆಗಳಿವೆ; ಎರಡರಿಂದ ಎಂಟನೆಯ ಆಶ್ವಾಸಗಳವರೆಗೆ ಅಜಿತನಾಥನ ಬದುಕಿನ ವಿವರಗಳಿವೆ. ಆದಿಪುರಾಣದ ಅಂತ್ಯದಲ್ಲಿ ಭರತಬಾಹುಬಲಿಯರ ಕಥೆಬಂದಂತೆ, ಒಂಬತ್ತು, ಹತ್ತು, ಹನ್ನೊಂದನೆಯ ಆಶ್ವಾಸಗಳಲ್ಲಿ ಸಗರಚಕ್ರವರ್ತಿಯ ಬದುಕಿಗೆ ಸಂಬಂಧಿಸಿದ ತುಂಬ ಸ್ವಾರಸ್ಯವಾದ ಕಥನವಿದೆ. "ಜಿತಕಂದರ್ಪಮೆನಿಪ್ಪ ಶಾಂತರಸಮೆತ್ತ, ಉದ್ದಾಮ ಶೃಂಗಾರಮೆತ್ತ......ಕೆಂಕೇನಸಂಗತಮೆಂಬಂತಿರೆ ಪೇೞ್ದ ಧರ್ಮಕಥೆಯಂ ಪಾಪಕ್ಕೆ ಪಕ್ಕಪ್ಪುದೇ"(೧-೯೩) ಎನ್ನುವ ರನ್ನ 'ಶಾಂತರಸಕ್ಕೆ' ಪ್ರಾಧಾನ್ಯ ನೀಡಿ ತನ್ನ ಕೃತಿ ಜೈನಧರ್ಮದ ಕೈಪಿಡಿಯಾಗಬೇಕೆಂದು ಬಯಸಿದ್ದಾನೆ.[೫]

ರನ್ನ ಅಜಿತಪುರಾಣಕ್ಕೆ – ಕಥಾವಸ್ತುವನ್ನು – ಗುಣಭದ್ರಾಚಾರ್ಯರ 'ಉತ್ತರ ಪುರಾಣ'ದಿಂದ (ಮೂಲದಲ್ಲಿ ೧೪೩ ಶ್ಲೋಕಗಳಿವೆ) ತೆಗೆದುಕೊಂಡಿದ್ದಾನೆ. ಕಥೆಯನ್ನು ಅಲ್ಲಿದ್ದಂತೆಯೇ ತೆಗೆದುಕೊಳ್ಳಬೇಕಾದ ಇಕ್ಕಟ್ಟಿನ ಪರಿಸ್ಥಿತಿ ಆತನದು. ಆದರೂ ಕಥೆಯ ರೇಖೆಗಳಿಗೆ ವೈವಿಧ್ಯಮಯವಾದ ವರ್ಣನೆಗಳ ಮತ್ತು ರಸವತ್ತಾದ ವಿಚಾರಗಳ ರಕ್ತಮಾಂಸವನ್ನು ತುಂಬಿ ರಸೋತ್ಕಟವಾದ ಕೃತಿಯೊಂದನ್ನು ನಿರ್ಮಿಸಿದ್ದಾನೆ. ಸ್ಥೂಲವಾಗಿ ಕಥೆ ಹೀಗಿದೆ:

ನರೆದ ಕೂದಲನ್ನು ನೋಡಿದಾಗ ವಿಮಲವಾಹನ ರಾಜನಿಗೆ ವೈರಾಗ್ಯ ಪ್ರಾಪ್ತಿಯಾಗಿ ಮುಕ್ತಿಯ ಆಸೆ ಚಿಗುರುತ್ತದೆ; ಜಿತಶತ್ರುರಾಜ – ವಿಜಯಸೇನೆ ದಂಪತಿಗಳಿಗೆ ದ್ವಿತೀಯ ತೀರ್ಥಂಕರ ಅಜಿತನಾಥನಾಗಿ ಹುಟ್ಟುತ್ತಾನೆ. ಅಜಿತನಾಥ ಉಲ್ಕಾಪಾತವನ್ನು ನೋಡಿ ವೈರಾಗ್ಯಕ್ಕೀಡಾಗಿ ಮಹಜಿತಸೇನನಿಗೆ ಪಟ್ಟವನ್ನು ಕಟ್ಟುತ್ತಾನೆ. ಅನಂತರ ಜೈನದೀಕ್ಷೆಯನ್ನು ಪಡೆದು ಅಯೋಧ್ಯೆಯಲ್ಲಿ ಒಮ್ಮೆ ರಾಜನ ಮನೆಯಲ್ಲಿ ಭಿಕ್ಷೆಯನ್ನು ಸ್ವೀಕರಿಸಿ ಮುಂದೆ ಕೇವಲಿಯಾಗಿ ಅಘಾತಿಕರ್ಮಗಳನ್ನು ನಾಶಪಡಿಸಿ ಶಿವಪದಸುಖವನ್ನು ಪಡೆಯುತ್ತಾನೆ.

ಈ ಕಥೆಯ ಎಳೆಗಳ ನಡುವೆ ಜೈನ ಪುರಾಣಗಳಲ್ಲಿ ಬರುವ ಕೆಲವು ಸಂಗತಿಗಳನ್ನು ರನ್ನ ಬಿಡಲು ಸಾಧ್ಯವಿಲ್ಲ. ಅವನ್ನು ತಂದೇ ಇದ್ದಾನೆ! ಪಂಚಮಹಾ ಕಲ್ಯಾಣಗಳು[೭] ಎಲ್ಲಾ ತೀರ್ಥಂಕರರಿಗೂ ಸಮಾನವಾದವು. ಹೆಸರು, ಎತ್ತರ, ಬಣ್ಣ, ವಯಸ್ಸು, ಚಿಹ್ನೆ, ತಾಯಿ ತಂದೆಯರ ಹೆಸರು, ಜನ್ಮ ಸ್ಥಲ, ನಿರ್ವಾಣ ಸ್ಥಲ, ವಂಶ, ಗೋತ್ರ, ನಕ್ಷತ್ರ – ಇವುಗಳಲ್ಲಿ ಮಾತ್ರ ಸಣ್ಣ ಪುಟ್ಟ ವ್ಯತ್ಯಾಸಗಳಿರುತ್ತವೆ. ತೀರ್ಥಂಕರರಲ್ಲಿ ವಿಶೇಷವಾಗಿ ಎರಡು ವ್ಯತ್ಯಾಸಗಳು ಕಂಡುಬರುತ್ತವೆ. (೧) ಶಾಂತಿ, ಕಂಥು, ಅರನಾಥ – ಇವರು ಪರಿನಿಷ್ಕ್ರಮಿಸುವ ಮೊದಲು ಚಕ್ರವರ್ತಿಗಳಾಗಿಯೂ ಬದುಕಿದರು. (೨) ವಾಸುಪೂಜ್ಯ, ಮಲ್ಲಿ, ನೇಮಿ, ಪಾರ್ಶ್ವ, ವರ್ಧಮಾನ – ಇವರು ವರಿಸಿರಲಿಲ್ಲ; ಉಳಿದವರು ವರಿಸಿದ್ದರು. ಷೋಡಶಸ್ವಪ್ನಗಳು, ನರೆದ ಕೂದಲು, ಉಲ್ಕಾಪಾತಗಳನ್ನು ಕಂಡು ವೈರಾಗ್ಯೋದಯವಾಗುವುದು; ಕುಮಾರೋದಯ, ಜನ್ಮಾಭಿಷೇಕ, ಯೌವನ ಪ್ರಾಪ್ತಿ, ವಿವಾಹ, ರಾಜ್ಯಾಭಿಷೇಕ, ದೀಕ್ಷಾಗ್ರಹಣ, ಪರಿನಿರ್ವಾಣ ಮುಂತಾದವನ್ನು ರನ್ನ ದೀರ್ಘವಾಗಿ ತಂದಿದ್ದಾನೆ. ತಮ್ಮ ಮಕ್ಕಳಿಗೆ ಪಟ್ಟವನ್ನು ಕಟ್ಟಿ ಮುಕ್ತಿಶ್ರೀಯ ಹಿಂದೆ ಹೋಗುವುದು, ಸಮಾಧಿಮರಣ, ಇಂದ್ರನಿಗೆ ಆಸನಕಂಪನವಾಗುವುದು, ಇಂದ್ರ ಜನ್ಮಾಭಿಷೇಕ ಕಲ್ಯಾಣ ಪೂಜೆ ಮಾಡುವುದು, ಸಕಲ ವಿದ್ಯೆಗಳು ತಾವಾಗಿಯೇ ನೆಲಸುವುದು, ಸಂಸಾರ, ಶರೀರ, ಭೋಗ–ಭಾಗ್ಯ–ವೈರಾಗ್ಯ ಚಿಂತನೆ, ತಲೆಗೂದಲು ಕೀಳುವುದು, ಕೇವಲ ಜ್ಞಾನೋದಯವಾಗುವುದು, ಭವಾವಳಿ, ದೇವೇಂದ್ರ ಸ್ತುತಿ, ಘಾತಿ–ಅಘಾತಿ ಕರ್ಮಗಳ ನಾಶ– ಇಂಥ ಎಷ್ಟೋ ವಿಚಾರಗಳು ಜೈನ ಪುರಾಣಗಳಲ್ಲಿ ಕಂಡು ಬರುತ್ತವೆ. ಅವುಗಳಲ್ಲಿ ಹಾಗೂ ಇನ್ನಿತರ ಸಂದರ್ಭಗಳಲ್ಲಿ ಕವಿಗಳು ಸ್ವೋಪಜ್ಞತೆಯನ್ನು ತರಲು ಪ್ರಯತ್ನಿಸಿದ್ದಾರೆ.

ಜೈನ ಪುರಾಣಗಳಲ್ಲಿ ಬರುವ ಭವಾವಳಿ ಅಂದರೆ ಜನ್ಮಾಂತರಗಳ ಕಥೆ ತುಂಬ ತೊಡಕಾಗಿ ಕಂಡುಬರಲು ಕಾರಣ ಮಾನವ ಬದುಕು ಇರುವುದೇ ಹಾಗೆ; ಮುಷ್ಯ ಬದುಕಿನ ಪ್ರತಿಬಿಂಬ, ಗತಿಬಿಂಬ ಈ ಭವಾವಳಿಯ ಕಲ್ಪನೆ. "ಜೀವ ಅನಾದಿ ಕಾಲದಿಂದ ಅನುಭವಿಸಿದ ತೊಡಕು ಜೈನಪುರಾಣಗಳಲ್ಲಿ ಕಾಣುವ ಈ ತೊಡಕಿಗಿಂತ ಅನೇಕ ಪಾಲು ಹೆಚ್ಚು"[೮] ಭವಾವಳಿ, ಭವನಿಗೆ ಭವದ ಬಗ್ಗೆ ಭೀತಿಯುಂಟು ಮಾಡುವುದರ ಜೊತೆಗೆ 'ಪಾಪ ಮಾಡಿದ ಜೀವ ಸನ್ಮಾರ್ಗತುಳಿದರೆ ಅದಕ್ಕೆ 'ಸುಗತಿ' ಯುಂಟೆಂಬ ಆಶ್ವಾಸನೆ ನೀಡುತ್ತದೆ. ಅನಂತಚುತಷ್ಟಯ್ ಪಡೆದ ಜೀವಿಗಳು ಬದುಕಿದ್ದಾಗಲೇ ತಾವು ಪಡೆದ ಮುಕ್ತಿಯನ್ನು ಪರರಿಗೂ ಬೋಧಿಸುತ್ತಾರೆ. ಇವರೇ ಜಿನರು ಅಥವಾ ಅರ್ಹಂತರು ಅಥವಾ ತೀರ್ಥಂಕರರು.

ಮೂಲಕಥೆಯಲ್ಲಿ (ಉತ್ತರಪುರಾಣದಲ್ಲಿ) ವಿಮಲವಾಹನನಿಗೆ ಸಹಜವಾಗಿ ವೈರಾಗ್ಯೋದಯವಾಗುವ ಸಂಗತಿಯಿದೆ; ಅದನ್ನು ರನ್ನ ಅಜಿತನು ಕೆನ್ನೆಯ ಮೇಲಿನ ನರೆತಕೂದಲನ್ನು ಕಂಡಾಗ ವೈರಾಗ್ಯೋದಯಕ್ಕೀಡಾದನು' ಎಂದು ಬದಲಾಯಿಸಿ ಕೊಂಡು ಹೇಳಿರುವುದು ತೀರಸಹಜವಾಗಿದೆ; ಔಚಿತ್ಯಪೂರ್ಣವಾಗಿದೆ.

ರನ್ನ ಜೈನಪುರಾಣಗಳ ಚೌಕಟ್ಟನ್ನು ಮೀರದೆ ಇದ್ದರೂ ಅವುಗಳೊಳಗೆ ಸ್ವೋಪಜ್ಞತೆಯನ್ನು ಹೇಗೆ ಮೆರೆದಿದ್ದಾನೆಂಬುದಕ್ಕೆ ಕೆಲವು ನಿದರ್ಶನಗಳ್ನು ನೋಡಬಹುದು.

(೧) ಸಾಂಪ್ರದಾಯಕ ವರ್ಣನೆಗಳಲ್ಲಿಯೂ ರನ್ನ ಹೊಸತನವನ್ನು ತರಬಲ್ಲನೆಂಬುದಕ್ಕೆ **'ಬೆಳುದಿಂಗಳ'** ವರ್ಣನೆಯೊಂದನ್ನು ನೋಡಬಹುದು.

"ಬೆಲಗಸೆತೀವಿಕೊಂಡು ಕುಡಿಯಲ್, ಮೊಗೆಯಲ್ ಕೊಡಗೊಂಡು, ತಿರ್ದಿಬ
ಚ್ಚಲನೆಲೆದೋಂಟದೊಳ್ ಪರಿಯಿಸಲ್, ಪಱುಗೋಲ್ಗಳನಿಕ್ಕಿ ಪಾಯಿಸಲ್
ನೆಲೆಯಿನಿಸೆಂದು ನೋಡಲೊಳಪೊಕ್ಕುದುಡುಮ್ಮಿಱಿದಾಡಲೀಸಲ
ಗ್ಗಲಿಸದಲಂಪಿನಿಂ ಬಗೆದುದಂದು ಜನಂ, ಘನಚಂದ್ರಿಕಾಂಬುವಂ", (೬-೪೫)

ಬೆಳುದಿಂಗಳನ್ನು ಕಂಡು ರನ್ನನಮನೋಭಾವನೆಗಳೆಂಥವು! 'ಬೆಳುದಿಂಗಳನ್ನು ಬೊಗಸೆಯಲ್ಲಿ ತುಂಬಿಕೊಂಡು ಕುಡಿಯಬಹುದು; ಕೊಡದಲ್ಲಿ ತುಂಬಿಕೊಳ್ಳಬಹುದು; ಕಾಲುವೆಗಳ ಮುಖಾಂತರ ತೋಟಕ್ಕೆ ಹಾಯಿಸಬಹುದು; ಹರಿಗೋಲನ್ನು ಹಾಕಿ ದಾಟಬಹುದು; ಸಾಕಷ್ಟು ಆಳವಿರುವುದರಿಂದ 'ಧುಡುಂ' ಎಂದು ಧುಮುಕಿ ಈಜಾಡಬಹುದುದು!" ಎಂಥ ಉನ್ಮಾದ; ಏನು ವಿಚಿತ್ರ ಕಲ್ಪನೆ ರನ್ನನದು! ಲೋಕೋಪಯೋಗಿ ದೃಷ್ಟಿಯ ವಸ್ತುಗಳಲ್ಲಿಯೂ ಕವಿಗಳು ಎಂಥ ಮೋಡಿಯನ್ನು ಮಾಡಿ ಸಹೃದಯರಿಗೆ ರಸಾನುಭವವನ್ನು ನೀಡಬಲ್ಲರೆಂಬುದಕ್ಕೆ ಇದಕ್ಕಿಂತ ಸುಂದರ ನಿದರ್ಶನವೆಲ್ಲಿಂದ ತರುವುದು। ತುಂಬಿ ಹರಿಯುವ ನದಿಯಿಂದ ಮೇಲೆ ಹೇಳಿದ ಕೆಲಸಗಳನ್ನು ಮಾಡಿದರೆ ಅದು ಲೋಕವಾರ್ತೆಯಾಗುತ್ತದೆ । ಆದರೆ ರನ್ನ ಬೆಳುದಿಂಗಳ ವರ್ಣನೆಯ ಮೂಲಕ ರಸಬಿಂದುವೊಂದನ್ನು ಸ್ಫುರಿಸಿದ್ದಾನೆ!

೨) ವಸಂತೋದಯದ ವರ್ಣನೆ

ಎಳವೆಱೆ ದಾಡೆ, ಕೆಂದಳಿರೆ ನಾಲಗೆ, ಮಾಮರನಳ್ಗೆಗೊಂಬಿನೊಳ್
ಮಿಳಿರ್ವೆಳವಳ್ಳಿ ಬಾಲಮಲರ್ಗೊಂಚಲೆ ಕೇಸರಮೆಂಬಿನಂ ಮನಂ
ಗೊಳೆ, ಮಧುಮಾಸಕೇಸರಿ, ವಿಯೋಗಿಗಳೆಂಬ ಮೃಗಂಗಳಂಭಯಂ
ಗೊಳಿಸಿದುದುತ್ಕಕೀರ, ಮದಕೋಕಿಲ, ಗರ್ಜಿತ, ತರ್ಜಿತಂಗಳಿಂ' (೬-೨೫)

ಚಮತ್ಕಾರವೂ ಸಾಂಪ್ರದಾಯಿಕವೂ ಶುಷ್ಕವೂ ಎನ್ನಿಸಬಹುದಾದ ಈ ವರ್ಣನೆಯಲ್ಲಿ ಕವಿ ಕಲ್ಪನೆ ನಮ್ಮಲ್ಲಿ ಮೆಲುಕು ಹಾಕುವ ಮನೋಭಾವನೆಯನ್ನುಂಟು ಮಾಡಿಬಿಡುತ್ತದೆ!

"ಬಂದಿರೆ ಮಾಮರಂಗಳಿರ ಮಲ್ಲಿಗೆ ಬಂದಿರೆ ಕೋಕಿಲಾಳಿನೀ
ವೃಂದಮೆ ಬನ್ನಿಮಿತ ಶುಕ ನೀಂ ಸೊಕಮೇರಜನೀಂದ್ರಚಂದ್ರ ಸೈ
ಪಿಂದಮೆ ಬಂದಿರೇ ಕುಶಲಮೇ ನಿಮಗೆಂದು ಮಧುಪ್ರವೇಶದೊಳ್
ಬಂದು ಮನೋಜನೇನನಿತುಮಂಪೆಸರ್ಗೊಂಡನೊ ಕೂಡಿಕೊಂಡನೊ" (೬-೪)

ವಸಂತ ಋತುವಿನ ಆಗಮನ ಆಹ್ಲಾದಕಾರಿಯಾಗಿದೆ. ಮನ್ಮಥನು ಮಾಮರ, ಮಲ್ಲಿಗೆ, ಕೋಗಿಲೆ, ಶುಕಗಳನ್ನು ಹೆಸರು ಹಿಡಿದು ಮಾತನಾಡಿದನು. 'ಏನು' ಬಂದಿರಾ ಬನ್ನಿ. ಪಯಣ ಸುಖಕರವೆ ಎಂದು ಕ್ಷೇಮವನ್ನು ಕೇಳಿ ಸ್ವಾಗತ ಕೋರಿದನು. ವಸಂತೋದಯದ ಮೋಹಕತೆಗೆ ಅನುಸಾರವಾದ 'ಉಚಿತೋಕ್ತಿ, ಮಧುರಶಬ್ದ ಪುಂಜಗಳಿವೆ ಇಲ್ಲಿ. ಪದ ಲಾಲಿತ್ಯದ ಸೊಗಸು, ರೂಪಕಾಲಂಕಾರದ ಬೆಡಗು, ಮಧು ಮಾಸವನ್ನು ಕೇಸರಿಯೆಂದು ಕಲ್ಪಿಸಿಕೊಂಡು ಬರೆದ ಪದ್ಯಕ್ಕೂ (೬-೨೩) ಈ ಪದ್ಯ ರಚನೆಗೂ (೬-೧೪) ಇರುವ ವ್ಯತ್ಯಾಸಗಳನ್ನು ಗಮಿಸಬೇಕು. ಮೊದಲನೆಯದು ಪ್ರೌಢ ಗುಣ (ಓಜಸ್ಸು) ಕ್ಕೆ ನಿದರ್ಶನವಾದರೆ ಎರಡನೆಯದು ಪ್ರಸಾದಗುಣಕ್ಕೆ ನಿದರ್ಶನವಾಗಿದೆ.

೩) ಗರ್ಭಾವತರಣೋತ್ಸವ ವರ್ಣನೆ

ಚಿರಪರಿಚಿತ ಲೋಕಾನುಭವ ದೃಷ್ಟಾಂತವೊಂದರಿಂದ ಜಿನನ ಜನನದ ಸಂದರ್ಭವನ್ನು ರನ್ನ ಚಿತ್ರಿಸುವ ಪರಿ ಚೆನ್ನಾಗಿದೆ :

ಬರೆ ಮನೆಗಭ್ಯಾಗತರಾ
ದರದಿಂ ಗೃಹಶುದ್ಧಿಮಾಡುವಂತಜಿತಜಿನಂ
ಬರಲಿರೆ ಮಾಡಿದರಮರೇ
ಶ್ವರಸತಿಯರ್ ನೆರೆದುಗರ್ಭಸಂಶೋಧನಮಂ" (೩-೧೧)

೪) ಐರಾವತದ ಭವ್ಯ ಚಿತ್ರದವರ್ಣನೆ

ಜಿನ ಶಿಶುವನ್ನು ತೆಗೆದುಕೊಂಡು ಹೋಗುವ ಐರಾವತದ ಭವ್ಯಚಿತ್ರಕಣ್ಣಿಗೆ ಕಟ್ಟುವಂತೆ ರನ್ನ ಕೊಡಬಲ್ಲ:

"ಸುರಕರಿಗೆ ಮೊಗಂ ಮೂವ
ತ್ತೆರಡಾದುವೆ ಬೇಱೆ ವೇಱೆ ಮೊಗದೊಳವೆಂಟೆಂ
ಟು ರದನಮೊಪ್ಪುಗುಮೊಂದೊಂ
ದು ರದನದೊಳದೊಂದೆ ವಿಮಲ ಕಮಲವನಂಗಳ್ (೪-೨೧)

೫) ವೈರಾಗ್ಯೋದಯದ ವರ್ಣನೆ

ರನ್ನನ ಸ್ವೋಪಜ್ಞತೆಯ ಪ್ರದರ್ಶನಕ್ಕೆ ಅಜಿತನ ವೈರಾಗ್ಯೋದಯದ ವರ್ಣನಾ ಭಾಗವನ್ನು ನೋಡಬಹುದು. ಇಲ್ಲಿನ ಒಂದೊಂದು ಪದ್ಯವೂ ಬಿಡಿ ಬಿಡಿಯಾದ ಭಾವಗೀತೆಗಳಂತಿದೆ ! ಕಂದಪದ್ಯ ರಚನೆ ಸಂದರ್ಭೋಚಿತವಾಗಿದೆ.

ಇವರ್ ಆರ್, ಆನ್ ಆರ್ಗೆ, ಎನಗೆ ಈ
ಭವಂ ಅಲ್ಲದೆ, ಕಟಿದಭವದ ತಾಯ್‌ತಂದೆತನೂ
ಭವರ್ ಎಲ್ಲರುಂ ಎಲ್ಲಿದರ್, ಎಂದು

ಅವಧರಿಸದೆ, ಇದು ಏಂ ಜಡಸ್ವಭಾವನೊಜೀವಂ (೬-೫೩)

ಉಲ್ಕಾಪಾತವಾದಾಗ ಅಜಿತನ ವಿಷಯಾಸಕ್ತಿ ಮುರಿದು ಬೀಳುವುದರ ಸುಂದರ ಚಿತ್ರ ಈ ಪದ್ಯ ಕಟ್ಟಿಕೊಡುತ್ತದೆ.

ಜಿತಶತ್ರು ರಾಜನಿಗೆ ಕೆನ್ನೆಯ ಮೇಲೆ ಕೂದಲು ಕಂಡು ವೈರಾಗ್ಯೋದಯವಾದಾಗಿನ ಸಂದರ್ಭದ ಪದ್ಯಗಳು ರಸೋತ್ಕಟವಾಗಿವೆ:

"ಎನಿತೆನಿತು ಕಟಿದ ಭವಮಂ
ನೆನೆದಪೆಯೆನಿತೆನಿತು ಭವದ ಬಂಧುಗಳಂ ನೀ
ನೆನೆದಪೆಯೆನಿತೆನಿತೊಡಲಂ
ನೆನೆದಪೆಯೆಲೆ ಜೀವ, ನೀನೆ ಪೇಟ್‌ಪವಣೊಳವೇ" (೨-೬೦)

"ಎನಿತಂ ಕುಟ್ಟುವಿಗುದಿದಪೆ
ಯೆನಿತಂ ಕಟ್ಟನೆ ಕಟಿಲ್ದಪಯ್ ಜೀವನೆ ನೀ
ನೆನಿತಂ ಮಲ್ಮಲ ಮಱುಗುವಯ್
ಯೆನಿತಂ ಸಂಸಾರದೊಳಗೆ ತಿಱ್ಱನೆತಿರಿವಯ್" (೨-೬೧)

"ಎನಿತಂ ಬೆದವೆದ ಬೆಂದಪಯ್
ಯೆನಿತಂ ಸುಡುಸುಡುನೆ ಪುಗುವೆಯ್ ಜೀವನಿನೀ
ನೆನಿತಂ ಮಲ್ಮಲ ಮಱುಗುವಯ್
ಯೆನಿತಂ ಭವಗಹನದೊಳಗೆ ಬಟ್ಟನೆ ಬರ್ಪಯ್" (೨-೬೨)

"ಕಡೆಯಿಲ್ಲದ ಸಂಸಾರದ
ಕಡೆಗಾಣಲ್ಬಗೆವೆಯಪ್ಪೊಡೆನ್ನುಕ್ತಿಗೊಡಂ
ಬಡು ಜೀವ ನಿನ್ನ ಕಾಲಂ
ಪಿಡಿವೆಂ, ಧರ್ಮಮನೆ ಮಗುಟೆ ಬಲ್ವಿಡಿವಿಡಿಯೋ"(೨-೬೩)

ಅದ್ಭುತವರ್ಣನೆಯಿದು. ಇಂಥ ಕಡೆ ರನ್ನ ಮತಧರ್ಮದ ಸಂಕೋಚದಿಂದ ಮೇಲಕ್ಕೇರಿ ವಿಶ್ವಧರ್ಮದ ಮಹೋನ್ನತಿಯದರ್ಶನ ಮಾಡಿಸುತ್ತಾನೆ! ಸುಸಂಸ್ಕೃತ ಕವಿ ಚೇತನದ ಆತ್ಮರೋದನ (ಅಂಗಲಾಚುವಿಕೆ) ಇಲ್ಲಿ ಮಡುಗಟ್ಟಿದೆ. ಸ್ವಭಾವೋಕ್ತಿ ಅಲಂಕಾರದಲ್ಲಿ ರಸವನ್ನುಕ್ಕಿಸುವ ರನ್ನನ ವಿಧಾನಕ್ಕೆ ಇದೊಂದು ಒಳ್ಳೆಯ ನಿದರ್ಶನವಾಗಿದೆ.

೬) ಅರಸಿಯರ ಪ್ರಲಾಪ

ಅಜಿತನಿಗೆ ವೈರಾಗ್ಯೋದಯವಾಯಿತು; ಕೊನೆಗೆ ಆತ ಪರಿನಿಷ್ಕ್ರಮಿಸುವಾಗ ಅಯೋಧ್ಯೆಯಗತಿ ಏನಾಯಿತು! ಅರಸಿಯರ ಆಕ್ರಂದನ ಹೇಗಿತ್ತು? ತಮ್ಮ ಹೃದಯದ ನೋವನ್ನು ನಿಸರ್ಗ ದೃಶ್ಯದ ಮೂಲಕ ತೋಡಿಕೊಳ್ಳುವುದು ಹೃದಯ ವಿದ್ರಾವಕವಾಗಿದೆ.

ಲಲಿತಲತಾಲಯಂಗಳಿರ! ಸುಂದರಕಾನನ ಚಂದನದ್ರುಮಂ
ಗಳಿರ! ತಳಿರ್ತಶೋಕೆಗಳಿರಾ! ಸಹಕಾರತಮಾಲಭೂರುಹಂ
ಗಳಿರ! ವಿಯೋಗಮಾದುದೆಮಗಂ ನಿಮಗಂ ಬೆಸಕೆಯ್ವೆಮೆಂದುವಿ
ಬೆಸಕೆಯ್ದೆಮೆಂದುವಿ
ಹ್ವಳೆಯರಗಲ್ಕೆಯೊಳ್ ನೆಗಪಿದರ್ ವಸಮಲ್ಲದ ಭಾಷ್ಪವಾರಿಯಂ"(೬-೧೧೧)
"ಏನೆಮ್ಮ ಮನಮೆ ಶೂನ್ಯಂ,
ನೀನಿಲ್ಲದ ರಾಜಮಂದಿರಂ ಶೂನ್ಯಮಯೋ
ಧ್ಯಾನಗರಂ ಶೂನ್ಯಮಖಿಳಾ
ಸ್ಥಾನಂ ಶೂನ್ಯಂ, ತ್ರಿಲೋಕಮಂಡನತಿಲಕಾ" (೧-೧೧೪)

'ಶೂನ್ಯ' ಎಂಬ ಶಬ್ದದ ಪುರಾನವರ್ತನೆಯಿಂದ ಇಡೀ ವಾತಾವರಣ ಶೂನ್ಯ ಅಂದರೆ ಬರಿದಾಗುವಿಕೆಯ ಚಿತ್ರವನ್ನೂ ವಿರಹವೇದನೆಯ ತುತ್ತತುದಿಯನ್ನೂ ಸೊಗಸಾಗಿ ಕಟ್ಟಿಕೊಡುತ್ತದೆ!

ರನ್ನನು ವೈರಾಗ್ಯೋದಯ, ಮನಸ್ಸಿನ ನೋವು, ಪ್ರಕೃತಿಯ ಕೆಲವು ದೃಶ್ಯಗಳನ್ನು ವರ್ಣಿಸುವ ರೀತಿ ಆತನನ್ನು ಮಹಾಕವಿ ಪಟ್ಟಕ್ಕೇರಿಸಲು ಪ್ರಯತ್ನಿಸುತ್ತವೆ.

ಸಗರನ ಕಥೆ

ರನ್ನನ ಕಥನ ಕಲೆ ಮೇರೆಮೀರಿ ಹರಿದಿರುವುದು ಸಗರಚಕ್ರವರ್ತಿಯ ಕಥೆಯಲ್ಲಿ! ತೀರ್ಥಂಕರನ ಕಥೆಯೊಡನೆ ಚಕ್ರವರ್ತಿಯ ಕಥೆಯೊಂದನ್ನು ಪರಿಶಿಷ್ಟದಂತೆ ನಿರೂಪಿಸುವುದು ಜೈನಪುರಾಣಗಳ ಲಕ್ಷಣ. ಅಜಿತನಾಥನ ಕಥೆಯೊಡನೆ ಸಾವಯವ ಸಂಬಂಧವನ್ನು-ಇಂಥ ಕಥೆಗಳು- ಪಡೆದುಕೊಳ್ಳುವುದಿಲ್ಲ.

ಜಯಸೇನರಾಜ ವಿಜಯಸೇನೆ ರಾಣಿಯರಿಗೆ ರತಿಷೇಣ ಮತ್ತು ಧೃತಿಷೇಣ ಎಂಬಿಬ್ಬರು ಮಕ್ಕಳು. ರತಿಷೇಣ ಅಕಾಲ ಮರಣಕ್ಕೀಡಾದನು. ಧೃತಿಷೇಣನಿಗೆ ಪಟ್ಟಕಟ್ಟಿ, ತನ್ನ ಮೈದುನ ಮಹಾರುತನಿಂದ ಬದುಕಿನ ಅನಿತ್ಯತೆಯನ್ನರಿತ ಜಯಸೇನ ಸನ್ಯಾಸವನ್ನು ಸ್ವೀಕರಿಸಿ ಮರಣ ಹೊಂದಿ ಆರಣವೆಂಬ ಹದಿನೈದನೆಯ ಕಲ್ಪದಲ್ಲಿ ಮಹಾಬಲದೇವನಾಗಿ ಹುಟ್ಟಿದನು. ಮಹಾರುತನು ಮಣಿಕೇತು ದೇವನಾಗಿ ಹುಟ್ಟಿದನು. ತಮ್ಮಿಬ್ಬರಲ್ಲಿ ಮಾನವ ಲೋಕಕ್ಕೆ ಮೊದಲು ಹೋಗುವವರನ್ನು ಇನ್ನೊಬ್ಬರು ಸಂಬೋಧಿಸಿ ವಿಷಯ ವಿಮುಖರನ್ನಾಗುವಂತೆ ಮಾಡಬೇಕೆಂಬ ಒಡಂಬಡಿಕೆ ಯೊಂದನ್ನು ಮಾಡಿಕೊಂಡರು. ಜಯಸೇನನು ಸುಭದ್ರವಿಜಯ ಸುವೇಲಾದೇವಿ ರಾಜರಾಣಿಯರಿಗೆ 'ಸಗರ'ನೆಂಬ ಪುತ್ರನಾಗಿ ಜನಿಸಿದನು. ಮಹಾ ಮಂಡಲೇಶ್ವರನಾದ ಈತ ತೊಂಬತ್ತು ಸಾವಿರ ಪತ್ನಿಯರೊಡನೆ ಮತ್ತು ಅರವತ್ತು ಸಾವಿರ ಪುತ್ರರೊಡನೆ ಸುಖ-ಸಂತೋಷಗಳ ಬದುಕನ್ನು ನಡೆಸುತ್ತಿದ್ದನು. ಒಮ್ಮೆ ಆತ ಶ್ರೀಭಟ್ಟಾರಕರೆಂಬ ಕೇವಲ ಜ್ಞಾನಿಗಳನ್ನು ಪೂಜಿಸಿದನು. ದೇವತೆಗಳೊಡನೆ ಅಲ್ಲಿಗೆ ಬಂದ ಮಣಿಕೇತು,

ಸಗರನೇ ತನ್ನ ಗೆಳೆಯನೆಂದರಿತನು. ಮಣಿಕೇತು ಒಡಂಬಡಿಕೆಯಂತೆ ಸಗರನಿಗೆ ಪ್ರತಿಬೋಧಿಸಿದನು; ಚಾರಣ ಋಷಿಯ ರೂಪದಲ್ಲಿ ದಿವ್ಯರೂಪವನ್ನು ತೋರಿಸಿದರೂ ಆತ ಲೋಕ ವಿಮುಖನಾಗಲಿಲ್ಲ! ಹಿಂದಿನ ಭವದಂತೆ ಪುತ್ರಶೋಕವೇ ಈತನ ವೈರಾಗ್ಯಕ್ಕೆ ಕಾರಣವಾಗುತ್ತದೆಂದರಿತ ಮಹಾರುತ ಸುಸಂದರ್ಭಕ್ಕಾಗಿ ಕಾಯುತ್ತಿದ್ದನು. ಭಗೀರಥನೆಂಬವನನ್ನುಳಿದು ಉಳಿದ ಮಕ್ಕಳೆಲ್ಲರನ್ನೂ ಕೈಲಾಸಪರ್ವತದ ಬಳಿ ವಿಷದೃಷ್ಟಿ ವಿಷೋರಗ ಮಾಯಾ ರೂಪದಿಂದ ಭಸ್ಮಮಾಡಿದನು. ಕಪಟವೇಷದ ಮಣಿಕೇತು ತನ್ನ ಸತ್ತಮಗನನ್ನು ಬದುಕಿಸುವಂತೆ ಬೇಡುತ್ತಾನೆ. ಯಾರೂ ಸಾಯದ ಮನೆಯಿಂದ ಬೆಂಕಿ ಮತ್ತು ಹುಲ್ಲನ್ನು ತಂದರೆ ಸತ್ತಮಗನನ್ನು ಬದುಕಿಸಬಹುದೆಂದು ಬುದ್ಧಿಸಾಗರನೆಂಬ ಪುರೋಹಿತ ಹೇಳಿದನು. ಮಣಿಕೇತು ಅಂತಹ ಮನೆ ಯಾವುದೂ ಇಲ್ಲವೆಂದನು. ಬುದ್ಧಿಸಾಗರ ಬದುಕಿನ ಅನಿತ್ಯತೆಯನ್ನರುಹಿದನು. ಸಗರನ ಮೋಹದ ಕಣ್ಣು ತೆರೆಯಿತು. ಭಗೀರಥನಿಗೆ ಪಟ್ಟಕಟ್ಟಿದ ನಂತರ ದೃಢ ಧರ್ಮರೆಂಬ ಕೇವಲಿಗಳೊಂದಿಗೆ ತಪೋನಿರತನಾದನು. ಮಣಿಕೇತು ಸತ್ತ ಮಕ್ಕಳನ್ನು ಬದುಕಿಸುವ ನಾಟಕ ಮಾಡಿದನು. ಮುಂದೆ ಮಕ್ಕಳೂ ತಪೋನಿರತರಾದರು; ಆಮೇಲೆ ಪರಮಗತಿಯನ್ನೈದಿದರು; ಭಗೀರಥನೂ ನಿರ್ವೇಗಪರನಾದನು; ವರದತ್ತನೆಂಬ ತನ್ನ, ಮಗನಿಗೆ ಪಟ್ಟವನ್ನು ಕಟ್ಟಿ ಶಿವಗುಪ್ತ ಮುಮುಕ್ಷುಗಳ ಬಳಿ ದೀಕ್ಷೆ ಪಡೆದು ಗಂಗಾತೀರದಲ್ಲಿ ಉಗ್ರ ತಪಸ್ಸನ್ನು ಆಚರಿಸಿ ಜ್ಞಾನೋದಯವನ್ನು ಪಡೆದನು. 'ಚತುರ್ವಿಧ ದೇವ ಸಮೂಹ ದುಗ್ಧಾಬ್ಧಿ ಜಲದಿಂದ ಭಗೀರಥ ಪಾದಾಭಿಷೇಕವನ್ನು ಮಾಡಿದಾಗ, ಆ ಜಲಪ್ರವಾಹ ಗಂಗಾನದಿಯನ್ನು ಸೇರಿ ಅದು ಜಗನ್ಮಂಗಳಕರ ವಾಯಿತು ! ಗಂಗೆ ಭಾಗೀರಥಿ ಎನಿಸಿಕೊಂಡಳು.

ಭಗೀರಥ ಸಗರ ರಾಜ – ವಿದರ್ಭ ರಾಜಕುಮಾರಿಯರ ಪುತ್ರನೆಂದು ಉತ್ತರ ಪುರಾಣದಲ್ಲಿ, ಹೇಳಿರುವ ವಿಚಾರ ರನ್ನನಲ್ಲಿಲ್ಲ. ಭಗೀರಥನಿಗೆ ವರದತ್ತನೆಂಬ ಮಗನಿದ್ದ ಎಂಬ ವಿಚಾರ ರನ್ನನಲ್ಲಿದೆ.

ಅಷ್ಟಾದಶವರ್ಣನೆಗಳಿಂದ ಇಡಿಕಿರಿದಿರುವ ಅಜಿತ ಪುರಾಣ ಮಹಾಕಾವ್ಯ ಧಾರ್ಮಿಕ–ನೈತಿಕ–ಸಿದ್ಧಾಂತಗಳ ವಿಚಾರಗಳು ಬಂದಾಗ ಸ್ವಲ್ಪ ಶುಷ್ಕವೆನ್ನಿಸಿದೂ ಒಟ್ಟಾರೆ ಒಂದು ರಸಘಟ್ಟಿಯನ್ನು ನಿರ್ಮಿಸಿದ್ದಾನೆ. ಅದಕ್ಕೆ ಸಗರ ಚಕ್ರವರ್ತಿಯ ಕಥೆಯೂ ಒಂದು ಮುಖ್ಯ ಕಾರಣವೆಂದರೆ ಅತಿಶಯೋಕ್ತಿಯೇನಲ್ಲ!

ಸಗರ ಜಗತ್ತನ್ನು ಗೆದ್ದು ಒಂದು ಪ್ರಶಸ್ತಿ ಬರೆಯಲು ಹೋದಾಗ ಆತನ ಗರ್ವ ಭಂಗವಾದದ್ದು, ಅವನ ಅಸಂಖ್ಯಾತ ಪುತ್ರರ ಅಹಂಕಾರ, ಸಾವಿನ ಸಾರ್ವತ್ರಿಕತೆ, ಮಾನವ ಮನಸ್ಸಿನ ಬಾಗಿಲನ್ನೇ ತೆರೆದು ತೋರುತ್ತವೆ. ಸಾವಿಲ್ಲದ ಮನೆಯ ಬೆಂಕಿ ಹುಲ್ಲಿನ ಕಥೆ ಬುದ್ಧನ ಸಾವಿಲ್ಲದ ಮನೆಯ ಸಾಸುವೆ ಕಾಳಿನ ಕಥೆಯನ್ನು ಸ್ಮರಿಸುತ್ತದೆ.[೨]

"ಕೆಲವು ವರ್ಣನೆಗಳನ್ನೂ ಸಿದ್ಧಾಂತದ ವಿವರಗಳನ್ನು ದಾಟಿಕೊಂಡು ಹೋದರೂ ಸಂಸಾರದ ಸುಖ–ದುಃಖಗಳನ್ನು . ಕಷ್ಟ–ನಷ್ಟಗಳನ್ನು ಗೆದ್ದು ಅದರಿಂದ ಬಿಡುಗಡೆ

ಹೊಂದುವ ಮಾನವ ಗೈಮೆಯ ಮಹಾಯತ್ನವನ್ನು ಚಿತ್ರಿಸುವ ಅಜಿತಪುರಾಣ ರನ್ನನ ವಾಗ್ವೈಭವದಿಂದ ಸಹೃದಯರಿಗೆ ಹಿತವನ್ನಿಸುತ್ತದೆ" ಎಂಬ ಹೆಚ್.ಎಂ. ಶಂಕರ ನಾರಾಯಣರಾವ್ ಅವರ ಮಾತು ಉಚಿತವಾಗಿದೆ.

ಸಗರ ಚಕ್ರವರ್ತಿಯ ಕಥೆಯಲ್ಲಿ ರನ್ನ ಸೋಪಜ್ಞತೆಯನ್ನು ಮೆರೆದಿರುವ ಬಗೆಗೆ ಒಂದೆರಡು ನಿದರ್ಶನಗಳನ್ನು ನೋಡಬಹುದು.

೧) ಸಗರ ಪತ್ನಿಯರ ಪುತ್ರಶೋಕದ ವರ್ಣನೆ

ಉಪಮೆ-ರೂಪಕ-ಸ್ವಭಾವೋಕ್ತಿ ಅಲಂಕಾರಗಳ ಮೂಲಕ ರನ್ನ ಕಲ್ಲು ಹೃದಯಿಗಳನ್ನೂ ಹೇಗೆ ಕರಗಿಸಬಲ್ಲ ಎಂಬುದಕ್ಕೆ ಕೆಳಗಿನ ಪದ್ಯಗಳು ನಿದರ್ಶನವಾಗಿವೆ:

"ಎಲ್ಲಿತ್ತೋ ಚಕ್ರರತ್ನಮ
'ದೆಲ್ಲಿತ್ತಸಿರತ್ನಮಶ್ವಗಜರತ್ನಂತಾ
ಮೆಲ್ಲಿತ್ತವೋಯ್ತೊ ಜಗತೀ
ವಲ್ಲಭ ನಿಜ ಸುತರನುಱದೆ ಜವನುಯ್ವಾಗಳ್" (೧೦-೩೭)

"ಉರಿದಟಿದಪ್ಪುದು ಎಮ್ಮಯ
ಶರೀರಮೋವೆಮ್ಮ ಪುತ್ರಶೋಕಾನಲನಿಂ
ನರಪಾಲ ಮತ್ತಮನಲಾಂ
ತರಮೇವುದೊ ದಗ್ಧವಾರಿಯೆಂಬುದುಮುಂಟೆ" (೧೦-೩೯)

"ಕುಡುವುದು ಕಿಚ್ಚಂ, ದೇವರ್
ತಡೆಯದೆ ಕತ್ತಿಗೆಯನೆಮಗೆ ಬೆಸಸುವುದಿನ್ನೇಂ
ಪಡೆಮಾತೊ, ತನಯರಿಲ್ಲದೆ,
ತಡೆದಿರ್ದಪ್ಪುದು ತಕ್ಕುದಲ್ತು ಭುವನಾಧಿಪತೀ" (೧೦-೪೦)

ಪ್ರತಿಕ್ರಿಯೆ ಸೂಚಿಸಿದ ಸಗರನನ್ನು ಕುರಿತು ಜನರು "ಇವನೆಂತಹ ನಿಷ್ಕರುಣಿ, ಇವನು ಕಲ್ಲು; ಮರದಂತಿದ್ದಾನೆ" ಎಂದು ನುಡಿಯುತ್ತಾರೆ. ಸಗರನ ಪುತ್ರ ಶೋಕ ಲೋಕಕ್ಕೆ ತಿಳಿಸಲು ಬುದ್ಧಿಸಾಗರನು ಸಗರನ ತಲೆಯ ಮೇಲೆ ಬಿಳಿಯ ಸಾಸುವೆ ಕಾಳನ್ನು ಹಾಕುತ್ತಾನೆ. ಆಗ ಅವು ಕಾದ ಕೊಪ್ಪರಿಗೆಯ ಮೇಲೆ ಬಿದ್ದ ಅರಳುಗಳಂತೆ ದಿಕ್ಕು ದಿಕ್ಕಿಗೆ ಚಿಳಿಲ್ ಚಿಳಿಲ್ ಎಂದು ಹಾರುತ್ತವೆ(ಈ ವಿವರ ಮೂಲ ಕಥೆಯಲ್ಲಿಲ್ಲ). ಮಹಾಸತ್ತ್ವ ಶಾಲಿಯೂ ಧೈರ್ಯವಂತನೂ ಆದ ಸಗರನು ಪುತ್ರಶೋಕವನ್ನು ಹೇಗೆ ನುಂಗಿಕೊಂಡಿದ್ದ ನೆಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ. (೨) ಅರವತ್ತು ಸಾವಿರ ಮಕ್ಕಳ ಸಾವಿನ ಸುದ್ದಿಯನ್ನು ಕೇಳಿದ ಸಗರನ ಪ್ರತಿಕ್ರಿಯೆ ದೇಸಿಯ ಸುಂದರ ಮಾದರಿಯಂತಿದೆ. "ಸಂಸಾರಿ ಜೀವಂಗಳ್ ಅಂದೆ ಪುಟ್ಟಿದರ್, ಅಂದೆ ಸತ್ತರ್, ನುಡಿ ಇದೇಂ ಚೋದ್ಯಂ?"

ಮೂಲಕಥೆಯಲ್ಲಿ ಸಗರನಿಗೆ, ಜಯಸೇನನಾಗಿದ್ದ ಭವದಲ್ಲಿ ಅವನ ಪುತ್ರ ರತಿಷೇಣನ ಅಕಾಲ ಮೃತ್ಯುವಿನಿಂದ ವಿಷಯ ವಿಮುಖತೆ ಪ್ರಾಪ್ತವಾಗುತ್ತದೆಂದು ಹೇಳಿರುವುದನ್ನು ರನ್ನ, ರಾಜನ ಮೈದುನನ್ನು ಮಹಾರುತ ಉಪದೇಶಿಸಿದ ನಂತರ ಜಯಸೇನನಿಗೆ ವೈರಾಗ್ಯವುಂಟಾಗುತ್ತದೆಂದು ಹೇಳಿರುವುದು ಸಂದರ್ಭೋಚಿತ ವಾಗಿದೆ. ಜಯಸೇನನನ್ನು ಗಾಢಪುತ್ರ ಪ್ರೀತಿ ಜೀವನ ಪ್ರೀತಿಗಳ ಬಂಧನದಿಂದ ಬಿಡಿಸಲು ಈ ಬಗೆಯ ಚಿತ್ರಣ ಉಚಿತವೆನಿಸುತ್ತದೆ.

ಧರ್ಮೋಪದೇಶವಾದ ತಕ್ಷಣ 'ಈ ನಿನ್ನ ಪೇಳ್ದ ಧರ್ಮಮಿದೇನೆನಗೆಯೊ ನಿನಗುಮುಂಟೊ' ಎಂದು ಮಣಿಕೇತು ಕೇಳಿದಾಗ, ಬುದ್ಧಿಸಾಗರ ಉತ್ತರಕೊಡದೆ, ಸಗರ 'ಎನಗದು ಮುನ್ನಂ' ಎಂದು ಉತ್ತರಿಸುವುದು ದೇಸಿ ಹಾಗೂ ನಾಟಕೀಯತೆಯ ಸೊಗಡಿನಿಂದ ಕೂಡಿದ್ದರೂ ಮೂಲದ ಬದಲಾವಣೆ ಅಷ್ಟು ಹಿತಕಾರಿಯಾಗಿಲ್ಲ.

ರಾಮಾಯಣ, ಮಹಾಭಾರತ, ಭಾಗವತ ಮತ್ತು ವಿಷ್ಣು ಪುರಾಣಗಳಲ್ಲಿ ವೈದಿಕ ರೀತಿಯ ಸಗರನ ಕಥೆ ಬರುತ್ತದೆ. ಅದನ್ನು ಜೈನ ಪುರಾಣಗಳು ಕೆಲವು ಮಾರ್ಪಾಟು ಗಳೊಂದಿಗೆ ಸ್ವೀಕರಿಸಿವೆ; ಅವುಗಳಲ್ಲಿ ಮುಖ್ಯವಾದವು ಎರಡು ಮಾರ್ಪಾಟುಗಳು ಎಂದರೆ:

(ಅ) ಸಗರಪುತ್ರರು ಭಸ್ಮೀಭೂತರಾಗಲಿಲ್ಲ

(ಆ) ಭಗೀರಥ ಗಂಗೆಯನ್ನು ಸ್ವರ್ಗದಿಂದ ತರಲಿಲ್ಲ ಎಂಬವು.

"ಪಂಪನ ಆದಿಪುರಾಣದಲ್ಲಿರುವಂತೆ ಭವಾವಳಿಗಳ ಭವ್ಯಚಿತ್ರವಿಲ್ಲಿ ಇಲ್ಲದೆ ಇರುವುದರಿಂದಲೇ ತೀರ್ಥಂಕರನಾಗಲಿರುವ ಜೀವಿಯ ಬದುಕಿನ ಏಳು-ಬೀಳುಗಳ, ರಾಗ-ದ್ವೇಷಗಳ ಚಿತ್ರವಿಲ್ಲದಂತಾಗಿದೆ" ಎಂದು ವಿಮರ್ಶಕರು ಹೇಳಿರುವುದು ಕೆಲಮಟ್ಟಿಗೆ ನಿಜ.

ಅತ್ತಿಮಬ್ಬೆಯ ಚರಿತೆ

ತನ್ನ ಆಶ್ರಯದಾತೆ ದಾನ ಚಿಂತಾಮಣಿ, ಜಿನಧರ್ಮ ಪತಾಕೆ, ಚಕ್ರವರ್ತಿ ಪೂಜಿತೆ, ಕವಿವರ ಕಾಮಧೇನು, ವತಿನಾತಿಲಕಳಾದ ಅತ್ತಿಮಬ್ಬೆಯನ್ನು ರನ್ನ ಮನದುಂಬಿ ಹೊಗಳಿದ್ದಾನೆ. ಅಜಿತಪುರಾಣದ ಪ್ರಾರಂಭ ಭಾಗ ಹಾಗೂ ಅಂತ್ಯಭಾಗ ತುಂಬ ರಸೋತ್ಕಟವಾದವು ಎಂಬ ವಿಚಾರವಂತಿರಲಿ; ರನ್ನ ಈ ಭಾಗಗಳಲ್ಲಿ ತುಂಬ ಮೌಲಿಕವಾದ ಐತಿಹಾಸಿಕ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಆರ್ಥಿಕ ವಿಚಾರಗಳನ್ನು ಪ್ರಸ್ತಾಪಿಸಿದ್ದಾನೆ.

ಅತ್ತಿಮಬ್ಬೆಯ ತವರಿನಮನೆಯ ವೈಭವವನ್ನೂ ಮಾವನ ಮನೆಯ ವೈಭವವನ್ನೂ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ. ಎರಡು ಮನೆತನದವರೂ ಸ್ವಾಮಿ ಭಕ್ತರು, ರಣವೀರರು, ಶಸ್ತ್ರ-ಶಾಸ್ತ್ರ ಕೋವಿದರು, ಕವಿಪೋಷಕರು, ಧರ್ಮವೀರರು, ಜಿನ ಭಕ್ತರು.

‘ಅತ್ತಿಮಬ್ಬೆಯ ಚರಿತೆ’[೧೩] ಅಜಿತಪುರಾಣದೊಳಗೆ ಒಂದು ಪುಟ್ಟ ಕಾವ್ಯದಂತೆ ಸೇರಿಕೊಂಡಿದೆ. ಆಕೆಯ ಜೈನಧರ್ಮನಿಷ್ಠೆ, ವ್ರತಾಚರಣೆ, ದಾನ–ಔದಾರ್ಯಗುಣಗಳು, ಪವಿತ್ರ ಬದುಕು[೧೪] ಸೊಗಸಾಗಿ ಚಿತ್ರಿತವಾಗಿವೆ[೧೫] ಅತ್ತಿಮಬ್ಬೆಯ ಗುಣಗಾನ ಮಾಡುವ ಪದ್ಯಗಳು ಭಾವಗೀತೆಯ ಸುಂದರ ಮಾದರಿಗಳಂತಿವೆ, ಆಕೆಯ ಸದ್ಗುಣಗಳು ಸರ್ವಧರ್ಮೀಯರಿಂದಲೂ ಸ್ತುತಿಸಲ್ಪಡುವಂಥವು. ಆಕೆಯ ಬಗ್ಗೆ ರನ್ನನಿಗೆ ಎಷ್ಟು ಗೌರವವೆಂದರೆ ಅವನು ತನ್ನ ಮಗಳಿಗೆ ‘ಅತ್ತಿಮಬ್ಬೆ’ ಎಂದು ಹೆಸರಿಟ್ಟಿದ್ದನು.

ಪತಿ ಮಡಿದಾಗ ಸಹೋದರಿ ಗುಂಡುಮಬ್ಬೆ ಸಹಗಮನ ಮಾಡಿದಳು. ಪುಟ್ಟ ಕಂದ ಅಣ್ಣಿಗನ ಆರೈಕೆಯಲ್ಲಿ ಅತ್ತಿಮಬ್ಬೆ ನಿಲ್ಲಬೇಕಾಯಿತು. ಮಹಾಭಾರತದ ಪಾಂಡು ಮಾದ್ರಿಕುಂತಿಯರ ವಿಚಾರ ಚಾರಿತ್ರಿಕವಾಗಿ ಎಷ್ಟು ಸತ್ಯವೋ ಗೊತ್ತಿಲ್ಲ. ಆದರೆ ರನ್ನ ಚಾರಿತ್ರಿಕ ಸತ್ಯವೊಂದನ್ನು ಅರುಹುತ್ತಿದ್ದಾನೆ. ಮಾದ್ರಿಯಂತೆ ಗುಂಡುಮಬ್ಬೆ ಸತಿಯಾದರೆ, ಕುಂತಿಯಂತೆ ಅತ್ತಿಮಬ್ಬೆ ಮಗುವಿನ ಆರೈಕೆಗಾಗಿ ಉಳಿಯುತ್ತಾಳೆ.

ಪ್ರತಿ ಆಶ್ವಾಸದ ಅಂತ್ಯದಲ್ಲಿ ರನ್ನ ಅತ್ತಿಮಬ್ಬೆಯನ್ನು ಸ್ತುತಿಸುವುದರ ಮೂಲಕ ಕೃತಿಯಾದ ಅಜಿತ ಪುರಾಣವನ್ನು ಆಕೆಗೆ ಅಂಕಿತವನ್ನಾಗಿ ಮಾಡಿದ್ದಾನೆ. ಅತ್ತಿಮಬ್ಬೆಯ ತಂದೆ ಮಲ್ಲಪನೂ ಚಿಕ್ಕಪ್ಪ ಪೊನ್ನಮಯ್ಯನೂ ಈಗಾಗಲೇ ಪೊನ್ನನಿಂದ ಶಾಂತಿ ಪುರಾಣವನ್ನು ಬರೆಸಿ ಕೃತಕೃತ್ಯರಾಗಿದ್ದರು:

“ಪೊನ್ನಿಗನಿಂ ಮಲ್ಲಪನುಂ
ಪೊನ್ನನುಮಟ್ಟಿಯೆ ಪುರಾಣ ಚೂಡಾಮಣಿಯಂ
ಮುನ್ನಂ ಪೇಟಿಸಿದಂತೆ ಗು
ಣೋನ್ನತ ಕವಿರತ್ನನಿಂದದಂ ಪೇಟಿಸಿದಳ್”(೧–೭೭)

“ಜಿನಶಾಸನ ದೀಪಿಕೆಯೆನಿಸಿದಲ್ತೆ ಮಬ್ಬೆಗೆಣೆಯೆಲ್ಲೀ ಕಾಲದೊಳ್” ಎಂಬ ಉದ್ಗಾರ ತೆಗೆದಿದ್ದಾನೆ ರನ್ನ. ಪೊನ್ನನ ಶಾಂತಿಪುರಾಣದ ಒಂದು ಸಾವಿರ ಪ್ರತಿಗಳನ್ನು ಮಾಡಿಸಿ ಹಂಚಿದಳಂತೆ[೧೬] ಎಷ್ಟು ಪ್ರತಿಕಾರರಿಗೆ ಕೆಲಸಸಿಕ್ಕಿರಬೇಕು ! ಅತ್ತಿಮಬ್ಬೆ ಮಾಡಿಸಿದಂತೆ ನಮ್ಮ ಹಳಗನ್ನಡ ಕಾವ್ಯಗಳನ್ನು ಒಂದಷ್ಟು ಪ್ರತಿ ಮಾಡಿಸಿಟ್ಟಿದ್ದರೆ ಎಷ್ಟು ಉಪಕಾರವಾಗುತ್ತಿತ್ತು.[೧೭]

ಅತ್ತಿಮಬ್ಬೆ ಮುಂದಿನ ಬದುಕನ್ನು ಹೇಗೆ ಕಳೆದಳು? ಒಂದೊಂದು ಪದ್ಯವೂ ಆಕೆಯ ಮಹೋನ್ನತಗುಣವನ್ನು ದಾಖಲಿಸುತ್ತದೆ: ಪತಿಯಸಾವು–ಸಹೋದರಿಯ ಸಹಗಮನದಂಥ ಆಘಾತಗಳು ಅತ್ತಿಮಬ್ಬೆಯ ಮನಸ್ಸನ್ನು ವೈರಾಗ್ಯದತ್ತ ಮಬ್ಬೆಯ ಮನಸ್ಸನ್ನು ಸೆಳೆದಿದ್ದು ಸಹಜವಾಗಿದೆ.:

“ಒಡಲನುಪವಾಸದಿಂತ
ನ್ನೊಡಮೆಯನನವರತ ದಾನದಿಂತವಿಸಿಜಸಂ
ಬಡೆದಳ್ ನೂರ್ಮಡಿ ತೈಲನ
ಪಡೆವಳ ತೈಲಪನ ಜನನಿಗೆಣೆ ಪೆಜರೊಳರೇ”[೧೮](೧.೫೧)

"ಬುಧಜನವಂದಿತೆ ಧರ್ಮ
ಪ್ರಧಾನೆ ದರ್ಶನ ವಿಶುದ್ಧೆ ದಾನಗುಣೈಕಾಂ
ಬುಧಿಯೆನಿಸಿದ ಕವಿವರ ಕಾ
ಮಧೇನು ವೆಂದಂಬುದತ್ತಿಬ್ಬೆಯನೆ ಜಗಂ"

ಜಿನಶಾಸನ ದೀಪಿಕೆ, ಆಸನ್ನಭವ್ಯೆಯಾದ ಅತ್ತಿಮಬ್ಬೆ (ಶಾಸ್ತ್ರಾನುಸಾರ ಒಂದು ಸಾವಿರ ಜಿನ ಪ್ರತಿಮೆಗಳನ್ನು ಮಾಡಿಸುವ ಬದಲು) ಒಂದು ಸಾವಿರದೈನೂರು ಜಿನಪ್ರತಿಮೆಗಳನ್ನು ಮಣಿಕನಕಗಳಿಂದ ಮಾಡಿಸಿ ಭಕ್ತಾದಿಗಳಿಗೆ ಹಂಚಿ ತನ್ನ ಜೈನ ಧರ್ಮದ ನಿಷ್ಠೆಯನ್ನೂ ದಾನಗುನವನ್ನೂ ಪ್ರದರ್ಶಿಸಿದಳು. 'ಆಕೆ ಧರ್ಮ ವಿರೋಧಿಗಳಿಗೆ ಖಡ್ಗಲತೆ; ಧರ್ಮಪರರಿಗೆ ಕಲ್ಪಲತೆಯಾಗಿದ್ದಳು.

"ಕಲಿಯನೆ ನೆಗಟ್ದಿಳ್ ಕಸವರ
ಗಲಿಯೆನೆ ಗುಣದಂಕಕಾರ್ತಿ ಮೊನೆಯೊಳ್‌ಮನೆಯೊಳ್
ಮೊಲೆವೊತ್ತ ತೈಲಜನನಿಯ
ಕೆಲದೊಳ್ ರಂಜಿಪರೆ ಮೀಸೆವೊತ್ತಂಣ್ಣಂಗಳ್" (೧-೬೫)

"ಅಳುರದು ಕಿರ್ಚುಮುಟ್ಟದು ವಿಷಾಹಿ ಮಹಾಸತಿಯಿರ್ದಮಂಡಲಂ
ಬೆಳೆವುದು ಬೇಡಿದಂತೆ ಮಟಿಕೊಳ್ವುದೆನಿಪ್ಪ ಜನಕ್ಕೆ ನೋಂತ ಭೂ
ತಿಲಕಪವಿತ್ರೆಯಂ ಗುಣ ಪವಿತ್ರೆಯನಾಸತಿಯಂ ಮಹಾಸತೀ ಭೂ
ತಿಲಕೆಯನತ್ತಿಮಬ್ಬರಿಸಿಯಂಪೆಸರ್ಗೊಳ್ವುದು ಪುಣ್ಯಕಾರಣಂ"

ಆಕೆಯನ್ನು ಸ್ಮರಿಸಿಕೊಂಡರೆ ಸಾಕು ಶುಭಗಳ ಸಂತೆಯೇ ನೆರೆಯುತ್ತದೆ. (೧.೭೫)

"ಬಿಳಿಯರಳೆಯಂತೆ, ಗಂಗಾ
ಜಳದಂತೆಸೆವಜಿತಸೇನ ಮುನಿಪತಿಯ ಗುಣಾ
ವಳಿಯಂತೆ, ನೆಗಟ್ದ ಕೊಪಣಾ
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ" (೧೨-೬)

ಮೇಲಿನ ಕವಿತೆಯ ನಾಲ್ಕು ಉಪಮೆಗಳಲ್ಲಿ 'ಬಿಳಿಯರಳೆಯಂತೆ' ಎಂಬ ಉಪಮೆ ಆಕೆಯ ಧರ್ಮಧವಳ ಚಿತ್ರವನ್ನು ಕೊಡುತ್ತದೆ. [೨೦]

"ಉನ್ನತ ಕುಕ್ಕುಟೇಶ್ವರ ಜಿನೇಶ್ವರನಂ, ಜಿನಭಕ್ತೆವೋಗಿ ಕಾ-
ಣ್ಬನ್ನೆಗಮನ್ನಮಂ ಬಿಸುಟು ಪರ್ವತಮಂ ಪರಿದೇಜಿ. ತಜ್ಜಿನಾ
ಸನ್ನದೊಳತ್ತಿಮಬ್ಬೆಗೆ ಪಥಶ್ರಮಮಾದುದಕಾಲವೃಷಿಯಾ
ಯ್ತೆನ್ನದೊ ದೇವಭಕ್ತಿಗದು ಚೋದ್ಯಮೆ. ಕೊಳ್ಳವೆ ಪುಷ್ಪವೃಷ್ಟಿಗಳ್" (೧-೬೦)

ಅತ್ತಿಮಬ್ಬೆಯ ಕಾಲ ಉತ್ಸರ್ಪಿಣಿಯಕಾಲ. ಆಕೆ ಜಿನದರ್ಶನಾಕಾಂಕ್ಷಿಯಾಗಿ ಶ್ರವಣಬೆಳಗೊಳಕ್ಕೆ ಆಗಮಿಸಿದಾಗ. ಬೆಟ್ಟ ಹತ್ತುವಾಗ ಆಕೆಯ ಬಳಲಿಕೆಯನ್ನು ನೀಗಲು ಅಕಾಲವೃಷ್ಟಿಯಾಯಿತು ಎಂಬ ಮೇಲಿನ ಸುಂದರ ಚಿತ್ರದಲ್ಲಿ ಆಕೆಯ ಜಿನಭಕ್ತಿಯ ಆಧಿಕ್ಯ ತುಂಬಿದೆ.

ಹೀಗೆ ರನ್ನ ಒಬ್ಬ ಐತಿಹಾಸಿಕ ವ್ಯಕ್ತಿಯನ್ನು ವರ್ಣಿಸುತ್ತಿದ್ದಾನೆಯೇ ಹೊರತು ಪೌರಾಣಿಕ ಇಲ್ಲವೆ ಕಾಲ್ಪನಿಕ ವ್ಯಕ್ತಿಯನ್ನು ವರ್ಣಿಸುತ್ತಿಲ್ಲ. ಆ ದೃಷ್ಟಿಯಿಂದ "ಇದು ಸತ್ತವರ ಕಥೆಯಲ್ಲ, ಕಾಳಗದ ಕಥೆಯಲ್ಲ", ಇಲ್ಲಿ ಮುಖ್ಯವಾಗಿ ನಾವು ಗಮನಿಸ ಬೇಕಾದದ್ದು; ನಮ್ಮ ಹಳಗನ್ನಡ ಕವಿಗಳು ಮಾಡಿರುವ ಸಾಂಪ್ರದಾಯಿಕ ಹೆಣ್ಣಿನ ವರ್ಣನೆಯ ರೀತಿ ಇಲ್ಲಿ ಇಲ್ಲ. ರನ್ನನ ಅಜಿತಪುರಾಣದ ಪುಟ ಪುಟಗಳಲ್ಲಿಯೂ ಈಗೆ ಹುದುಗಿರುವುದರಿಂದ ಕಾವ್ಯದಿಂದ ಈಕೆಯನ್ನು ಬೇರ್ಪಡಿಸಲು ಸಾಧ್ಯವೇ ಇಲ್ಲ.

ಶೈಲಿ-ಕುಕವಿ-ಸತ್ಕವಿ-ಆತ್ಮಪ್ರತ್ಯಯಗಳ ಬಗ್ಗೆ ರನ್ನನ ವಿಚಾರಗಳು

ಅಜಿತನಾಥ ಪುರಾಣದಲ್ಲಿ ಬರುವ ರನ್ನನ ಕೆಲವು ಕವಿತೆಗಳು ಕಾವ್ಯಮೀಮಾಂಸೆ -ಸಾಹಿತ್ಯ ವಿಮರ್ಶೆಯ ಬಗೆಗೆ ಕೆಲವು ವಿವರಗಳನ್ನು ನೀಡುತ್ತವೆ. ಅಷ್ಟೇ ಅಲ್ಲ, ಅವನ ವೈಯಕ್ತಿಕ ವಿವರಗಳು ಐತಿಹಾಸಿಕ ಮಹತ್ವದಿಂದ ಕೂಡಿವೆ ಎಂಬುದನ್ನು ಗಮನಿಸ ಬೇಕು. ಆತ್ಮ ಪ್ರತ್ಯಯಕ್ಕೆ ಸಂಬಂಧಿಸಿದ ಕೆಲವು ಮಾತುಗಳು ಅತಿ ಎನಿಸುತ್ತದೆ. ಇದು ಗದಾಯುದ್ಧದ ಮಟ್ಟಿಗೆ ನಿಜವೇ ಹೊರತು ಅಜಿತ ಪುರಾಣದ ಮಟ್ಟಿಗೆ ನಿಜವಲ್ಲ.

"ಕವಿ ಮಾರ್ಗದೊಳ್ ಬಳ್ಳಪೊಕ್ಕುಂ
ನವರಸಮಂ ತೆಱೆಯೆನುಡಿದಂ ಎನಿಸಿದ ಕವಿಸ
ತ್ಕವಿಯೆನಿಸುಗುಂ, ಗೂಡಾರದ
ಕವಿಯಂತಿರೆ ಮುಚ್ಚಿ ಪೋದ-ಕವಿಯುಂ ಕವಿಯೇ" (೧-೮೬)

ನವರಸಗಳನ್ನು ತೆರೆದು ತೋರಿಸುವವನು ಸತ್ಕವಿ; ರಸಭಾವಗಳ ನಿರೂಪಣೆಯಲ್ಲಿ ಅಸ್ಪಷ್ಟತೆ ತರುವವನು, 'ಗೂಡಾರದ ಕವಿ'; 'ಮುಚ್ಚಿಪೋದಕವಿ; ಕವಿಯೇ ಅಲ್ಲ. ಮುಚ್ಚಿ ನುಡಿಯುವ, ನಿರರ್ಥಕಪದಬಾಹುಳ್ಯದಿಂದ ಕೂಡಿದ ಕಾವ್ಯದಿಂದೇನು ಪ್ರಯೋಜನ ? ಪದಬಳಕೆ 'ರಸಾಂತರಂಗಳಂ ಮುಟ್ಟಿ' ನುಡಿದಂತಿರಬೇಕು. ಆ ಮುಖಾಂತರ ಸಹೃದಯರನ್ನು ರಂಜಿಸಬೇಕು.

ಅರ್ಥಕ್ಕಾಗಿ ಕುದಿದು ಶಬ್ದ ಪುಂಜಗಳನ್ನು ಬಳಸುವುದೆಂದರೆ ಅಬಲೆಯಾದ 'ಸರಸ್ವತಿಯ ಗೋಣ್ಮುರಿದಂತೆ', ಅಂತಹವರು ಅಕ್ಕರಿಗರಲ್ಲ; ಪಾತಕರು; ಸರಸ್ವತೀ ದ್ರೋಹರು.

"ಸರಸತಿಯಂ ಅಬಲೆಯಂಗೋ
ಣ್ಮುರಿಗೊಂಡರ್ಥಕ್ಕೆ ಕುದಿದು ನೋಯಿಸುವವಂ ಅ
ಕ್ಕರಿಗನೆ ಪಾತಕಂ ಆತನೆ
ಸರಸ್ವತೀ ದ್ರೋಹಂ ಅವನಂ ಆರ್ ಮುಟ್ಟುವರೋ" (೧-೮೯)

"ಕಾವ್ಯಂಗಳೊಳ್ ಗುಣಮಂ ಬೈಯ್ತಿಡಬೇಡ, ನಿಲ್ವೊಡೆ ಗುಣಂ ನಿಲ್ಕುಂ, ಪಣಂ ನಿಲ್ಕುಮೇ" (೧-೯೧)

"ಎನಿತು ಒಳವು ಮನದ ಸಂದೆಯ
ಮ್, ಅನಿತುಂ ಅಸಂದಿಗ್ಧಂ ಎನಿಸುಗುಂ, ಧರ್ಮದೊಳ್

ಅಪ್ಪ ಅನುರಾಗಮೊದವುಗುಂ, ರ
ತ್ನನ ಪೇಟ್ದಜಿತನ ಪುರಾಣಮಂ ಕೇಳಲೊಡಂ" (೧೨-೩೨)

ಮನಸ್ಸಿನ ಸಂದೇಹಗಳೆಲ್ಲ ದೂರವಾಗುವಂತೆ ಜೈನಧರ್ಮದ ವಿಷಯವನ್ನು ಸಂದಿಗ್ಧತೆಗೆ ಎಡೆಯಿಲ್ಲದಂತೆ ಅಜಿತಪುರಾಣದಲ್ಲಿ ನಿರೂಪಿಸಿದ್ದೇನೆಂದು ಅತಿಯಾದ ಆತ್ಮವಿಶ್ವಾಸದಿಂದ ರನ್ನ ಹೇಳಿಕೊಂಡಿದ್ದಾನೆ.

ರೌದ್ರ ವೀರರಸ ಚಿತ್ರಣದ ಗದಾಯುದ್ಧದ ಪದ್ಯಗಳ ರಚನೆಗೂ ಶಾಂತರಸದ ವಿಭಿನ್ನ ಸನ್ನಿವೇಶಗಳನ್ನೊಳಗೊಂಡ ಅಜಿತಪುರಾಣದ ಪದ್ಯಗಳ ರಚನೆಗೂ ವ್ಯತ್ಯಾಸಗಳಿವೆ. ರನ್ನ ಕುಶಲ ಕವಿ ಎನ್ನಲು ಕೆಳಗಿನ ಪದ್ಯ ನಿದರ್ಶನ.

"ಬಡವರ ಬಂಟನಾವೆಡೆ, ದಯಾಪರನಾವೆಡೆ, ಧರ್ಮ ಚಿತ್ತ ನಾ
ವೆಡೆ, ಶುಭವೃತ್ತನಾವೆಡೆ, ಮಹೋದಯನಾವೆಡೆ, ಪುಣ್ಯ ಭಾಜನಾ
ವೆಡೆ, ಜನನಾಥನಾವೆಡೆ, ಶುಭಾಕರನಾವೆಡೆ, ಸತ್ಯವಾಕ್ಯ ನಾ
ವೆಡೆ, ಗುಣಸಿಂಧುವಾವೆಡೆ, ಮನೋರಮನಾವೆಡೆ, ಪೇಟಿಲಾಗದೇ (೬-೧೨೦)

ಅಜಿತನಾಥ ವೈರಾಗ್ಯಪರನಾಗಿ ಸಂಸಾರವನ್ನು ತ್ಯಜಿಸಿ ಹೋಗುವಾಗ ಅರಮನೆಯ ಸ್ತ್ರೀಯರು ಪ್ರಲಾಪಿಸುವ ಈ ಪದ್ಯ ಕರಣರಸದ ಮಡುವೊಂದನ್ನು ನಿರ್ಮಿಸಿದೆ. ಇಂಥ ಅನೇಕ ಪದ್ಯಗಳಲ್ಲಿ ರನ್ನನ ಕಾವ್ಯಮೀಮಾಂಸೆಯ ತತ್ತ್ವಗಳನ್ನು ಗುರುತಿಸಬಹುದು. ರನ್ನನ ದೇಸೀ ಶೈಲಿಗೆ ಕಳೆಕಟ್ಟುವಂಥ ಪದ್ಯಗಳಿಲ್ಲಿ ಸಾಕಷ್ಟಿವೆ.

"ಈ ನಿನ್ನ ಪೇಟ್ದಧರ್ಮಮಿ
ದೇನೆನಗೆಯೊ ನಿನಗುಮುಂಟೊ ನಿನಗುಳ್ಳೊಡದಂ
ನೀನಜಿಪುವುದೆನೆ ದರಹಸಿ
ತಾನನಯೆಂದಂ ನರೇಂದ್ರನೆನಗದು ಮುನ್ನಂ" (೧೦-೩೧)

ರನ್ನ ಕೆಲವು ಪದ್ಯಗಳಲ್ಲಿ ತನ್ನ ಕವಿತಾ ಶಕ್ತಿಯನ್ನು ಉಪಮಾತೀತವಾದ ರೀತಿಯಲ್ಲಿ ಹೊಗಳಿಕೊಂಡಿರುವುದುಂಟು:

"ವಸುಧೆಯೊಳಗೊಂದು ರತ್ನಮಿ
ದೆಸೆದಿರ್ದುದು ಪಲವು ರನ್ನಮಿಲ್ಲೆಂಬಿನಮೇಂ
ಮಸುಳಿಸಿದನೊ" ಬಹುರತ್ನಾ
ವಸುಂಧರಾ"ಯೆಂಬ ವಾಕ್ಯಮಂ, ಕವಿರತ್ನಂ" (೧-೮೩)

ರನ್ನನ ಈ ಆರ್ಭಟ 'ಗದಾಯುದ್ಧದಲ್ಲಿ ಇನ್ನೂ ಹೆಚ್ಚಾಗಿದೆ. ಗದಾಯುದ್ಧದ ವಿಷಯಕ್ಕೆ ಈ ಮಾತು ಸಲ್ಲುತ್ತದೆ, ಆದರೆ ಅಜಿತ ಪುರಾಣದ ವಿಷಯದಲ್ಲಿ ಇದು ಅಹಂಕಾರದ ಮಾತಾಗುತ್ತದೆ ಎಂದು ವಿಮರ್ಶಕರು ನುಡಿದಿರುವುದರಲ್ಲಿ ಸತ್ಯಾಂಶವಿದೆ.

ಅಜಿತಪುರಾಣದಲ್ಲಿ ರನ್ನ ತನ್ನ ಬಗ್ಗೆ ನೀಡಿರುವ ವಿವರಗಳು ಐತಿಹಾಸಿಕ ಮಹತ್ವವನ್ನು ಪಡೆಯುತ್ತವೆಂಬುದನ್ನಾಗಲೇ ಹೇಳಿದೆ.

ಪಂಪನ ಆದಿಪುರಾಣವನ್ನು ಮೆಚ್ಚಿಕೊಂಡ ರನ್ನ ವಿಕ್ರಮಾರ್ಜುನ ವಿಜಯದಿಂದ ಸ್ಫೂರ್ತಿ ಪಡೆದಿದ್ದರೂ ಆ ಬಗ್ಗೆ ಒಂದು ಮಾತನ್ನೂ ಏಕೆ ಹೇಳಿಲ್ಲ ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

ರನ್ನ ಉಭಯಭಾಷಾವಿಶಾರದ, ವ್ಯಾಕರಣ ಪಂಡಿತ.[೨೧] ಬಳೆಗಾರ ಕುಲದವನು, ನಾಲ್ವರ ಬಳಿ ಆಶ್ರಯ ಪಡೆದಿದ್ದನು.

ರನ್ನ ತುಂಬ ಪ್ರತಿಭಾವಂತ ಕವಿಯೇನೋ ನಿಜ. ಪೂರ್ವಕವಿಗಳಿಗೆ ಆತ ಅಷ್ಟೇ ಋಣಿಯಾಗಿದ್ದಾನೆಂಬುದೂ ನಿಜ.[೨೨]

ಅಡಿಟಿಪ್ಪಣಿಗಳು

೧. ರನ್ನನ ಊರು ಮುದುವೊಳಲು; ತಂದೆ-ತಾಯಿ ಜಿನವಲ್ಲಭ, ಅಬ್ಬಲಬ್ಬೆ; ಗುರು ಅಜಿತಸೇನಾಚಾರ್ಯ; ಅಣ್ಣಂದಿರು ದೃಢಬಾಹು, ರೇಚಣ, ಮಾರಮಯ್ಯ, ಪತ್ನಿಯರು ಜಕ್ಕಿ-ಶಾಂತಿ, ಮಕ್ಕಳು ರಾಯ ಮತ್ತು ಅತ್ತಿಮಬ್ಬೆ. ಕಾಲ ಕ್ರಿ.ಶ. ೯೯೩. ಪರಶುರಾಮಚರಿತೆ, ಚಕ್ರೇಶ್ವರ ಚರಿತೆಗಳೂ ರನ್ನನ ರಚನೆಗಳೆ! ಆದರೆ ಈ ಕೃತಿಗಳು ಈವರೆಗೆ ಲಭಿಸಿಲ್ಲ. 'ಸಮರ ಪರಶುರಾಮನೆನಿಸಿದ್ದ ಚಾವುಂಡರಾಯನನ್ನು ಕುರಿತ ಕೃತಿ 'ಪರಶುರಾಮ ಚರಿತೆ' ಎಂದೂ 'ಸಾಹಸ ಭೀಮ ವಿಜಯ'ವೇ 'ಚಕ್ರೇಶ್ವರ ಚರಿತೆ' ಎಂದೂ ಸಂಶೋಧಕರ ಊಹೆ. ಚಕ್ರೇಶ್ವರ ಚರಿತೆಯೇ ಸಾಹಸಭೀಮ ವಿಜಯವಾಗಿಲ್ಲದ ಪಕ್ಷದಲ್ಲಿ ರನ್ನ ಒಬ್ಬನೋ ಇಬ್ಬರೋ ಎಂಬ ಸಮಸ್ಯೆ ಇದಿರಾಗುತ್ತದೆ. ಗಂಗರಾಜ್ಯದ ಮುಖ್ಯಮಂತ್ರಿ ಚಾವುಂಡರಾಯ, ಚಾಲುಕ್ಯ ಚಕ್ರವರ್ತಿ ಅಹವಮಲ್ಲ ತೈಲಪ, ತೈಲಪನ ಮಗ ಇಜೀವಬೆಡಂಗ ಸತ್ಯಾಶ್ರಯ, ಅತ್ತಿಮಬ್ಬೆಯಂಥ ಮಹಾವ್ಯಕ್ತಿಗಳನ್ನೂ ಅನ್ನದಾತರನ್ನೂ ಕೃತಿರಚನೆಯ ಮೂಲಕ ಸ್ಮರಿಸಿಕೊಂಡಿದ್ದಾನೆ ರನ್ನ.

೨. ಪುಣ್ಯಪುರುಷರ ಚರಿತೆಯನ್ನು ಬೋಧಿಸುವ ಗ್ರಂಥಕ್ಕೆ 'ಪ್ರಥಮಾನುಯೋಗ ಶಾಸ್ತ್ರ'ವೆಂದೂ, ನರಕಾದಿಗಳ ಗತಿ ಲೋಕ ವಿಭಾಗ ಯುಗ ಪರಿವರ್ತನ ವಿಷಯಗಳನ್ನು ಬೋಧಿಸುವ ಗ್ರಂಥಕ್ಕೆ 'ಕರಣಾನು ಯೋಗಶಾಸ್ತ್ರ'ವೆಂದೂ ಮುನಿಗೃಹಸ್ಥರ ಆಚಾರ-ವ್ಯವಹಾರಗಳನ್ನು ಬೋಧಿಸುವ ಗ್ರಂಥಕ್ಕೆ ಚರಣಾನು ಯೋಗಶಾಸ್ತ್ರವೆಂದೂ, ಜೀವಾಜೀವ ಪುಣ್ಯಪಾಪ-ಬಂಧಮೋಕ್ಷ ತತ್ತ್ವಗಳನ್ನು ಬೋಧಿಸುವ ಗ್ರಂಥಕ್ಕೆ, ದ್ರವ್ಯಾನುಯೋಗಶಾಸ್ತ್ರ'ವೆಂದೂ ಹೆಸರು. ಕವಿರನ್ನ ಈ ಗ್ರಂಥಕ್ಕೆ 'ಪ್ರಥಮಾನುಯೋಗವನ್ನು ಮುಖ್ಯ ಲಕ್ಷ್ಯವಾಗಿಟ್ಟುಕೊಂಡು ಅವಕಾಶ ಸಿಕ್ಕಿದಂತೆಲ್ಲಾ ಇತರಾನುಯೋಗಗಳನ್ನು ಸಂಘಟಿಸಿ ಸದ್ಯದ ವಿಷಯಕ್ಕೆ ಮೆರುಗನ್ನುಂಟು ಮಾಡಿದ್ದಾನೆ.

೩. ಅಜಿತ ಪುರಾಣದ ಪ್ರತಿ ಆಶ್ವಾಸದ ಅಂತ್ಯದಲ್ಲಿ ಈ ಮಾತು ಬರುತ್ತದೆ "ಇದು ಸಕಲ ಮುನೀಂದ್ರ ವೃಂದ ವೃಂದಾರಕ ಶ್ರೀಮದಜಿತಸೇನಭಟ್ಟಾರಕ ಶ್ರೀಪಾದ ಪದ್ಮ ಪ್ರಸಾದಾಸಂದಿತ ರತ್ನತ್ರಯಾಲಂಕೃತ ಶ್ರೀಮದಭಿನವಕವಿ ಚಕ್ರವರ್ತಿ ಕವಿ ರನ್ನ ನಿರ್ಮಿತ ಶ್ರೀದಾನಚಿಂತಾಮಣಿನಿರ್ಮಾಪಿತ ಶ್ರೀಮದಜಿತತೀರ್ಥಕರ ಪುರಾಣ ತಿಲಕದೊಳ್".

೪. ಅತ್ತಿಮಬ್ಬೆ ಪೊನ್ನನ ಶಾಂತಿ ಪುರಾಣದ ೧೫೦೦ ಪ್ರತಿಗಳನ್ನು ಮಾಡಿಸಿ ಗ್ರಂಥದಾನ ಮಾಡಿದಳು. ಆದರಿಂದ ತೃಪ್ತಳಾಗದೆ ರನ್ನನಿಂದ ಅಜಿತಪುರಾಣವನ್ನು ಬರೆಸಿದಳು.

೫. 'ಶಾಂತರಸಕ್ಕೆ' ಪ್ರಧಾನ್ಯಕೊಟ್ಟ ರನ್ನ ಶೃಂಗಾರರಸವನ್ನೇನೂ ಕಡೆಗಣಿಸಿಲ್ಲ. ವಿಜಯ ಸೇನಾದೇವಿಯ ವರ್ಣನೆಯ ಪದ್ಯಗಳನ್ನು ಗಮನಿಸಬೇಕು.

೬. ಸಹೃದಯರಿಗೆ ಇಷ್ಟವಿರಲಿ, ಇಲ್ಲದಿರಲಿ, ಸಂದರ್ಭವೊದಗಿದರೆ ಸಾಕು ಜೈನಧರ್ಮದ ವಿವರಗಳನ್ನು ತಂದುಬಿಡುತ್ತಾನೆ. ಕಲಾತ್ಮಕತೆಯ ಸ್ಪರ್ಶವನ್ನು ಪಡೆಯದ ಇಂಥ ಭಾಗಗಳು ಅನ್ಯಧರ್ಮೀಯರಿಗೆ ರುಚಿಸದಿರಬಹುದು: ೮-೨೮ರ ಗದ್ಯವನ್ನು ಗಮನಿಸಬೇಕು. ಬಿಡಿಸಿ ಬಿಡಿಸಿ ಹೇಳುವುದು ರನ್ನನ ಗುಣವೆನ್ನುವುದು 'ಗದಾಯುದ್ಧ'-'ಅಜಿತ ಪುರಾಣ'ಗಳೆರಡೂ ಕಾವ್ಯಗಳಿಂದ ವ್ಯಕ್ತವಾಗುತ್ತದೆ.

೭. ಗರ್ಭಾವತರಣ, ಜನ್ಮಾಭಿಷೇಕ, ಪರಿನಿಷ್ಕ್ರಮಣ, ಕೇವಲ ಜ್ಞಾನಪ್ರಾಪ್ತಿ, ಪರಿನಿರ್ವಾಣ.

೮. ಸಂಭಾವನೆ : ಪುಟ : ೨೨೯–೨೩೮ ನೋಡಿ, ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೮.

೯. ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ, ಅಂತರಾಯ.

೧೦. ಈ ಪದ್ಯದ ಮೇಲೆ ಪಂಪನ ಪದ್ಯದ ಪ್ರಭಾವವಾಗಿದೆ.

೧೧. ಈ ಪದ್ಯ ರನ್ನನ ಗದಾಯುದ್ಧದ ಕರ್ಣನವಿಲಾಪದ ಪದ್ಯವನ್ನು ನೆನಪಿಸುತ್ತದೆ.

೧೨. ಪವಾಡಗಳನ್ನು ಬಿಟ್ಟರೆ ಉಳಿದ ವಿಚಾರಗಳು ಹೃದಯಸ್ಪರ್ಶಿಯಾಗಿವೆ.

೧೩. ವೆಂಗಿಮಂಡಲದ ಪುಂಗನೂರಿನ ಜಿನಭಕ್ತ ನಾಗಮಯ್ಯನಿಗೆ ಮಲ್ಲಪ–ಪೊನ್ನಮಯ್ಯ ಎಂಬಿಬ್ಬರು ಮಕ್ಕಳಿದ್ದರು. ತೈಲಪ ಚಕ್ರವರ್ತಿಯ ಮಹಾಮಂತ್ರಿಯಾಗಿದ್ದ ಮಲ್ಲಪ ಮತ್ತು ಅಪ್ಪಕಬ್ಬೆ (ನಾಗಮಯ್ಯ-ನಾಗಿಯಬ್ಬೆಯರ ಮಗಳು) ಎಂಬ ದಂಪತಿಗಳ ಮಗಳಾಗಿ ಅತ್ತಿಮಬ್ಬೆ ಜನಿಸಿದಳು. ತೈಲಪ ಚಕ್ರವರ್ತಿಯ ಮಹಾಪ್ರಧಾನನಾಗಿದ್ದ ದಲ್ಲನ ಪುತ್ರನಾದ ನಾಗಿದೇವನನ್ನು ವರಿಸಿದರು ಅತ್ತಿಮಬ್ಬೆ ಮತ್ತು ಗುಂಡುಮಬ್ಬೆ ಎಂಬ ಸಹೋದರಿಯರು, ಅಣ್ಣಿಗದೇವ ಅತ್ತಿಮಬ್ಬೆಯ ಮಗ.

೧೪. ರತ್ನತ್ರಯಾಲಂಕೃತೆ, ಚಾರಿತ್ರ ಮೇರು, ಗುಣದಂಕಕಾರ್ತಿ, ಭವ್ಯ ಮನೋರಥ ಜನ್ಮಭೂಮಿ, ಮಹಾಸತಿಕುಲತಿಲಕೆಎಂಬಿವು ರನ್ನ ಅತ್ತಿಮಬ್ಬೆಯನ್ನು ವರ್ಣಿಸುವಾಗ ಬಳಸಿರುವ ಶಬ್ದಗಳು.

೧೫. ಈ ಚಿತ್ರಣದಲ್ಲಿ ಪರೋಕ್ಷವಾಗಿ ಸಮಕಾಲೀನ ಸಂಗತಿಗಳು ಧಾರಾಳವಾಗಿ ಎಡಪಡೆದಿವೆ. ಇವು ಐತಿಹಾಸಿಕ ಮಹತ್ವವುಳ್ಳವು.

೧೬. "ಪುಸ್ತಕಗಳನ್ನು ಪ್ರತಿಮಾಡಿಸಿ ದಾನಮಾಡುವ ಒಂದು ಸಂಪ್ರದಾಯ ಜೈನರಲ್ಲಿ ಬೆಳೆದುಕೊಂಡು ಬಂದಂತೆ ಬೇರೆಯವರಲ್ಲಿ ಬಂದ ಹಾಗೆ ಕಾಣಿಸಲಿಲ್ಲ"ಎಂದು ಡಾ. ಎಂ. ಚಿದಾನಂದಮೂರ್ತಿಯವರು ಹೇಳಿದ್ದಾರೆ. ನೋಡಿ : 'ಕನ್ನಡ ಶಾಸನಗಳ ಸಂಸ್ಕೃತಿ ಅಧ್ಯಯನ': ಪುಟ : ೨೦೨

೧೭. ಅಲಭ್ಯ ಕೃತಿಗಳ ಕೂಗಾಟ ಅಷ್ಟಿರುತ್ತಿರಲಿಲ್ಲ.

೧೮. ಅಜಿತಪುರಾಣ ಸಂಗ್ರಹ : ೧–೨೪, ೨೬–೨೯.

೧೯. ರನ್ನನ ಸ್ವೋಪಜ್ಞತೆಗೆ ಅತ್ತಿಮಬ್ಬೆಯ ಚಿತ್ರವನ್ನೂ ಸಗರ ಚಕ್ರವರ್ತಿಯ ಕಥೆಯನ್ನೂ ಸೊಗಸಾದ ನಿದರ್ಶನಗಳನ್ನಾಗಿ ನೀಡಬಹುದು. ಇವೆರಡೂ ಭಾಗಗಳಲ್ಲಿ ಬರುವ ದೇಸೀ ಮಾತುಗಳು ಉಲ್ಲೇಖನೀಯ.

೨೦. ಅತ್ತಿಮಬ್ಬೆಯ ಬಗೆಗಿನ ರನ್ನನ ಗೌರವ ಭಕ್ತಿಯ ಹಂತಕ್ಕೇರಿರುವುದನ್ನು ಇಂಥ ಅನೇಕ ಪದ್ಯಗಳಲ್ಲಿ ಗುರುತಿಸಬಹುದು. ಆಕೆಯದು ಅಸಾಮಾನ್ಯ ವ್ಯಕ್ತಿತ್ವವೆಂಬುದಕ್ಕೆ ಲಕ್ಕುಂಡಿ ಶಾಸನದಂಥ ಕಾವ್ಯೇತರ ಆಧಾರಗಳೂ ಇವೆ. ಹೀಗಾಗಿ ರನ್ನನ ಸತ್ಯ ನಿಷ್ಠೆಯ ಬಗ್ಗೆ ಎರಡು ಮಾತಾಡಲು ಸಾಧ್ಯವಿಲ್ಲ. ಜಿನಜನನಿಯೊಡನೆ ಅತ್ತಿಮಬ್ಬೆಯನ್ನು ಸಮೀಕರಿಸಿರುವುದು ಆಕೆಯ ಗುಣೋನ್ನತಿಗೊಂದು ನಿದರ್ಶನವಾಗಿದೆ! ೧-೬೫ರ ಪದ್ಯ ಆಕೆಯ ಯುದ್ಧ-ವೀರಕ್ಕೊಂದು ನಿದರ್ಶನದಂತಿದೆ. ಮೊನೆ (ಯುದ್ಧ), ಮನೆ - ಎರಡರಲ್ಲಿಯೂ ಅತ್ತಿಮಬ್ಬೆಯನ್ನು ಸರಿಗಟ್ಟುವಂಥ ಪುರುಷರಿಲ್ಲ ಎಂದು ರನ್ನ ಹೇಳಿದ್ದಾನೆ.

೨೧. ರನ್ನ ಸಂಸ್ಕೃತದಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಪಡೆದಿದ್ದನೆಂಬುದು ಅಜಿತಪುರಾಣದ ಅನೇಕ ಗದ್ಯ-ಪದ್ಯಗಳಿಂದ ತಿಳಿಯುತ್ತದೆ. ದೇವೇಂದ್ರನು ಅಜಿತ ತೀರ್ಥಂಕರ ಜನ್ಮಾಭಿಷೇಕವನ್ನೂ ಅಷ್ಟ ವಿಧಾರ್ಚನೆಯನ್ನೂ ಮಾಡಿದನಂತರ ಆತನಿಂದ ರನ್ನ ಸಂಸ್ಕೃತದಲ್ಲಿ ಹೇಗೆ ಸ್ತೋತ್ರ ಮಾಡಿಸುತ್ತಾನೆ ನೋಡಿ:

"ಜಯ ಜಯ ಜಗತ್ತ್ರಯ ಪತಿ ಕಿರೀಟಕೂಟಕೋಟಿ
ಮಸಣ ಚಾರು ಚಂಚನ್ನಖ ಮಯೂಖೋದಂತ ಮಯೂಖ
ಮಂಡಲ"———————————

ರನ್ನನ ಕಂದ, ವೃತ್ತ, ಗದ್ಯದಲ್ಲಿ ದೇಸೀನಿಷ್ಠೆಯನ್ನೂ ಸಂಸ್ಕೃತ ಭೂಯಿಷ್ಠತೆಯನ್ನೂ ಕಾಣಬಹುದು. ಉತ್ಸಾಹ (ಅಯೋಧ್ಯೆಯ ವರ್ಣನೆಯಲ್ಲಿ), ಲಲಿತ (ಜಿನಶಿಶು ಜನನದ ಉತ್ಸವದ ವೈಭವದ ವರ್ಣನೆಯಲ್ಲಿ) ರಗಳೆಗಳನ್ನು ಬಳಸಿದ್ದಾನೆ.

೨೨. ೦೫-೦೩-೧೯೯೫ರಂದು 'ಸನ್ಮತಿ ಸಾಹಿತ್ಯ ಪರಿಷತ್ತಿನ' ಆಶ್ರಯದಲ್ಲಿ ನಡೆದ 'ದಾನಚಿಂತಾಮಣಿ ಅತ್ತಿಮಬ್ಬೆ'ಯನ್ನು ಕುರಿತ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

೨. ಶರಣ ಸಂಸ್ಕೃತಿ

• ಪ್ರೊ. ಆರ್. ರಾಚಪ್ಪ

'ಶರಣ ಸಂಸ್ಕೃತಿ' ಎಂಬ ಮಾತಿನಲ್ಲಿ 'ಶರಣ' ಮತ್ತು 'ಸಂಸ್ಕೃತಿ' ಎಂಬ ಎರಡು ಶಬ್ದಗಳಿವೆ. ಶರಣ ಶಬ್ದದ ಅರ್ಥವ್ಯಾಪ್ತಿ ಮತ್ತು ಸಂಸ್ಕೃತಿ ಶಬ್ದದ ಅರ್ಥವ್ಯಾಪ್ತಿಗಳನ್ನು ಬೇರೆ ಬೇರೆ ವಿವೇಚಿಸಿದಾಗ ಆಗುವ ಅರ್ಥಗಳೇ ಬೇರೆ. ಆದರೆ 'ಶರಣ ಸಂಸ್ಕೃತಿ' ಎಂದು ಒಂದೇ ಶಬ್ದವಾಗಿ ಪ್ರಯೋಗಿಸಿದಾಗ ಆಗುವ ಅರ್ಥವೇ ಬೇರೆ. ಈ ಮೇಲೆ ಹೇಳಿರುವ ದೃಷ್ಟಿಯಲ್ಲಿ, ಆಯಾಶಬ್ದಗಳ ಅರ್ಥವನ್ನು ವಿವೇಚಿಸಿ ಆನಂತರ 'ಶರಣ ಸಂಸ್ಕೃತಿ' ಶಬ್ದದ ಅರ್ಥ ವ್ಯಾಪ್ತಿ ಎಷ್ಟು ಎಂಬುದನ್ನು ವಿವೇಚಿಸಲಾಗುತ್ತದೆ.

'ಶರಣ' ಮೂಲತಃ ಸಂಸ್ಕೃತ ಶಬ್ದ. ಇದರ ಮೂಲರೂಪ 'ಶರಣಂ'. ಈ ಶಬ್ದ ಕನ್ನಡಕ್ಕೆ ಬರುವಾಗ ತನ್ನ ಸ್ವರೂಪವನ್ನು ಕಳೆದುಕೊಂಡಂತೆ ಅರ್ಥವನ್ನು ಕಳೆದು ಕೊಂಡು ಹೊಸರೂಪ ಹೊಸ ಅರ್ಥಪಡೆದುಕೊಳ್ಳುತ್ತದೆ. "ಶರಣಂಗೃಹರಕ್ಷಿತ್ರೋಃ" 'ಚರಣಂಶರಣಂಪ್ರಪದ್ಯೇ' ಎಂಬ ಮಾತುಗಳು ಸಂಸ್ಕೃತದಲ್ಲಿ ಪ್ರಚಲಿತವಿವೆ. ಇಲ್ಲಿ 'ಶರಣಂ' ಶಬ್ದಕ್ಕೆ – ರಕ್ಷಕ, ಸ್ವಾಮಿ, ಆಶ್ರಯದಾತ, ಮನೆ ಇತ್ಯಾದಿ ಅರ್ಥಗಳಿವೆ. ಹಿರಿಯ ವಿದ್ವಾಂಸರಾದ ವಿ.ಎಸ್.ಆಪ್ಟೆಯವರು ತಮ್ಮ ಕೋಶದಲ್ಲಿ 'ಶರಣಂ' ಶಬ್ದಕ್ಕೆ 'ಶೃ' ಧಾತುವನ್ನು ನೀಡಿ ಅದಕ್ಕೆ 'ಲ್ಯುಟ್' ಪ್ರತ್ಯಯ ಸೇರಿ 'ಶರಣಂ' ಪದ ಸಿದ್ಧಿಸುವುದನ್ನು ಹೇಳಿದ್ದಾರೆ. ಅಲ್ಲದೆ ಈ ಪದಕ್ಕೆ Protection, help, defence, refuse, shelter, a place of shelter, resort ಇತ್ಯಾದಿ ಅರ್ಥಗಳನ್ನು ಹೇಳಿದ್ದಾರೆ. ಮತ್ತೊಬ್ಬ ಹಿರಿಯ ವಿದ್ವಾಂಸರಾದ ಮೋನಿಯರ್ ವಿಲಿಯಂಸ್‌ಅವರು 'ಶರಣಂ' ಶಬ್ದಕ್ಕೆ ಶ್ರೀ ಧಾತುವಿನಿಂದ ನಿಷ್ಪತ್ತಿ ಹೇಳಿ to cause, to rest, to be supplied ಎಂಬ ಅರ್ಥಗಳನ್ನು ನೀಡಿದ್ದಾರೆ. ಮುಂದುವರೆದು Protecting, gaurding, defending ಎಂಬ ಅರ್ಥಗಳನ್ನು ತಿಳಿಸಿ 'ಶರಣಂಗಂ', to go to any one for protection, seek refuse with ಎಂಬ ಅರ್ಥಗಳನ್ನೂ ಹೇಳಿದ್ದಾರೆ. ಇಲ್ಲಿ ಆಪ್ಟೆಯವರು ಹೇಳಿರುವ ನಿಷ್ಪತ್ತಿಯನ್ನು ಒಪ್ಪಿ 'ಅಪಾಯಕಾರಕ ವಸ್ತು–ವ್ಯಕ್ತಿಗಳಿಂದ ಪಾರುಮಾಡುವ ವ್ಯಕ್ತಿ ಅಥವಾ ಶಕ್ತಿಯ ರಕ್ಷಣೆಗೆ ಮೊರೆಹೊಕ್ಕವನು ಎಂಬ ಅರ್ಥಛಾಯೆಗಳು ಸಂಸ್ಕೃತದಲ್ಲಿ ಬಳಕೆಯಲ್ಲಿರುವುದನ್ನು ಗಮನಿಸಬಹುದು.

'ಶರಣಂ' ಎಂಬ ಶಬ್ದ ವೇದ, ಮಹಾಭಾರತ, ವೈದಿಕಧರ್ಮಗ್ರಂಥಗಳಲ್ಲಿ, ಬೌದ್ಧ ಧರ್ಮದಲ್ಲಿ ವ್ಯಾಪಕವಾಗಿ ಬಳಕೆಯಾಗಿದೆ. ಬೌದ್ಧಧರ್ಮದಲ್ಲಿ 'ಧರ್ಮಂಶರಣಂ ಗಚ್ಛಾಮಿ, ಸಂಘಂಶರಣಂಗಚ್ಛಾಮಿ, 'ಬುದ್ಧಂಶರಣಂಗಚ್ಛಾಮಿ' ಎಂಬ ಮಾತು ಗಳಲ್ಲಿ 'ಶರಣಂ' ಶಬ್ದದಿಂದ ಶರಣ್ಯ, ಶರಣಾಗತ, ಶರಣ, ಶರಣೆ, ಶರಣಪಥ, ಶರಣು, ಶರಣಗೋಷ್ಠಿ, ಶರಣಾಗು, ಶರಣರ ಅನುಭಾವ ಮುಂತಾದ ಪದಗಳು ರೂಪು ಗೊಂಡಿವೆ. ಕಾಳಿದಾಸ ಮಹಾಕವಿ ತನ್ನ ಶಾಕುಂತಲ ನಾಟಕದಲ್ಲಿ 'ಅಗ್ನಿ ಶರಣ' ಎಂಬ ಶಬ್ದವನ್ನು 'ಅಗ್ನಿ ರಕ್ಷೆಯಲ್ಲಿರುವ ಮನೆ' ಎಂಬ ಅರ್ಥದಲ್ಲಿ ಬಳಸಿದ್ದಾನೆ. ಒಟ್ಟಿನಲ್ಲಿ 'ಶರಣಂ' ಎಂಬ ಸಂಸ್ಕೃತ ಶಬ್ದ ಕನ್ನಡಕ್ಕೆ ಬರುವಲ್ಲಿ 'ಶರಣ' ಆಗಿದೆ ಹಾಗೂ ತನ್ನ ಅರ್ಥವನ್ನು ಕಳೆದುಕೊಂಡಿದೆ.

ವೀರಶೈವ ಸಿದ್ಧಾಂತದಲ್ಲಿ 'ಶರಣ' ವಿಶಿಷ್ಟವ್ಯಕ್ತಿತ್ವ ಹೊಂದಿರುವ ವ್ಯಕ್ತಿ, ಶುದ್ಧ ಚಾರಿತ್ರ್ಯವುಳ್ಳ ವ್ಯಕ್ತಿ, ಶಿವಭಕ್ತ, ಶಿವನಲ್ಲಿ ಐಕ್ಯನಾಗಲು ಹತ್ತಿರನಾದ ವ್ಯಕ್ತಿ, ದೈವಕ್ಕೆ ಶರಣಾದವನು, ಭಕ್ತ ಮಾಹೇಶ್ವರ, ಪ್ರಸಾದಿ ಪ್ರಾಣ ಲಿಂಗಿಯಾಗಿ ಸಾಧನೆ ಮಾಡಿ ಶಿವನಲ್ಲಿ ಐಕ್ಯವಾಗಲು ಸನಿಹನಾದವನು ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಷಟ್‌ಸ್ಥಲ ಸಿದ್ಧಾಂತದಲ್ಲಿ ಐದನೆಯ ಸಾಧನಾ ಹಂತ ಶರಣ.

'ಶರಣ' ಶಬ್ದ ಶಾಸನಗಳಲ್ಲಿಯೂ ಬಳಕೆಯಾಗಿದೆ. ಇಂಗಳಗಿ ಶಾಸನದಲ್ಲಿ 'ಶರಣರು', ಅಘಟಿತ ಘಟನಾ ಸಾಮರ್ಥ್ಯರು' ಎಂಬ ಅರ್ಥದಲ್ಲಿ ಶರಣ 'ಶಬ್ದ ಬಳಕೆ ಯಾಗಿದೆ. ಷಟ್‌ಸ್ಥಲಗಳಲ್ಲಿ ಐಕ್ಯ ಸ್ಥಲದ ಉಪಾಂತ ಸ್ಥಲವಾಗಿ 'ಶರಣಸ್ಥಲ' ಎಂದೂ ಪರಿಭಾವಿಸುವುದನ್ನು ಕಾಣಬಹುದು. 'ಶರಣ' ಶಬ್ದ ವಿಶಿಷ್ಟ ಅರ್ಥ ವ್ಯಾಪ್ತಿಯನ್ನು ಹೊಂದಿ ವೀರಶೈವ ದರ್ಶನದಲ್ಲಿ ಬಳಕೆಯಾಗುತ್ತಿರುವುದು ಗಮನಾರ್ಹಸಂಗತಿ.

ಶಿವಯೋಗಿ ಶಿವಾಚಾರ್ಯನು ರೇಣುಕಾಗಸ್ತ್ಯಸಂವಾದ ರೂಪದಲ್ಲಿ ರಚಿಸಿರುವ 'ಸಿದ್ಧಾಂತ ಶಿಖಾಮಣಿ'ಯಲ್ಲಿ.

'ಅಂಗಲಿಂಗೀ ಜ್ಞಾನರೂಪ : ಸತೀಜ್ಞೇಯ; ಶಿವ ಜತಿ:
ಯತ್ಸೌಖ್ಯಂತತ್ಸಮಾವೇಶೇಶ್‌ದ್ವಾನ್ ಶರಣನಾಮವಾನ್"

ಅಂದರೆ "ಶಿವಜ್ಞಾನಸ್ವರೂಪನೂ ಅಂಗ ಲಿಂಗ ಸಾಮರಸ್ಯವುಳ್ಳವನೂ ಆದ ಪ್ರಾಣಲಿಂಗಿಯು ಸತಿ, ಶಿವಲಿಂಗವೇ ಪತಿ; ಯಥಾಯಯಂಸ್ತ್ರೀಯಾ ಸಂಪರಿಷ್ವತ್ತೋನ ಬಾಹ್ಯಂಕಿಂಚಿನವೇದಾಂತಮ್". "ಏನಮೇವಾಯಂ ಪುರುಷಃ ಪ್ರಾಜ್ಞೋನಾತ್ಮ ನಾಸಂಪರಿಷ್ವತ್ತೋನ ಬಾಹ್ಯಾಂ ಕಿಂಚನವೇದಾಂತರಂ" ಎಂಬ ಬೃಹದಾರಣ್ಯ ಕೋಪನಿಷತ್ತಿನ ಪ್ರಕಾರ ಸ್ತ್ರೀ–ಪುರುಷಸಮಾನ ಸಮರಸಯೋಗದಿಂದ ಉಂಟಾಗುವ

---

* ಈ ಎಲ್ಲ ಅರ್ಥಛಾಯೆ. ವಿವರಗಳನ್ನು ನೀಡಿ ಆಶೀರ್ವದಿಸಿ ಪ್ರೋತ್ಸಾಹಿಸಿದವರು ಹಿರಿಯ ವಿದ್ವಾಂಸರೂ ಸಂಸ್ಕೃತ ಪ್ರಾಧ್ಯಾಪಕರೂ ಆದ ಪ್ರೊ. ರಂಗನಾಥಶರ್ಮ ಅವರು. ಶ್ರೀಯುತರ ವಿದ್ವತ್ತು ಮತ್ತು ಸಹೃದಯತೆಗೆ ಲೇಖಕ ಚಿರಋಣಿಯಾಗಿದ್ದಾನೆ.

ಸುಖವನ್ನು ಹೊಂದಿ ಅದರ ಹೊರ–ಒಳಗೆ ಮತ್ತೇನನ್ನೂ ಕಾಣದಿರುವವನು 'ಶರಣ' ಎಂದು ಹೇಳಿದ್ದಾರೆ. ಅವರೇ ಮುಂದುವರೆದು –

'ಸತೀವ ರಮಣೀಯಾಸ್ತು ಶಿವರೇರಕ್ತಿಂವಿಭಾವಯನ್
ತದನ್ಯವಿಮುಖ್ಯ ಸ್ಲೋಯಂಜ್ಞಾತ; ಶರಣನಾಮವಾನ್'

ಅಂದರೆ ಪತಿವ್ರತಾ ಸ್ತ್ರೀಯು ಅನ್ಯಪುರುಷ ವಿಮುಖಳಾಗಿ ತನ್ನ ಪ್ರಾಣಕಾಂತ ನಲ್ಲಿಯೇ ಹೇಗೆ ಅನುರಕ್ತಳಾಗಿರುವಳೋ ಹಾಗೆ, ಯಾರು ಶಿವಲಿಂಗದ ವಿಷಯದಲ್ಲಿ ತನ್ನನ್ನು ಸತಿಯಾಗಿ ಭಾವಿಸಿ ಅದರಲ್ಲಿಯೇ ಯೋಗಗೆಡದೆ, ಆ ಲಿಂಗ ಹೊರತು ಉಳಿದ ದೇವತೆಗಳ ವಿಷಯದಲ್ಲಿ ವಿಮುಖರಾಗಿರುತ್ತಾರೋ ಅವರೇ ಶರಣರು" ಎಂದು ಹೇಳಿದ್ದಾರೆ.

'ಮಹಾ ನಿಕ್ಷೇಪವನ್ನು ಪಡೆದ ಯಾರೂ ಗಾಜಿನಮಣಿಯನ್ನು ಅಪೇಕ್ಷಿಸುವುದಿಲ್ಲ. ಹಾಗೆಯೇ ಶರಣ ದೇವತಾಂತರವಿಮುಖನಾಗಿರುವನು. ಮನೋವಾಕ್ಕಾಯಗಳಲ್ಲಿ ಶಿವನೊಬ್ಬನನ್ನೇ ರಕ್ಷಕನೆಂದು ಮೊರೆಹೊಕ್ಕು ಅಪಾರ ಸುಖವನ್ನು ಪಡೆದು ಸಂತೋಷ ಪಡುವನು' ಎಂದು ವಿವರಣೆ ನೀಡಿದ್ದಾರೆ. ವಚನಕಾರರು ಶರಣ ಶಬ್ದವನ್ನು ವ್ಯಾಪಕ ಅರ್ಥದಲ್ಲಿ ಬಳಸಿದ್ದಾರೆ. ಶಿವಯೋಗಿ ಸಿದ್ಧರಾಮೇಶ್ವರರು –

'ಶರಣ ಶಬ್ದವಂತಿಂತಲ್ಲ
(ನೋಣಃ) ಎಂಬ ಸೂತ್ರದಿಂದ ಶರಣನೆನಿಸಿದನು
ಶರ ಎಂದರೆ ಬಾಣ 'ನ' ಎಂದಡೆ ಅಂತ ಮನ್ಮಥ ಭಾವಿಲ್ಲದವ
ಅವನೇ ಶತಣನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನ

ಎಂದು ಶರಣ ಲಕ್ಷಣವನ್ನು ಹೇಳಿದ್ದಾರೆ.

ಅಂದರೆ ಮನ್ಮಥ ಬಾಣದ ಬಾಧೆ ಇಲ್ಲದವನು, ಆ ಬಾಣದ ಆಘಾತಕ್ಕೆ ಸಿಕ್ಕದವನು ಎಂಬುದಾಗಿ ಶರಣ ಗುಣವನ್ನು ನೀಡಿದ್ದಾರೆ.

ಅವಿರಳ ಜ್ಞಾನಿ ಚೆನ್ನ ಬಸವಣ್ಣನವರು ಶರಣ ಲಕ್ಷಣವನ್ನು ಕುರಿತು –

ದೇಹಿಯಲ್ಲ ನಿರ್ದೇಹಿಯಲ್ಲ
ಬೋಧಕನಲ್ಲ ನಿರ್ಬೋಧಕನಲ್ಲ
ಕಾಮಿಯಲ್ಲ ನಿಃಕಾಮಿಯಲ್ಲ
ಆಸೆವಿಡಿದು ಬಂದ ಆಮಿಷನಲ್ಲ
ಅವಗುಣವಿಲ್ಲದ ನಿರ್ಗುಣಿ, ನಿರಂತರ
ಕೂಡಲ ಚನ್ನಸಂಗನ ಶರಣ ನೋಡಯ್ಯಾ

ಎಂದು ಹೇಳಿ, ಆತನ ನಿರ್ಲಿಪ್ತತೆಯನ್ನು ಮಂಡಿಸುತ್ತಾ

'ಸಜ್ಜನ ಸದ್ಭಾವಿ, ಅನ್ಯರಲ್ಲಿ ಕೈಯಾಂತು ಬೇಡ
ಲಿಂಗಮುಟ್ಟಿದ ಕೈಮೀಸಲು
ಕಂಗಳಲಿ ಒಸೆದುನೋಡಪರವಧುವ

ಮನದಲ್ಲಿ ನೆನೆಯನನ್ಯವ
ಮಾನವಸೇವೆ ಮಾಡ, ಲಿಂಗವ ಬೇಡ
ಲಿಂಗದ ಹಂಗನೊಲ್ಲ
ಕೂಡಲಚೆನ್ನಸಂಗಮದೇವಾ ನಿಮ್ಮ ಶರಣ'

ಎಂದು ಶರಣನ ಸಚ್ಚಾರಿತ್ರ್ಯ, ತಾನೇ ತಾನಾಗಿ ಮೆರೆವ ಗುಣವನ್ನು ಹೇಳಿದ್ದಾರೆ. 'ಜಲದೊಳಗಣ ಮತ್ಸ್ಯವು ಜಲವ ತನ್ನ ನಾಸಿಕದತ್ತ ಹೊದ್ದಲೀಯದಂತೆ' ಸಂಸಾರ ಬಂಧನದಲ್ಲಿದ್ದರೂ ಸಂಸಾರ ತನ್ನ ಬಂಧಿಸಿದಂತೆ ಇದ್ದಾನೆ. ಆಧ್ಯಾತ್ಮಿಕ ಸಿದ್ಧಿಯ ಶಿಖರವನ್ನೇರಿನಿಂತ ಶರಣ, ಶ್ರದ್ಧೆ, ನಿಷ್ಠೆ, ಅವಧಾನ ಅನುಭಾವ ಭಕ್ತಿಗಳನ್ನು ಮೀರಿ ಆನಂದ ಭಕ್ತಿಯನ್ನು ಪಡೆದವನು ಎಂದು ಹೇಳಿದ್ದಾರೆ. ಅವರೇ ಮುಂದುವರೆದು –

'ಬೇಕೆನಲಾಗದು ಶರಣಂಗೆ
ಬೇಡೆನಲಾಗದು ಶರಣಂಗೆ
ಬಂದು ಸುಖವನತಿಗಳೆಯಲಾಗದು ಶರಣಂಗೆ
ಇದು ಕಾರಣ ಕೂಡಲ ಚನ್ನ ಸಂಗಯ್ಯಾ
ನಿಮ್ಮ ಶರಣರು ಉಂಡು ಉಪನಾಸಿಗಳು ಬಳಸಿ ಬ್ರಹ್ಮಚಾರಿಗಳು"

ಎಂಬ ವಚನದಲ್ಲಿ ಶರಣನ ಉತ್ತುಂಗ ಸ್ಥಿತಿಯನ್ನೂ ಅವನು ಊಟಮಾಡಿಯೂ ಶಿವಜ್ಞಾನಪಿಪಾಸುವಾಗಿರುವ, ಸಂಸಾರಿಯಾಗಿದ್ದರೂ ಶಿವನನ್ನು ಪಡೆವತವಕದಿಂದ ಕೂಡಿದ ಬ್ರಹ್ಮಚಾರಿಯಾಗಿಯೂ ಬದುಕುವ ಸ್ಥಿತಿಯನ್ನು ಪಡೆದನೆಂದು ಹೇಳಿದ್ದಾರೆ.

ಅಲ್ಲಮಪ್ರಭುದೇವರು –

ಅಂಗಲಿಂಗದಲ್ಲಿ ತರಹರವಾಗಿ
ಸಮತೆ ಶಾಂತಿಯಲ್ಲಿ ತರಹರವಾಗಿ
ಮನಜ್ಞಾನದಲ್ಲಿ ತರಹರವಾಗಿ
ಭಾವ ನಿರ್ಭಾವದಲ್ಲಿ ತರಹರವಾಗಿ ಇರಬಲ್ಲಡೆ
ಆತನೇ ಅಚ್ಚ ಶರಣನು ಕಾಣಗುಹೇಶ್ವರಾ

ಅಂಗಲಿಂಗ ಸಂಗಿಯಾದ ಶರಣನ ಅಂಗವೆಲ್ಲಾಲಿಂಗ. ಅವನಮನಸ್ಸೆಲ್ಲಾ ಅವಿರಳ ಜ್ಞಾನ, ಆತನ ಭಾವವು ಅಡಗಿ ನಿರ್ಭಾವವಾಗಿ ಸಮತೆಯಲ್ಲಿನಿಂದು ನಿಜ ಶಾಂತಿಯಲ್ಲಿ ಪರಿಣಾಮಿಸುವುದು ಶರಣ ಲಕ್ಷಣ ಎಂದು ಹೇಳಿ ಮುಂದುವರೆದು "ನಿಮ್ಮ ಶರಣರು ಮೂರು ಲೋಕವರಿಯೆ ನಿಶ್ಚಟರಯ್ಯಾ", "ನಿಮ್ಮ ಶರಣರು ಸದಾ ಸನ್ನಿಹಿತರು", "ಸುಜ್ಞಾನ ಭರಿತ ಅನುಪಮಸುಖಿ ಗುಹೇಶ್ವರ ನಿಮ್ಮ ಶರಣನು"; "ನಿಮ್ಮ ಶರಣನುಪಮಾತೀತನು"; ಹಿರಿದು ಕಿರಿದುದೆಂಬ ಶಬ್ದವಡಗಿದರೆ ಆತನೆ ಶರಣ ಗುಹೇಶ್ವರಾ", 'ಅಪ್ರಮಾಣ' ಗುಹೇಶ್ವರಾ ನಿಮ್ಮ ಶರಣ" ಎಂದು ಶರಣನ ಅಖಂಡತ್ವ, ಶಿವಸಾನ್ನಿಧ್ಯ ಪಡೆದ ಮಹಾಮಹಿಮೆಯನ್ನು ಪ್ರಭುದೇವರು ವಿವರಿಸಿದ್ದಾರೆ.

ಸಕಲೇಶ ಮಾದರಸರು –

ಊರಿಗೆ ಒಕ್ಕಲಹ, ಹೆಂಡತಿಗೆ ಗಂಡನಹ
ಮಕ್ಕಳಿಗೆ ತಂದೆಯಹ, ಮಸಣಕ್ಕೆ ಹೆಣವಹ
ಸಕಳೇಶದೇವಾ ನಿಮ್ಮ ಶರಣನ ಪರಿಬೇರೆ

ಎಂದು 'ಶರಣ ಸಂಸಾರಿಯಾಗಿ ಇಹಲೋಕವ್ಯವಹಾರಿಯಾಗಿ ತಾನೂ ಎಲ್ಲರಂತೆ ಬದುಕುವನಾದರೂ ಎಲ್ಲಾ ಆಶೆ ಆಮಿಷಗಳನ್ನು ಮೀರಿನಿಂತವನು" ಎಂದು ಹೇಳಿದ್ದಾರೆ.

ಅಮುಗಿ ದೇವಯ್ಯನವರು –

'ಉಷ್ಣತೆಯ ಒರತೆಯಂತೆ
ಉರಿಯನೆರಳಂತೆ
ಮಂಜಿನಮಳೆಯಂತೆ
ಬಿಸಿಲ ಕುದುರೆಯಂತೆ
ಬೆಟ್ಟ ಶಬ್ದದಂತೆ ಸುಳಿವ ಸಿದ್ಧ ಸೋಮನಾಥ ನಿಮ್ಮ ಶರಣ'

ಎಂದು ಶರಣನ ವಿಶಿಷ್ಟತೆಯನ್ನು ನಿರೂಪಿಸಿದ್ದಾರೆ. ಭೂಮಿಯ ಸಾಮಾನ್ಯ ಒರತೆಗಿಂತ ಭಿನ್ನ ಈ ಉಷ್ಣತೆಯ ಒರತೆ. ಈಗಲೂ ನಮ್ಮ ದೇಶದಲ್ಲಿ ಬಿಸಿ ನೀರಿನ ಬುಗ್ಗೆಗಳನ್ನು ಕಾಣಬಹುದು. ನೈಸರ್ಗಿಕವಾಗಿ ಉಕ್ಕಿಬರುವ ಈ ಬಿಸಿ ಬೀರಿನ ಬುಗ್ಗೆಗಳು ನಮ್ಮ ಶರೀರದಲ್ಲಿರುವ ಅನೇಕ ರೋಗ ನಿವಾರಣಾ ಶಕ್ತಿ ಹೊಂದಿವೆ. ಇವುಗಳಲ್ಲಿ ಸ್ನಾನಮಾಡಿದರೆ ದೇಹ ಸ್ವಾಸ್ಥ್ಯ ಸಾಧ್ಯ ಎಂಬ ವೈಜ್ಞಾನಿಕ ಹಿನ್ನೆಲೆಯೂ ಇದೆ. ನಿಸರ್ಗದತ್ತವಾದ ಬಿಸಿ ನೀರಿನ ಬುಗ್ಗೆಗಳಂತೆ ಶರಣಸಾಧಕನ ಶರೀರ ಧಾರಣ ಗುಣವನ್ನು ಹೋಗಲಾಡಿಸಿ ಮುಕ್ತಿಭಾಜನನನ್ನಾಗಿಸುವನು. 'ಉರಿ' ಎಂಬುದು ಒಂದು ಜಾತಿಯ ಮರ. ಇದರಲ್ಲಿ ಆಯುರ್ವೇದ ಶಕ್ತಿ ಇದೆ ಎಂತಲೂ ಇದರ ನೆರಳು ದೇಹಾರೋಗ್ಯಕ್ಕೆ ಸಾಧಕವೆಂತಲೂ ಹೇಳುವರು. ಇದೇ ರೀತಿ ಮಂಜಿನ ಮಳೆಯೂ ಕೂಡ. ಆದ್ದರಿಂದ ಶರಣ ಉಷ್ಣತೆಯ ಒರತೆಯಾಗಿ 'ಉರಿ'ಯನೆರಳಾಗಿ, ಮಂಜಿನಮಳೆಯಾಗಿ, ಬೆಟ್ಟದ ಶಬ್ದವಾಗಿ ನಮ್ಮಲ್ಲಿನ ತನುಗುಣ ನಾಸ್ತಿಮಾಡಿ ಶಿವನಿಗೆ ಸೇರಬಹುದಾದ ಅಂಗನಾಗುವ ಶಕ್ತಿ ಹೊಂದಿದ್ದಾನೆ ಶರಣ ಎಂದು ಹೇಳಿದ ಅಮುಗಿದೇವಯ್ಯನವರು–

ಇಹಪರನಲ್ಲ, ಪರಾಪರನಲ್ಲ
ಭಾವಿಸಿ ಭಾವಿಯಲ್ಲ
ಕಾಮಿಸಿ ಕಾಮಿಯಲ್ಲ
ಅನಾಯಾಸನಿರಂಗನು ಸಿದ್ಧಸೋಮನಾಥ
ನಿಮ್ಮ ಶರಣ ಬಳಸಿ ಬಳಸುವನಲ್ಲ.

ಎಂದು ಹೇಳುವಲ್ಲಿ 'ಶರಣನು ಇಲ್ಲಿ' – ಇಹ ಲೋಕದಲ್ಲಿ – ಇದ್ದೂ ಎಲ್ಲವನ್ನೂ ಮೀರಿನಿಂತ 'ನಿರಂಗ' ಎಂದು ವರ್ಣಿಸಿ, ಈ ಜೀವನದಲ್ಲಿ ಓಡಿಯಾಡಿಯೂ ಜೀವನವನ್ನು ಮೀರಿನಿಂತವನು ಎಂದು ಹೇಳಿದ್ದಾರೆ.

ಬಸವಣ್ಣನವರು ಶರಣನನ್ನು ಕುರಿತು "ಉಪಮಿಸಬಾರದ ಉಪಮಾತೀತ", 'ಕಾಲಕರ್ಮರಹಿತ', 'ಭವವಿರಹಿತ', 'ಆತಸಂದೇಹ ಸೂತಕಿಯಲ್ಲ', 'ಆಕಾರ ನಿರಂಕಾರನಲ್ಲ', ಕಾಯವಂಚಕನಲ್ಲ. 'ಜೀವವಂಚಕನಲ್ಲ' ಶಂಕೆಯಿಲ್ಲದ ಮಹಾಮಹಿಮ ಆದ್ದರಿಂದಲೇ –

"ಶರಣ ನಿದ್ರೈದಡೆ ಜಪಕಾಣಿರೋ
ಶರಣನೆದ್ದುಕುಳಿತಡೆ ಶಿವರಾತ್ರಿಕಾಣಿರೋ
ಶರಣನಡೆದುದೆಪಾವನಕಾಣಿರೋ
ಶರಣನುಡಿದುದೆ ಶಿವತತ್ತ್ವ ಕಾಣಿರೋ
ಕೂಡಲಸಂಗನಶರಣನ
ಕಾಯವೇ ಕೈಲಾಸ ಕಾಣಿರೋ

ಎಂದು ಹೇಳಿ, ಶರಣನ ನಡೆ–ನುಡಿ; ಆಚಾರ–ವಿಚಾರ ಎಲ್ಲವೂ ಪೂಜೆ, ಮತ್ರ, ಅವನ ಕಾಯ ಕೈಲಾಸ ಎಂದು ಪವಿತ್ರತಮ ಭಾವನೆಯನ್ನು ಶರಣನಿಗೆ ಆರೋಪಿಸಿ ಅವನು 'ಶಿವನ ಸಮ' ಎಂದಿದ್ದಾರೆ. ಆದ್ದರಿಂದಲೇ 'ಅರಿದಡೆ ಶರಣ, ಮರೆದಡೆಮಾನವ' ಎಂದು ನುಡಿದರು. ಅರಿವಿನ ಸಂಸ್ಕಾರವಿದ್ದಲ್ಲಿ ಆತ ಶರಣ. ಆದ್ದರಿಂದಲೇ–

'ಕುಲಮದವಳಿಯದನ್ನಕ್ಕ ಶರಣನಾಗಲೇಕೆ?
ವಿಧಿವಶಬಿಡದನ್ನಕ್ಕ ಭಕ್ತನಾಗಲೇಕೆ?
ಹಮ್ಮಿನಸೊಮ್ಮಿನಸಂಬಂಧ ಬಿಟ್ಟು
ಕಿಂಕಿಲ ಕಿಂಕಿಲ ಕಿಂಕಿಲನಾಗಿರಬೇಕು
ಹೆಪ್ಪೆಱೆದ ಹಾಲು ಕೆಟ್ಟು ತುಪ್ಪವಪ್ಪಂತೆ ಇಪ್ಪರು
ಕೂಡಲ ಸಂಗಮದೇವಾ ನಿಮ್ಮ ಶರಣರು

ಎಂದು ಹೇಳಿ – ನಾನು ಘನ ತಾನು ಘನವೆನ್ನದೆ ಹಿರಿ–ಕಿರಿ ಶಬ್ದವಡಗಿ, ತಾನು ಶರಣ, ಹಮ್ಮುಸೊಮ್ಮಿನ ಸಂಬಂಧವನ್ನು ಬಿಟ್ಟು ಸಮಾಜದ ಕಿಂಕರನಾಗಿ, ಮಾನವತೆಯ ಸಾಧನೆಗಾಗಿ ದುಡಿಯಬೇಕೆಂಬ ಆದರ್ಶವನ್ನು ಬದುಕಿದ ಬಸವಣ್ಣನವರು ಶರಣ ಲಕ್ಷಣವನ್ನು ಬಹುಮಾರ್ಮಿಕವಾಗಿ ವಿವರಿಸಿದ್ದಾರೆ.

ಜಗತ್ತಿಗೆ ಒಳಿತನ್ನು ಮಾಡಬೇಕೆಂದಿದ್ದರೆ ನಮ್ಮ ನಮ್ಮ ತನುವನ್ನು–ಮನವನ್ನು ಮೊದಲು ಸಂತೈಸಿಕೊಳ್ಳಬೇಕೆಂಬುದನ್ನು ಸಾಧಿಸಿ ತೋರಿದರು ಬಸವಾದಿ ಪ್ರಥಮರು. ಜ್ಞಾನ–ಕ್ರಿಯೆಗಳ ಸಂಬಂಧದ ರಹಸ್ಯವನ್ನು ಹಸನುಗೊಳಿಸುವವನಾಗಬೇಕು ಶರಣ ಎಂದು ಬದುಕಿ ಸಾರಿದರು.

'ಅಂತರಂಗದಲ್ಲಿ ಅರಿವಿಲ್ಲದವಂಗೆ
ಬಹಿರಂಗದಲ್ಲಿ ಕ್ರಿಯೆ ಇದ್ದು ಫಲವೇನು?
ಅದು ಕಣ್ಣಿಲ್ಲದ ಬಾಳುವೆಯಂತೆ
ಬಹಿರಂಗದಲ್ಲಿ ಕ್ರಿಯೆ ಇಲ್ಲವಂಗೆ

ಅಂತರಂಗದಲ್ಲಿ ಅರಿವಿದ್ದು ಫಲವೇನು?
ಅದು ಶೂನ್ಯಾಲಯದ ದೀಪದಂತೆ
ಅಂತರಂಗದ ಅರಿವು ಬಹಿರಂಗದ ಕ್ರೀ
ಈ ಉಭ ಒಂದಾಗಬೇಕು'

ಎಂಬ ನಿಲುವು ಶರಣರದ್ದು. ಶರಣ ತನಗಾಗಿ ಮಾಡಬೇಕಾದುದೇನೂ ಇಲ್ಲ; ಆತನ ಕ್ರಿಯೆ ಎಲ್ಲಾ ಸಮಾಜದ ಒಳಿತಿಗಾಗಿ ಧ್ಯಾನ-ಪೂಜೆ, ಜಪ-ತಪಗಳ ಹಂಗು ಆತನಿಗೆ ಇಲ್ಲ. ಅಕ್ಕಮಹಾದೇವಿ ಹೇಳುವಂತೆ –

'ತನು ನಿಮ್ಮರೂಪಾದಬಳಿಕ ಆರಿಗೆ ಮಾಡುವೆ?
ಮನ ನಿಮ್ಮ ರೂಪಾದಬಳಿಕ ಆರನೆನೆವೆ?
ಪ್ರಾಣ ನಿಮ್ಮರೂ ಪಾದ ಬಳಿಕ ಆರನಾರಾಧಿಸುವೆ?
ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ಆರನರಿವೆ?
ಚನ್ನಮಲ್ಲಿಕಾರ್ಜುನಯ್ಯಾ
ನಿಮ್ಮಿಂದನೀವೆಯಾದಿರಾಗಿ ನಿಮ್ಮನೆ ಅರಿವುತಿರ್ದೆನು'

ಎಂಬ ನಿಲವು ಶರಣನದಾಗಬೇಕು. ಇದನ್ನೇ ಅಲ್ಲಮಪ್ರಭುವು "ನೆರೆವರೆಮನವಿಲ್ಲ, ತನುವಿನಾಶೆ ಮುನ್ನಿಲ್ಲ, ನೆನೆವ ಮನವ ನೇತಿಮಾಡುವ ಘನಕ್ಕೆ ಘನವನೇ ನೆಂಬೆನಯ್ಯಾ" ಎಂದು ಶರಣನ ಪರಿಪೂರ್ಣತೆಯನ್ನು ಹೇಳಿದ್ದಾರೆ. ತನ್ನನ್ನು ತಾನು ಹಾಡಿಕೊಳ್ಳುವ ಮಟ್ಟಕ್ಕೆ ಏರಿದವರು ಶರಣರು. ತೆರಹಿಲ್ಲದನಡೆ, ತೆರಹಿಲ್ಲದ ನುಡಿ, ತೆರಹಿಲ್ಲದ ಸ್ವಾನುಭಾವ, ತೆರಹಿಲ್ಲದ ಮಹಿಮೆ, ತೆರಹಿಲ್ಲದ ವಿಚಾರ; 'ಹೀಗೆ ನಿಷೇಧಗಳಿಗೆ ಅತೀತನಾಗಿ ಆನಂತಮಯನಾಗುವ ಕಾರಣ ಶರಣ ವಿಶ್ವಮಾನವ ಮಟ್ಟಕ್ಕೇರಿ – ಮುಂದುವರೆದು ಮಹಾದೇವನೇ ಆಗುತ್ತಾನೆ.

ಶರಣಸ್ಥಲ ಘಟ್‌ಸ್ಥಲಗಳಲ್ಲಿ ಉಪಾಂತಸ್ಥಲ. ಹೀಗಾಗಿ ಐಕ್ಯಸ್ಥಲದ ಬಾಗಿಲ ಬಳಿ ನಿಂತ ಸಾಧಕನ ಉತ್ಕೃಷ್ಟಸ್ಥಿತಿ ಶರಣನದು. ಶರಣನಾದವನು ತನ್ನ ಹಿಂದಿನ ಮಾರ್ಗ ಕ್ರಮದಲ್ಲಿ ಆಸೆಯನ್ನು ಗೆದ್ದು ಅಂಟಿದರೂ ಪ್ರಪಂಚಕ್ಕೆ ಅಂಟದೆ ಇರುತ್ತಾನೆ. ಸ್ವಾನುಭಾವ ವಿವೇಕ ಜನ್ಯವಾದ ಅರಿವಿನ ಎಚ್ಚರ ಶರಣಸ್ಥಲದ ಮುಖ್ಯ ಅಂಶವಾಗಿದೆ. ಇಲ್ಲಿ ಭಕ್ತಿ, ಸತಿ-ಪತಿಭಾವದ್ದು. ಇಲ್ಲಿ ಶರಣನ ಜೀವನ ಒಂದು ಭವ್ಯಗುರಿಯನ್ನು ಹೊಂದಿರಬೇಕು. ಅದಕ್ಕೆಂದೇ ಬಸವಣ್ಣನವರು –

"ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬಾ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬಾ
ಛಲಬೇಕು ಶರಣಂಗೆ ಪರದೈವ ವೊಲ್ಲೆನೆಂಬಾ
ಛಲಬೇಕು ಶರಣಂಗೆ ಲಿಂಗ ಜಂಗಮ ಒಂದೆಂಬಾ
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬಾ"

ಎಂದು ಹೇಳಿ ಶರಣನಲ್ಲಿ ಇರಬೇಕಾದ ಸಾತ್ವಿಕಫಲ ಗುಣವನ್ನು ಎತ್ತಿ ಹೇಳಿ ಅದು ಶೀಲಮುಖಿಯಾಗಬೇಕು, ಊರ್ಧ್ವಗಾಮಿಯಾಗಿರಬೇಕೆಂದು ತಿಳಿಸಿದ್ದಾರೆ.

ಹೀಗೆ 'ಶರಣ'ನ ಪರಿಕಲ್ಪನೆ ವೀರಶೈವ ಧರ್ಮದಲ್ಲಿ ಉನ್ನತವಾದುದು. ಸಾಧನೆಯ ತುದಿಯಲ್ಲಿ ನಿಂತು ಭವ್ಯದರ್ಶನವನ್ನು ನೀಡುತ್ತದೆ. ವಚನ ಸಾಹಿತ್ಯದಲ್ಲಿಯಂತೂ ವಿಶಿಷ್ಟ ಅರ್ಥಪಡೆದುಕೊಂಡು ಮೆರೆದಿದೆ.

ಶರಣರ ಜೀವನಕ್ರಮವೇ ವಿಶಿಷ್ಟವಾದುದಾಗಿ ಅದು ಶರಣ ಸಂಸ್ಕೃತಿ ಎನ್ನಿಸಿತು.

ಸಂಸ್ಕೃತಿ ಮಾನವ ಸಮಾಜದ ವಿಶಿಷ್ಟ ಕೊಡುಗೆ. ಸ್ವಾಮಿನಿಷ್ಠೆ ಸಾಧುತನ, ಕಷ್ಟ ಸಹಿಷ್ಣುತೆ ಮುಂತಾದಗುಣಗಳನ್ನು ಮನುಷ್ಯ ಹೊಂದಿರಬೇಕು. ತನ್ನ ಸಂಸ್ಕೃತಿ ಯಿಂದಾಗಿ ತನ್ನ ಸುತ್ತಲೂ ಇರುವ ಪರಿಸರವನ್ನು ಉದಾತ್ತಗೊಳಿಸುತ್ತಾನೆ. ಮೇಲಿನ ಗುಣಗಳನ್ನು ಅಳವಡಿಸಿಕೊಂಡು ಮಾನವ ಸುಸಂಸ್ಕೃತ ಎನಿಸಿಕೊಳ್ಳುತ್ತಾನೆ. ಈ ಎಲ್ಲಾ ಗುಣಗಳು ಮಾನವನ ಅಂತರಂಗದ ಬೆಳವಣಿಗೆಯ ದ್ಯೋತಕ. ಆದ್ದರಿಂದ 'ಸಂಸ್ಕೃತಿ' ಎಂದರೆ ಅಂತರಂಗದ ಸಹಜ ಸ್ವಭಾವ. ಇಂಗ್ಲೀಷಿನ culture ಶಬ್ದಕ್ಕೆ ಸಂವಾದಿಯಾಗಿ ಸಂಸ್ಕೃತಿ ಶಬ್ದ ಪ್ರಯೋಗವಾಗುತ್ತಿದೆ. culture ಶಬ್ದ ಲ್ಯಾಟಿನ್ ಭಾಷೆಯ 'cult' ಶಬ್ದದಿಂದ ಬಂದಿದೆ. cult ಎಂದರೆ ಗೌರವಿಸು, ಆರಾಧಿಸು ಎಂಬರ್ಥಗಳಿವೆ. ಅಂದರೆ ಯಾವ ಕಾರ್ಯ ಆರಾಧಿಸಲ್ಪಡುತ್ತದೆಯೋ ಅದು cult ಜೀವನ ಮೌಲ್ಯಗಳಾದ ಸತ್ಯ, ಶೀಲ, ನ್ಯಾಯ, ಅಹಿಂಸೆ, ಧರ್ಮ, ಸಹಜೀವನಗಳನ್ನು ಮಾನ್ಯಮಾಡಿ ಅವುಗಳನ್ನು ಆಚರಿಸುವುದೇ 'ಸಂಸ್ಕೃತಿ'. ಮೌಲಿಕವಾದ ಧ್ಯೇಯಧೋರಣೆಗಳು, ಉತ್ತಮ ಆಚಾರ-ವಿಹಾರ. ಸತ್ಕಾರ್ಯ, ತತ್ತ್ವ ಜ್ಞಾನ, ಸಾಹಿತ್ಯ, ನಾಟಕ, ಸಂಗೀತ. ಕಲೆ, ಶಿಕ್ಷಣ. ಧರ್ಮ , ಆಹಾರ-ವಿಹಾರ. ಹಬ್ಬಗಳು ಸಂಸ್ಕೃತಿಯ ದ್ಯೋತಕವಾಗಿವೆ. ಈ ಹಿನ್ನೆಲೆಯಲ್ಲಿ ಟಿ.ಎಸ್. ಇಲಿಯಟ್ ಎಂಬ ಆಂಗ್ಲ ವಿದ್ವಾಂಸರು ತಮ್ಮ 'Notes towards the definition of culture' ಕೃತಿಯಲ್ಲಿ 'Particular people living together in one place; that cultre is made visible in their arts, in their social system, int their habits and customs, in their religion ' ಎಂದು ಹೇಳಿದ್ದಾರೆ. ಅಂದರೆ 'ಒಂದು ಪ್ರದೇಶದಲ್ಲಿ ಒಟ್ಟಾಗಿ ವಾಸಿಸುವ ಒಂದು ಜನಾಂಗದ ಸಂಸ್ಕೃತಿ. ಕಲೆ. ಸಾಮಾಜಿಕ ವಿಧಾನ, ಅವರ ಗುಣ ಮತ್ತು ಧಾರ್ಮಿಕ ವಿಧಿ ವಿಧಾನಗಳಲ್ಲಿ ಅಭಿವ್ಯಕ್ತವಾಗುತ್ತದೆ' ಎಂದಾಗುತ್ತದೆ. ಹಲವು ಪದಾರ್ಥಗಳು ಸೇರಿ ಹೇಗೆ ಅಡಿಗೆ ಸಿದ್ಧವಾಗುತ್ತದೆಯೋ ಹಾಗೆ ಬದುಕಿನ ಸಮಗ್ರತೆ ಸೇರಿ ಸಂಸ್ಕೃತಿಯಾಗುತ್ತದೆ.

ಸಂಸ್ಕೃತಿ ಎಂದರೆ ಮಾನವನ ಅಂತಂಗದ ಸುಸ್ಥಿತಿ. ಪರಿಪಾಕ ಜೀವನ ಸಾರವನ್ನು ಗ್ರಹಿಸಿ ಆನಂದಿಸುವ ಒಂದು ಪ್ರವೃತ್ತಿ. ಸಂಸ್ಕೃತಿ ಮಾನವನಿಗೆ ತೇಜಸ್ಸನ್ನು ತರುತ್ತದೆ. ನಮ್ಮ ಜೀವನವನ್ನು ಸಾಧುವನ್ನಾಗಿ ಮಾಡಿಕೊಳ್ಳುವ ವಿಧಾನವೇ ಸಂಸ್ಕೃತಿ. ಸಂಸ್ಕೃತಿ ಉಳ್ಳವನ ನಡೆಯಲ್ಲಿ ನಯ. ನುಡಿಯಲ್ಲಿ ವಿನಯ. ಹೃದಯದಲ್ಲಿ ಸಂಪನ್ನತೆಗಳು ಒಡಮೂಡುತ್ತವೆ.

ಧರ್ಮ ಸಂಸ್ಕೃತಿಯ ಜೀವಾಳ, ಒಳ್ಳೆಯದನ್ನು ಎತ್ತಿ ಹಿಡಿದು, ಕೆಟ್ಟದ್ದನ್ನು ವರ್ಜಿಸಲು ತಿಳಿಸುತ್ತದೆ. ಮಾನವನ ಜನನ-ಮರಣ, ಬೆಳಗು-ಸಂಜೆ ನಿದ್ರಾವಸ್ಥೆಗಳಲ್ಲಿ ಸಾಗಿಸುವ ಜೀವನ ಕ್ರಮ ಮತ್ತು ಧಾರ್ಮಿಕ ಪರಿಪೂರ್ಣ ಜೀವನ ಸಂಸ್ಕೃತಿ ಎನಿಸುತ್ತದೆ. ಯಾವುದೇ ಧರ್ಮ ಅಸ್ತಿತ್ವದಲ್ಲಿರುವಾಗ ಜೀವನಕ್ಕೆ ತನ್ನದೇ ಆದ ಪರಿಪೂರ್ಣ ಅರ್ಥವನ್ನು ನೀಡುತ್ತದೆ. ತನ್ಮೂಲಕ ಸಂಸ್ಕೃತಿಗೆ ಚೌಕಟ್ಟನ್ನು ನೀಡಿ ಜನಸಮುದಾಯವನ್ನು ರಕ್ಷಿಸುತ್ತದೆ" ಎಂದು ಟಿ.ಎಸ್. ಇಲಿಯಟ್ ತಿಳಿಸುತ್ತಾರೆ.

"ಸುಸಂಸ್ಕೃತ ಗುಣ ಸಂಪತ್ತು ಸಂಸ್ಕೃತಿ. ಸಂಸ್ಕೃತಿ ಎಂಬುದು ಬರಿಯ ವಿದ್ಯೆಯಲ್ಲ. ಅದು ವಿದ್ಯಾಕುಸುಮಪರಾಗ. ಅದು ಸಾಹಿತ್ಯ ಪರಾಮರ್ಶೆಯ ಮತ್ತು ಜೀವನಾನುಭವ ವಿವೇಕದ ದಾಂಪತ್ಯದಿಂದ ಜನಿಸುವ ಒಂದಾನೊಂದು ಲೋಕ ಸಮಾಧಾನ ಕಾರಕವಾದ ಶೀಲ ಸೌಭಾಗ್ಯ. ಅದು ಜೀವನದ ನಾನಾ ವಿಷಯಗಳ, ನಾನಾ ಧ್ಯೇಯಗಳ, ನಾನಾ ತತ್ತ್ವಗಳ, ನಾನಾ ಧರ್ಮಗಳ, ಮೌಲ್ಯ ತಾರತಮ್ಯ ಜ್ಞಾನ ದಿಂದಾದ ಸಮನ್ವಯ ಸ್ವಾರಸ್ಯ. ನಮ್ಮ ಜೀವನವನ್ನು ಸಾಧುವನ್ನಾಗಿ ಮಾಡಿಕೊಳ್ಳುವ ವಿಧಾನವೇ ಸಂಸ್ಕೃತಿ. ಲೋಕದೊಡನೆ ನಮಗಾಗುವ ನಾನಾ ಸಂಪರ್ಕಗಳಲ್ಲಿ ನಾವು ಸಂಪಾದಿಸುವ ಔಚಿತ್ಯವೇ ಸಂಸ್ಕೃತಿ. ನಿಜವಾದ ಸಂಸ್ಕೃತಿ ಭೌತ ಸಂಪತ್ತಿನ ಪ್ರಗತಿಗಿಂತ ಆತ್ಮ ಸಂಪತ್ತಿನ ಪ್ರಗತಿ ಹೆಚ್ಚಾದುದು. ಸಂಸ್ಕೃತಿ ಅಂತರಂಗದ ಪರಿಪಾಕ" ಎಂದು ಸಂಸ್ಕೃತಿಯನ್ನು ಕುರಿತ ಡಿ.ವಿ. ಗುಂಡಪ್ಪನವರು ಹೇಳಿರುವ ಮಾತುಗಳು ಮನನೀಯವಾದವುಗಳು.

'ಸಂಸ್ಕೃತಿ' ಎಂದಾಗ ಆಚರಣೆ, ಸಂಪ್ರದಾಯ, ನಡವಳಿಕೆ ಇತ್ಯಾದಿ ಅರ್ಥಗಳೂ ಇವೆ. ಹೀಗೆ ಹನ್ನೆರಡನೆ ಶತಮಾನದ ಬಸವಾದಿ ಪ್ರಮಥರು ಬದುಕಿದ ಜೀವನಕ್ರಮ 'ಶರಣಸಂಸ್ಕೃತಿ'ಯಾಗಿದೆ. ಅವರ ಮನಸ್ಸಿನ ಪರಿಪಾಕ, ಜೀವನಕ್ರಮವಾಗಿ ಇಡೀ ಜಗತ್ತಿಗೆ ಮಾದರಿಯಾಗುವಂತಹ ಆಚರಣೆ, ನಡೆವಳಿಕೆಗಳನ್ನು ಶರಣರು ಅಂದು ಬದುಕಿದರು. ಅವರ ಬದುಕೇ ಶರಣ ಸಂಸ್ಕೃತಿಯಾಯಿತು.

ಭಾರತದ ಪ್ರಾಚೀನ ಜೀವನ ಕ್ರಮದಲ್ಲಿನ ವರ್ಣಾಶ್ರಮ ಧರ್ಮಗಳಲ್ಲಿನ ನ್ಯೂನತೆಯನ್ನು ಶರಣರು ಖಂಡಿಸಿ, ನಿರಾಕರಿಸಿ ಸರ್ವಸಮಾನತೆಯ ಜೀವನಕ್ರಮವನ್ನು ಅನುಸರಿಸಿದ ಶರಣರ ಬದುಕು ವಿಶಿಷ್ಟಸಂಸ್ಕೃತಿಯಾಯಿತು. ಇಡೀ ಸೃಷ್ಟಿಗೆ ಕಾರಣೀಭೂತನಾದ ಪರಮಾತ್ಮನ ಅಸ್ತಿತ್ವವನ್ನು ಒಪ್ಪಿದ ಶರಣರು, ಬಹುದೇವೋ ಪಾಸನೆಯನ್ನು ನಿರಾಕರಿಸಿ, ಏಕದೇವೋಪಾಸನೆಯನ್ನು ರೂಢಿಸಿದರು. ಇದನ್ನೇ ಬಸವಣ್ಣನವರು 'ಛಲಬೇಕು ಶರಣಂಗೆ ಪರದೈವ ಒಲ್ಲೆನೆಂಬ' ಎಂದು ಹೇಳಿದರು. ಊರದಾರಿಗಳಲ್ಲಿ ಚೌಪಥಗಳಲ್ಲಿ, ಹಾದಿ ಬೀದಿಯಲ್ಲಿ ದೇವರುಗಳನ್ನು ಕೂಡಿಸಿ, ದೇವರ ದೇವರೆಂದು ಆರಾಧಿಸುವ ಕ್ರಮವನ್ನು ಶರಣರು ಖಂಡಿಸಿದರು. ಎಲ್ಲವೂ ಆ ದೇವನ ಕೃಪೆ. ಆ ಕೃಪೆಯನ್ನು ಮರೆಯುವ ಮಾನವ ಸ್ವಭಾವವನ್ನು ಜೇಡರದಾಸಿಮಯ್ಯಗಳು -

'ಇಳೆ ನಿಮ್ಮದಾನ, ಬೆಳೆ ನಿಮ್ಮ ದಾನ,
ಸುಳಿದು ಬೀಸುವ ವಾಯು ನಿಮ್ಮ ದಾನ,

ಕಾಯ ನಿಮ್ಮದಾನ, ಜೀವ ನಿಮ್ಮ ದಾನ
ಎತ್ತು ನಿಮ್ಮ ದಾನ, ಬಿತ್ತು ನಿಮ್ಮ ದಾನ,
ಸುತ್ತಿ ಹರಿವ ಸಾಗರ ನಿಮ್ಮ ದಾನ'

ಎಂದು ಹೇಳಿ' ನಿಮ್ಮ ದಾನವನುಂಡು ಅನ್ಯರಹೊಗಳುವಕುನ್ನಿಗಳನೇನೆಂಬೆ' ಎಂಬ ಮಾತಿನಲ್ಲಿ ಖಂಡಿಸಿ ದೈವಕೃಪೆಯನ್ನು ಮರೆವ ಮಾನವ ಸ್ವಭಾವವನ್ನು ತಿದ್ದಿದರು.

ಅಂದಿಗೆ ರೂಢಿಯಲ್ಲಿದ್ದ ಜಾತಿ ವ್ಯವಸ್ಥೆ, ಮೇಲು – ಕೀಳೆಂಬ ವ್ಯವಸ್ಥೆಯನ್ನು ಖಂಡಿಸಿ –

'ಸೆಟ್ಟಿಯೆಂಬೆನೆ ಸಿರಿಯಾಳನ
ಮಡಿವಾಳನೆಂಬನೆ ಮಾಚಯ್ಯನ
ಡೋಹಾರ ನೆಂಬೆನೆ ಕಕ್ಕಯ್ಯನ
ಮಾದಾರನೆಂಬೆನೆ ಚನ್ನಯ್ಯನ"

ಎಂದು ಶ್ರೇಣಿಕೃತ ಸಮಾಜ ವ್ಯವಸ್ಥೆಯನ್ನು ತಿರಸ್ಕರಿಸಿ ಸರ್ವಸಮಾನತೆಯ ಜೀವನ ಕ್ರಮವನ್ನು ರೂಢಿಸಿದ ಕೀರ್ತಿ ಶರಣರದು.

ಕೊಲುವವನೇ ಮಾದಿಗ
ಹೊಲಸುತಿಂಬುವವನೆ ಹೊಲೆಯ
ಕುಲವೇನೋ ಆವಂದಿರ ಕುಲವೇನೋ
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು"

ಎಂದು ಹೇಳಿ ಕುಲ–ಕುಲವೆಂದು ಸಮಾಜವನ್ನು ಒಡೆಯುವುದು ಬೇಡ. ಎಲ್ಲರೊಳಗೊಂದಾಗಿ, ಎಲ್ಲರೂ ಒಂದಾಗಿ, ಆನಂದದಿಂದ ಬದುಕಿ, ಸಾಧನೆಯ ಮಾರ್ಗದಲ್ಲಿ ನಡೆದು ಆ ಪರಮಾತ್ಮನಲ್ಲಿ ಐಕ್ಯವಾಗಬೇಕೆಂದು ಶರಣರು ಹೇಳಿದರಷ್ಟೇ ಅಲ್ಲ, ಹಾಗೆಯೇ ಬದುಕಿದರು. ಅದಕ್ಕೆ ಅವನ ಜೀವನಕ್ರಮ ಆದರ್ಶವಾಯಿತು. ಅದೇ ಸಂಸ್ಕೃತಿಯಾಯಿತು. ಇಡೀ ಜಗತ್ತಿಗೆ ಮಾನವರೆಲ್ಲಾ ಒಂದೇ, ನೆಲ ಬೇರೆ ಯಾದರೇನು, ಇಡೀ ಮಾನವ ಜನಾಂಗ ಸರ್ವಸಮಾನ ಎಂದು ಬೋಧಿಸಿದರು. ಬದುಕಿಮಾರ್ಗದರ್ಶಿಗಳಾದರು.

ಹೀಗಾಗಿ ಶರಣರು ಬದುಕಿದ ಕ್ರಮ ವಿಶಿಷ್ಟ ಸಂಸ್ಕೃತಿಯೆನಿಸಿ ವಿಶ್ವಕ್ಕೆ ಮಾದರಿ ಯಾದ ಸಂಸ್ಕೃತಿಯಾಗಿದೆ.

□

---

* ದಿನಾಂಕ: ೨೧-೭-೨೦೦೪ರಂದು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿ ನೀಡಿದ ದತ್ತಿ ಉಪನ್ಯಾಸ.

೩. ಗಮನ ಸೆಳೆಯಬಲ್ಲ ಕನ್ನಡದ ಐದು ಕೃತಿಗಳು

• **ಪ್ರೊ. ಎಂ. ಧ್ರುವನಾರಾಯಣ**

ಕನ್ನಡ ಸಾಹಿತ್ಯ ಗಂಗೆಯು ನೃಪತುಂಗನ ಕಾಲದಿಂದಲೂ ಅವ್ಯಾಹತವಾಗಿ ಹರಿದು ಬರುತ್ತಲೇ ಇದೆ. ಈ ದಿಶೆಯಲ್ಲಿ ನಾನು ಓದುಗರ ಗಮನ ಸೆಳೆಯಲು ಐದು ಕೃತಿಗಳನ್ನು ಆಯ್ಕೆ ಮಾಡಿಕೊಂಡಿರುವೆ : (೧) ಸಿರಿ ಭೂವಲಯ (೨) ಲೋಕೋಪಕಾರ (೩) ರಟ್ಟಮತ (೪) ಕಾಮಾಂದಕೀಯ ನೀತಿಶಾಸ್ತ್ರ ವ್ಯಾಖ್ಯಾಟೀಕೆ (೫) ಇಮ್ಮಡಿ ವರದರಾಜಾಚಾರ್ಯ ವಿರಚಿತ ಶ್ರೀ ಭಗವದ್ಗೀತಾ ಪ್ರಕಾಶ.

೧. **ಸಿರಿ ಭೂ ವಲಯ:** ಇದೊಂದು ವಿಸ್ಮಯಕಾರ ಕೃತಿ ಬಹುಶಃ ಈ ಬಗೆಯ ಕೃತಿಯನ್ನು ನಾವು ಇಂದು ಊಹಿಸಲೂ ಅಸಾಧ್ಯ. ಆದರೆ ಈ ಕೃತಿಗೆ ದೊರೆಯಬೇಕಾದ ಸ್ಥಾನ-ಮಾನ ದೊರಕದೇ ಇರುವುದು ಶೋಚನೀಯ. ಕಾರಣ ಎಂದರೆ ಈ ಕೃತಿಯ ಬಗೆಗೆ ಆಧುನಿಕ ಸಾಹಿತಿ ವಿದ್ವಾಂಸರು ತಮ್ಮ ಗಮನ ಹರಿಸದೇ ಹೋದುದು. ಮುಂದುವರಿದು ಹೇಳಬಹುದಾದರೆ ಈ ಕೃತಿಯ ಬಗೆಗೆ ಸಂಶೋಧನೆಯ ಕಾರ್ಯ ನಡೆದಿಲ್ಲ. ಸಿರಿ ಭೂವಲಯ ವಿಶ್ವದ ವಿಸ್ಮಯಗಳಲ್ಲಿ ಒಂದು ಎಂದೇ ಬಲ್ಲವರ ಹೇಳಿಕೆ. ಈ ಗ್ರಂಥವನ್ನು ರಚಿಸಿದ ಕವಿಯ ಹೆಸರು ಕುಮುದೇಂದು; ಜೈನ, ಕನ್ನಡಿಗ. ವಿದ್ವಾಂಸರಲ್ಲಿ ಇವನ ಕಾಲದ ಬಗೆಗೆ ಭಿನ್ನಾಭಿಪ್ರಾಯಗಳಿವೆ.

ಕುಮುದೇಂದು ರಚಿಸಿದ ಈ 'ಸಿರಿ ಭೂವಲಯ' ಅಂಕಿಗಳಲ್ಲಿ ರಚಿಸಲಾಗಿದೆ. ಹೀಗಾಗಿ ಈ ಕೃತಿ ಅಂತಾಕ್ಷರ ವಿಜ್ಞಾನ ಎಂಬ ಗೌರವವನ್ನು ಪಡೆದಿದೆ. ಈ ಗ್ರಂಥದಲ್ಲಿ ಸುಮಾರು ೭೧೮ ಭಾಷೆಗಳು ಅಡಕವಾಗಿವೆ ಎಂದೇ ಹೇಳಲಾದರೂ ಅದನ್ನು ಸಮರ್ಪಕವಾಗಿ ಹೇಳಲು ಸಾಧ್ಯವಾಗಿಲ್ಲ. ಏಕೆಂದರೆ ಇದನ್ನು ಡೆಸಿಫರ್ ಮಾಡಬಲ್ಲ ವಿದ್ವಾಂಸರು ದೊರೆಯದೇ ಇರುವುದು. ಹೀಗಾಗಿ ಇದರ ಅಧ್ಯಯನಕ್ಕೆ ಅವಕಾಶವಿಲ್ಲದೇ ಹೋಗಿದೆ.

ಈ ಕೃತಿಯ ಬಗೆಗೆ ಆಸಕ್ತಿ ಹೊಂದಿ ಸಂಶೋಧನೆ ಮಾಡಿ ಸಂಸ್ಕರಿಸಿ ಬೆಳಕಿಗೆ ಬರುವಂತೆ ಮಾಡಿದ ಮೂವರು ಮಹನೀಯರೆಂದರೆ : ಪಂಡಿತ ಎಲ್ಲಪ್ಪಶಾಸ್ತ್ರಿ, ಕರ್ಲಮಂಗಲಂ ಶ್ರೀಕಂಠಯ್ಯ, ಕೆ. ಅನಂತಸುಬ್ಬರಾಯರು. ಈ ವಿದ್ವಾಂಸರು

ಹೇಳುವಂತೆ ಈ ಗ್ರಂಥದಲ್ಲಿ ೭೧೮ ಭಾಷೆಗಳ ಕೃತಿಗಳನ್ನು ಹೆಣೆಯಲಾಗಿದೆ. ಇವನ್ನು ಚಕ್ರಬಂಧ, ಸಂಖ್ಯಾಲಿಪಿಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ಕೃತಿ ಕೇವಲ ೬೪ ಸಂಖ್ಯೆಗಳಲ್ಲಿ ವಿವರಿಸಲಾಗಿದೆ. ಇಂದು ನಾವು ಕಂಪ್ಯೂಟರ್ ಯುಗದಲ್ಲಿದ್ದೇವೆ. ಆದರೆ ಸುಮಾರು ಹನ್ನೆರಡು ಶತಮಾನಗಳ ಹಿಂದೆಯೇ ಓರ್ವ ಕನ್ನಡ ಜೈನ ಮುನಿಯಿಂದ ಈ ವಿಸ್ಮಯ ಕಾವ್ಯರಚನೆಯಾದುದು ಕನ್ನಡಿಗರಿಗೆ ಹೆಮ್ಮೆಯವಿಷಯ. ಈ ಕೃತಿ ಕನ್ನಡಿಗರ ಜಾಣ್ಮೆಯ ಪ್ರತೀಕವಾಗದೆ. ಆದರೂ ವಿದ್ವಾಂಸರಿಗೆ ಸವಾಲಾಗಿದೆ. ಏಕೆಂದರೆ ಇದರಲ್ಲಿ ಅಡಕವಾಗಿರುವ ಜ್ಞಾನ ಭಂಡಾರ ಯಾರಿಗೂ ದೊರೆಯದೇ ಹೋಗಿದೆ.

ವಿದ್ವಾಂಸರು ಈ ಗ್ರಂಥವನ್ನು ಕನ್ನಡದ ಕಾಮಧೇನು ಹಾಗೂ ಕಲ್ಪವೃಕ್ಷವೆಂದೇ ಹೊಗಳಿದ್ದಾರೆ. ಈ ಗ್ರಂಥವನ್ನು ರಚಿಸಿದ ಶೀ ಕುಮುದೇಂದು ಚಿಕ್ಕಬಳ್ಳಾಪುರ ತಾಲೂಕಿನ ನಂದೀಬೆಟ್ಟದ ಬಳಿಯಲ್ಲಿರುವ ಯಲವಳ್ಳಿಯವರು. ಈಗಾಗಲೇ ಹೇಳಿದಂತೆ ಈ ಕಾವ್ಯ ಯಾವುದೇ ಲಿಪಿಯಲ್ಲಿರದೆ ಕೇವಲ ಕನ್ನಡ ಅಂಕಿಗಳಲ್ಲಿ ಬರೆಯಲಾಗಿದೆ. ಇದರಲ್ಲಿ ೧ರಿಂದ ೬೪ ಸಂಖ್ಯೆಗಳನ್ನು ಮಾತ್ರ ಉಪಯೋಗಿಸಿದೆ. ಪ್ರತಿಯೊಂದು ಚಕ್ರದಲ್ಲಿ ೨೭ X ೨೭ = ೭೨೯ ಮನೆಗಳೂ ಹಾಗೂ ಸಂಖ್ಯೆಗಳಿವೆ. ಒಟ್ಟಾರೆ ೧೬,೦೦೦ ಚಕ್ರಬಂಧಗಳಿವೆ ಎಂದು ಹೇಳಲಾಗಿದೆ.

ಸೋಜಿಗದ ವಿಷಯ ಎಂದರೆ ಮೇಲೆ ಹೇಳಲಾದ ೧ ರಿಂದ ೬೪ರ ವರೆಗಿನ ಸಂಖ್ಯೆಗಳು ಅಕಾರದಿಂದ ಆರಂಭವಾಗುವ ೬೪ ಅಕ್ಷರಧ್ವನಿಗಳಾಗಿವೆ. ಇವುಗಳಲ್ಲಿ ೨೭ ಸ್ವರಗಳೂ, ೩೩ ವ್ಯಂಜನಗಳೂ, ೪೬ ಯೋಗವಾಹಗಳೂ ಇವೆ. ನಾವು ಮನವರಿಕೆ ಮಾಡಿಕೊಳ್ಳಬೇಕಾದ ವಿಷಯ ಎಂದರೆ ಅನಾದಿಕಾಲದಿಂದಲೂ ಮಾನವ ಪಶುಪಕ್ಷಿಗಳು ಪರಮಾತ್ಮನುದಯಪಾಲಿಸಿದ ದಿವ್ಯಧ್ವನಿಯಿಂದ ಹೊರಹೊಮ್ಮಿ ನಂತರ ಭಾಷೆಯಾಗಿ ಪರಿವರ್ತನೆಗೊಂಡಿವೆ. ಹೀಗಾಗಿ ಕುಮುದೇಂದು ಮುನಿಯು ತಮ್ಮ ಹಿರಿಯ ತೀರ್ಥಂಕರರರ ಜಾಡಿನಲ್ಲಿಯೇ ನಡೆದು ಚಕ್ರಬಂಧ ಸಂಖ್ಯಾಲಿಪಿಯನ್ನು ತಮ್ಮ ಗ್ರಂಥದಲ್ಲಿ ಅಳವಡಿಸಿಕೊಂಡಿದ್ದಾರೆ. ಈ ಕವಿಯು ನಾಗಾರ್ಜುನರ "ಕಕ್ಷ ಪುಟ" ಗಣಿತದಂತೆ ಅಂಕಗಳಲ್ಲಿಯೇಗಣಿತ ಪದ್ಧತಿಯಲ್ಲಿ ತಮ್ಮ ಗ್ರಂಥವನ್ನು ಬರೆದಿದ್ದಾರೆ. ದಿವಂಗತ ಅನಂತ ಸುಬ್ಬರಾಯರು ಹೇಳಿದಂತೆ, ಕೇವಲ ೧ ರಿಂದ ೯ ಹಾಗೂ '೦' ಯಿಂದ ಬರೆಯಲಾದ ೯೨ (?) ಸಂಖ್ಯೆಗಳಲ್ಲಿ ಧ್ವನಿಗಳಲ್ಲಿ ಅಥವಾ ಅಕ್ಷರಗಳಲ್ಲಿ ವಿಶ್ವದ ಎಲ್ಲಾ ಭಾಷೆಗಳ ಎಲ್ಲಾ ವಿಧವಾದ ಧ್ವನಿಗಳನ್ನೂ ರಚಿಸಬಹುದು. ಹೀಗಾಗಿ ಯಾರು ಬೇಕಾದೂ ಯಾವ ಭಾಷೆಯ ಶಬ್ದಗಳನ್ನು ತಪ್ಪಿಲ್ಲದೇ ಸ್ಪಷ್ಟವಾಗಿ ನಿರ್ದಿಷ್ಟವಾಗಿ ಓದಿ ಬರೆಯಬಹುದು. ಈ ಹಂತದಲ್ಲಿ ನಾವು ಅರಿಯಲೇಬೇಕಾದ ವಿಷಯವೆಂದರೆ ಇಂದಿನ ಬಹುಭಾಷಾ ಲಿಪಿಯ ಸಮಸ್ಥೆಯನ್ನು ಸೂಕ್ತವಾಗಿ ಪರಿಹರಿಸಬಲ್ಲ ಒಂದು ವಿಧಾನವನ್ನು ಈ ಕವಿ ಬಹು ಹಿಂದಿನ ಕಾಲದಲ್ಲಿಯೇ ತೆರೆದಿಟ್ಟಿದ್ದಾನೆ. ಈ ವಿಧಾನದಿಂದ ಕೇವಲ ೧ ರಿಂದ ೯ರವರೆಗಿನ ಅಂಕಿ ಸಂಖ್ಯೆಗಳಿಂದ ಇಡೀ ವಿಶ್ವ ಬಹು ಸುಲಭವಾಗಿ ಏಕಲಿಪಿ ಪದ್ಧತಿಯನ್ನು ಜಾರಿಗೊಳಿಸಬಹುದು. ಅನಂತಸುಬ್ಬರಾಯರು

ಹೇಳಿದಂತೆ ಈ ಗ್ರಂಥದಲ್ಲಿ ೭೧೮ ಭಾಷೆಗಳು, ೩೬೩ ಮತಗಳು, ೬೪ ವಿದ್ಯೆ ಅಥವಾ ಕಲೆಗಳಿವೆ.

ಹೀಗಾಗಿ ಕನ್ನಡ ಸಾಹಿತ್ಯಲೋಕದ ಕಾಮಧೇನು, ಕಲ್ಪವೃಕ್ಷ ಎನಿಸಿಕೊಂಡಿರುವ ಈ ಗ್ರಂಥದ ಬಗೆಗೆ ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ವಿವಿಧ ಅಕಾಡೆಮಿಗಳಲ್ಲಿ ಅವಕಾಶ ಕಲ್ಪಿಸಿ ಇದರಲ್ಲಿ ಅಡಗಿರಬಹುದಾದ ಜ್ಞಾನಭಂಡಾರವನ್ನು ಹೊರ ಗೆಡಹಿದಲ್ಲಿ ಉಪಕಾರವಾಗುತ್ತದೆ.

೨. ರಟ್ಟಮತಂ: ಮಳೆಕೊಯಿಲಿನ ಬಗೆಗೆ ಇಂದು ಪುಂಖಾನುಪುಂಖವಾಗಿ ಅಧಿಕಾರಿಗಳು ಹಾಗೂ ಸಚಿವರು ಮಾತನಾಡುತ್ತಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ನಾನು ಈ ಕೃತಿಯ ಬಗೆಗೆ ನಾಲ್ಕು ಮಾತುಗಳನ್ನು ಓದುಗರ ಗಮನಕ್ಕೆ ತರಬಯಸುತ್ತೇನೆ. ಈ ಗ್ರಂಥಕ್ಕೆ ರಟ್ಟಮತ ಅಥವಾ ರಟ್ಟಶಾಸ್ತ್ರ ಎಂದೇ ಕರೆಯಲಾಗಿದೆ. ಈ ಗ್ರಂಥವನ್ನು ಹಿಂದಿನ ಮದ್ರಾಸು ಸರಕಾರದ ಓರಿಯಂಟಲ್ ಸೀರೀಸ್‌ನವರು ೧೯೫೦ರಲ್ಲಿ ಪ್ರಕಟಿಸಿದ್ದಾರೆ. ಮದ್ರಾಸ್ ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಹೆಚ್. ಶೇಷಅಯ್ಯಂಗಾರ್ ಅವರು ತಮ್ಮ ಮುನ್ನುಡಿಯನ್ನು ಬರೆದು ಪ್ರಕಟನೆಗೆ ಕಾರಣರಾಗಿದ್ದಾರೆ. ಶೇಷ ಅಯ್ಯಂಗಾರ್ ಅವರು ತಮ್ಮ ಮುನ್ನುಡಿಯಲ್ಲಿ ಹೇಳಿದಂತೆ ಈ ಗ್ರಂಥದ ಕರ್ತೃ ಅಟ್ಟು ಅಥವಾ ಭೂತುಗವಣಿಗಂ ಇರಬಹುದು. ಕವಿಯೇ ತನ್ನ ಒಂದು ಪದ್ಯದಲ್ಲಿ ಹೇಳಿಕೊಂಡಂತೆ;

"ಪುರಾಣಾಚಾರ್ಯರು ಹೇಳಿದ ಮಳೆಯ ಕುರಿಪನ್ನು ಚಂದಿರಭಟ್ಟರ ದಯೆಯಿಂದ ಸಂದೇಹವಿಲ್ಲದಂತೆ ತಿಳಿದುಕೊಳ್ಳಬೇಕು" ಎಂದೇ ಹೇಳಿರುವುದರಿಂದ ಅವರಿಗೆ ಚಂದಿರಭಟ್ಟ ಎಂಬ ಹೆಸರೂ ಇರಬಹುದು ಅಥವಾ ಚಂದಿರಭಟ್ಟನೆಂಬ ಓರ್ವ ಆಚಾರ್ಯರೂ ಇದ್ದಿರಬಹುದು.

ಈ ಗ್ರಂಥವು ಕವಿಯ ಸ್ವತಂತ್ರ ಗ್ರಂಥವಾಗಿರದೇ ಹಲವಾರು ಸಂಸ್ಕೃತ ಸಂಹಿತೆಗಳ ಆಧಾರದಿಂದ ಬರೆದ ಗ್ರಂಥವಾಗಿದೆ. ಈ ಗ್ರಂಥವನ್ನು ವೃತ್ತ ಕಂದಗಳಲ್ಲಿ ಬರೆಯಲಾಗಿದೆ. ಈ ಗ್ರಂಥ ೧೨ ಅಧ್ಯಾಯಗಳಿಂದ ಕೂಡಿದೆ. ಗ್ರಂಥದುದ್ದಕ್ಕೂ ಕೇವಲ ಮಳೆ, ಅದರ ಲಾಭ, ಅದರ ಶಕುನ, ವಾಯುಚಕ್ರದ ಸಹಾಯದಿಂದ ಮಳೆ ಬರಬಹುದಾದ ದಿಕ್ಕನ್ನು ಅರಿಯುವ ಮಳೆಯಿಂದಾಗುವ ವಿಕಾರಗಳು, ಮಳೆಯ ಪ್ರಮಾಣ ಮಳೆಸುರಿಸಬಲ್ಲ ಮೇಘ ಅಥವಾ ಮೋಡಗಳ ಹೆಸರು ಹಾಗೂ ಲಕ್ಷಣಗಳು, ಯಾವ ಮಳೆಯಲ್ಲಿ ಬೀಜ ಬಿತ್ತುವ ಕ್ರಮ ಮುಂತಾದ ವಿವರಗಳಿವೆ. ನಾವು ಮನವರಿಕೆ ಮಾಡಿಕೊಳ್ಳಬೇಕಾದ ವಿಷಯ ಎಂದರೆ ಮಳೆಯ ಕುರಿತು ವೈಜ್ಞಾನಿಕವಾದ ವಿವರಗಳನ್ನು ಒದಗಿಸುವ ಒಂದು ಕೃತಿ ಕನ್ನಡದಲ್ಲಿ ಬಹುಹಿಂದೆಯೇ ಪ್ರಕಟವಾಗಿದೆ ಎಂಬುದು ಶ್ಲಾಘನೀಯ. ಹಿಂದಿನವರು ಮೂಢರು, ಅವರಿಗೆ ವೈಜ್ಞಾನಿಕ ಮನೋಭಾವನೆಯೇ ಇರಲಿಲ್ಲ ಎಂಬುದು ಸತ್ಯಕ್ಕೆ ದೂರ. ಈ ಕವಿಯ ವಂಶಜರು ತಲಕಾಡು ಗಂಗರಾಜ ಮಾರಸಿಂಹನಲ್ಲಿ ಸೇನಾಧಿಪತಿಯಾಗಿದ್ದ, ಇವನು ಮೈಸೂರು ಪ್ರಾಂತಕ್ಕೆ ಸೇರಿದವನು

ಎಂದು ಹೆಮ್ಮೆಯಿಂದ ಹೇಳಬಹುದು. ಹತ್ತನೇ ಶತಮಾನದಲ್ಲಿಯೇ ಮಳೆಯ ಬಗೆಗೆ ಈ ಮಾದರಿಯ ಗ್ರಂಥ ಬರೆಯಲಾಗಿದ್ದು ಅದರಲ್ಲಿ ಮಳೆಗೆ ಸಂಬಂಧಿಸಿದಂತೆ ಅನೇಕ ವಿವರಗಳಿವೆ. ಆದರೆ ಆಧುನಿಕ ವಿಜ್ಞಾನಿಗಳು ಇದನ್ನು ಪರಿಗಣಿಸದೇ ಹೋಗಿರುವುದು ಶೋಚನೀಯ. ಹಿಂದಿ ಭಾಷೆಯಲ್ಲಿ ಒಂದುಗಾದೆ ಮಾತು ಇದೆ. "ನಕಲ್ ಕೀ ಚೋರೀ ಅಕಲ್‌ಸೆ ಬುಡ್ಡೀ ಹೈ" ಅಂದರೆ ನಕಲಿ ಮಾಡುವರಿಗೆ ಬುದ್ಧಿ ಚಾತುರ್ಯವಿರದು. ಈ ಗ್ರಂಥದಲ್ಲಿ ಹೇಳಿದ ಸುಲಭೋಪಾಯಗಳನ್ನು ಅರಿತು ಜಾರಿಗೆ ತಂದಲ್ಲಿ ರೈತರ ಆತ್ಮ ಹತ್ಯೆಯನ್ನು ನಿಯಂತ್ರಿಸಲು ಸಹಕಾರಿಯಾಗಬಹುದು ಎಂದೇ ಹೇಳಬಹುದೇ? ಏಕೆಂದರೆ ಇಳೆಯ ಸ್ಥಾವರ ಜಂಗಮಗಳು ಮಳೆಯಿಲ್ಲದೇ ಬದುಕಲಾರವು. ಮಳೆ ಯಿಂದಲೇ ಪ್ರಜೆಗಳು ಸಂತೋಷದಿಂದ ಬಾಳುವರು. ಮಳೆಯಿಂದ ಧಾನ್ಯಗಳು. ಸರಕಾರ ಹಾಗೂ ಸಂಶೋಧಕರು ಈ ನಿಟ್ಟಿನಲ್ಲಿ ತಮ್ಮ ಗಮನ ಹರಿಸಲೆಂದೇ ಹಾರೈಸುವೆ.

೩. **ಲೋಕೋಪಕಾರಂ :** ಇದೊಂದು ಅಪೂರ್ವ ಕೃತಿ. ಏಕೆಂದರೆ ಗ್ರಂಥದ ಹೆಸರೇ ಸೂಚಿಸುವಂತೆ ಮಾನವರಿಗೆ ತಮ್ಮ ಜೀವಿತ ಕಾಲದಲ್ಲಿ ಅವಶ್ಯವಾಗಿರ ಬಹುದಾದ ಎಲ್ಲಾ ವಿದ್ಯೆಗಳನ್ನು ಈ ಗ್ರಂಥದಲ್ಲಿ ಹೇಳಲಾಗಿದೆ. ಆದುದರಿಂದ ಇದೊಂದು ಮಾದರಿ ವಿಶ್ವಕೋಶದಂತೆ ಇದೆ. ಜನತೆಗೆ ಉಪಕಾರ ಮಾಡು ಒಂದೇ ಗುರಿ ಈ ಗ್ರಂಥದ್ದು. ಹೀಗಾಗಿ ಜನತೆಯ ಸುಖ ಸಂತೋಷಕ್ಕೆ ಅನಿವಾರ್ಯವಾದ ವಾಸ್ತು, ವೈದ್ಯ, ಹಲವಾರು ವಿಷಯಗಳನ್ನು ಹೇಳಲಾಗಿದೆ. ಜಗತ್ತಿನ ಸಮಸ್ತ ಪ್ರಾಣಿಗಳ ಬಯಕೆ ಕೇವಲ ಸುಖ ದುಃಖವನ್ನು ಯಾರೂ ಬಯಸರು. ಆದುದರಿಂದ ಈ ಲೋಕದಲ್ಲಿ ಸುಖವಾಗಿ ಜೀವನ ನಡೆಸಿಕೊಂಡು ಹೋಗಲು ತಿಳಿದಿರಬೇಕಾದ ವಿಷಯಗಳಿಗೆ ಶಾಸ್ತ್ರಗಳು ತಲೆಎತ್ತಿವೆ. ಹೀಗಾಗಿ ಈ ಗ್ರಂಥದಲ್ಲಿ ಗ್ರಂಥ ಕರ್ತನು ಜ್ಞಾನ-ವಿಜ್ಞಾನಗಳಿಗೆ ಸಂಬಂಧಿಸಿದ ವಿವಿಧ ಶಾಸ್ತ್ರಗಳ ಸ್ಥೂಲ ಪರಿಚಯ ನೀಡಿದ್ದಾನೆ. ಈ ಗ್ರಂಥ ರಚಿಸಿದ ಕವಿಯ ಹೆಸರು ಚಾವುಂಡರಾಯ. ಈ ಕವಿಯು ಇಂದಿನ ರಾಯಚೂರು ಜಿಲ್ಲೆಯ ಮುದುಗಲ್ ಎಂಬ ಊರಿನವನು ಎಂದೇ ವಿದ್ವಾಂಸರ ಹೇಳಿಕೆ. ಇವನ ಕಾಲ ೧೧೫೦ ಎಂದೇ ಊಹಿಸಲಾಗಿದೆ. ಈ ಗ್ರಂಥವು ಹನ್ನೆರಡು ಅಧ್ಯಾಯಗಳಿಂದ ಕೂಡಿದೆ. ಒದೊಂದು ಶಾಸ್ತ್ರೀಯ ಗ್ರಂಥ. ಆದರೂ ಕವಿಯು ತನ್ನ ಚಾತುರ್ಯವನ್ನು ತೋರಿಸಲೆಂದೇ ಕೆಲವು ಅಲಂಕಾರಗಳನ್ನು ಕಾವ್ಯ ಶೈಲಿಯಲ್ಲಿ ಪ್ರದರ್ಶಿಸಿದ್ದಾನೆ. ಈಗಾಗಲೇ ಹೇಳಿದಂತೆ ಮಾನವರಿಗೆ ಬೇಕಾಗಿರುವ ಸುಖ ಸಾಧನೆಗಳಿಗೆ ಅನಿವಾರ್ಯವಾದ ಅನೇಕ ವಿಷಯಗಳನ್ನು ತನ್ನ ಗ್ರಂಥದಲ್ಲಿ ಸೂಚಿಸಿದ್ದಾನೆ. ಮನುಷ್ಯನು ಸಂಘ ಜೀವಿ ಎಂಬುದನ್ನು ಅರಿತ ಈ ಕವಿ ಮಾನವರ ವಿವಾಹ, ಕುಟುಂಬ, ವರ್ಣಾಶ್ರಮಧರ್ಮ, ವಾಸಕ್ಕೆಬೇಕಾದ ಗೃಹ, ಇದಕ್ಕೆ ಸಂಬಂಧಿಸಿದ ವಾಸ್ತು, ಜೋತಿಷ್ಯ, ಶಕುನ, ಮಳೆ ಮಾರುತ, ಜಲಸಂಪನ್ಮೂಲ, ಕೃಷಿ, ವೈದ್ಯಕೀಯ, ಸೂಪಶಾಸ್ತ್ರ, ಪ್ರಾಣಿಗಳ ಬಗೆಗೆ ಬರೆದಿರುವುದು ಶ್ಲಾಘನೀಯ. ರಾಜ ಹಾಗೂಅವರ ಸೇನೆಗಳ ಬಗೆಗೂ ಬರೆದಿರುವನು. ಹೀಗಾಗಿ ಹನ್ನೆರಡನೆಯ ಶತಮಾನದ ಮಹತ್ವದ

ಕೃತಿ ಎಂದೇ ಹೆಮ್ಮೆಯಿಂದ ಹೇಳಹುದು. ಈ ಸಂಕ್ಷಿಪ್ತ ಹಿನ್ನೆಲೆಯಲ್ಲಿ ನಾನು ಗಮನ ಸೆಳೆಯಬೇಕೆಂದಿರುವ ವಿಷಯ ಸುಮಾರು ಒಂಬೈನೂರು ವರ್ಷಗಳ ಹಿಂದೆಯೇ ಬಗೆಯ ಜ್ಞಾನ ಸಂಪತ್ತನ್ನು ಪಡೆದ ಕರ್ನಾಟಕ ಇಂದು ಯಾವ ಪರಿಸ್ಥಿತಿಯನ್ನು ತಲುಪಿದೆ. ಇದನ್ನು ಮನಗಂಡು ಜನರ ಹಾಗೂ ನಾಡಿನ ವಿಕಾಸಕ್ಕೆ ಸರಕಾರ ಮುಂದುಬರಬೇಕೆಂದೇ ನನ್ನ ಹಿರಿಯಾಸೆ.

೪. ಕಾಮಾಂದಕೀಯ ನೀತಿಸಾರ ವ್ಯಾಖ್ಯಾಟೀಕೆ : ಇದೊಂದು ರಾಜನೀತಿಯನ್ನು ತಿಳಿಸುವ ಗ್ರಂಥ. ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿನ ಕಾಮಾಂದಕನೀತಿಯ ಉಪಾಧ್ಯಾಯ ನಿರಪೇಕ್ಷಾ ಎಂಬ ವ್ಯಾಖ್ಯಾನದ ಕನ್ನಡದ ಟೀಕೆಯಾಗಿದೆ. ಈ ಗ್ರಂಥವನ್ನು ಮದ್ರಾಸ್ ಓರಿಯಂಟಲ್ ಸೀರೀಸ್‌ನಡಿಯಲ್ಲಿ ೧೯೫೬ರಲ್ಲಿ ಪ್ರಕಟಿಸಲಾಗಿದೆ. ಈ ಗ್ರಂಥವನ್ನು ಮದ್ರಾಸ್ ಓರಿಯಂಟಲ್ ಲೈಬ್ರರಿಯಲ್ಲಿನ ಗ್ರಂಥ ಭಂಡಾರಿಯಾಗಿ ಸೇವೆಯಿಂದ ನಿವೃತ್ತರಾದ ವಿ. ಹನುಮಂತಾಚಾರ್ಯರು ಸಂಪಾದಿಸಿದ್ದಾರೆ. ಹದಿನೇಳನೇ ಶತಮಾನದಲ್ಲಿ ಮೈಸೂರು ರಾಜ್ಯವನ್ನಾಳುತ್ತಿದ್ದ ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿ ಲಕ್ಷ್ಮೀಪತಿ ಪಂಡಿತನೆಂಬ ಸಚಿವರು ಇದನ್ನು ರಚಿಸಿರಬಹುದೆಂದು ಶ್ರೀಮಾನ್ ಆರ್. ನರಸಿಂಹಾಚಾರ್ಯರ ಹೇಳಿಕೆ. ಇನ್ನೊಂದು ಹೇಳಿಕೆಯಂತೆ ಅದೇ ಸಭೆಯಲ್ಲಿದ್ದ ತ್ರಿಕದಂಬಪುರದ ಯಜುಶ್ಯಾಖೆಯ ಪುರುಕುತ್ಸ ಗೋತ್ರದ ಬೃಹಸ್ಪತಿಯವರು ಈ ಗ್ರಂಥವನ್ನು ರಚಿಸಿದವರು. ಈ ತ್ರಿಕಂದಂಬಪುರ ಈಗಿನ ಮೈಸೂರು ಬಳಿಯಲ್ಲಿರುವ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಇದೆ. ರಾಜನೀತಿ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಚಾಣಕ್ಯನ ಅರ್ಥಶಾಸ್ತ್ರದ ನಂತರ ಕಾಮಾಂದಕೀಯ ನೀತಿಶಾಸ್ತ್ರವು ಪ್ರಮುಖವಾದುದು. ಈ ಎರಡೂ ಗ್ರಂಥಗಳನ್ನು ಕುರಿತು ಬರೆದಿರುವ ಬೃಹಸ್ಪತಿ ಹಾಗೂ ಆರ್. ಶ್ಯಾಮಾಶಾಸ್ತ್ರೀ ಈರ್ವರೂ ಕನ್ನಡಿಗರು ಎಂದೇ ಹೆಮ್ಮೆಯಿಂದ ನಾವು ಸ್ಮರಿಸ ಬಹುದು. ಈ ಗ್ರಂಥ ಪೂರ್ಣವಾಗಿ ದೊರೆತಿಲ್ಲ. ಹೀಗಾಗಿ ಇಲ್ಲಿ ಕೇವಲ ಎಂಟು ಅಧ್ಯಾಯ ಗಳನ್ನು ಮಾತ್ರ ಮುದ್ರಿಸಲಾಗಿದ್ದು ಪರಿಶಿಷ್ಟದಲ್ಲಿ ಮಿಕ್ಕ ಅಧ್ಯಾಯಗಳ ಸಾರಾಂಶವನ್ನು ಹೇಳಲಾಗಿದೆ. ರಾಜನೀತಿ ಶಾಸ್ತ್ರದ ಬಗೆಗೆ ನಾರದ, ಶುಕ್ರ, ಬೃಹಸ್ಪತಿ ಮುಂತಾದವರು ಬರೆದಿದ್ದಾರೆ. ಆದುದರಿಂದ ಭಾರತೀಯರಿಗೆ ರಾಜ್ಯಾಡಳಿತದ ಬಗೆಗೆ ಏನೂ ತಿಳಿದೇ ಇರಲಿಲ್ಲ ಎಂಬ ಕೆಲವು ಪಾಶ್ಚಿಮಾತ್ಯರ ಟೀಕೆಗೆ ಬೆಲೆ ಇಲ್ಲ. ಕೌಟಿಲ್ಯನ–ಕಾಮಾಂದಕನ ಬರಹ ಗಳಲ್ಲಿ ವ್ಯತ್ಯಾಸಗಳಿವೆ ಎಂಬುದನ್ನು ನಾವು ಅರಿಯಲೇಬೇಕು. ಏಕೆಂದರೆ ಕೌಟಿಲ್ಯ ಮೌರ್ಯರ ಕಾಲದವನು, ಕಾಮಾಂದಕನು ಗುಪ್ತರ ಕಾಲದವನು. ಇಬ್ಬರೂ ರಾಜನೀತಿ ಪ್ರವೀಣರು. ಹೀಗಾಗಿ ನಾವು ನಮ್ಮವರೇ ಆದ ಬೃಹಸ್ಪತಿ, ಶುಕ್ರ, ಚಾಣಕ್ಯ, ಕಾಮಾಂದ ಕರನ್ನು ಕೈಬಿಟ್ಟು ಪಾಶ್ಚಿಮಾತ್ಯರನ್ನು ಆರಾಧಿಸುವುದು ಸರಿಯೇ? ಇಂದು ಇದನ್ನು ಗಂಭೀರವಾಗಿ ನಮ್ಮ ರಾಜಕೀಯ ಧುರೀಣರು ಆಲೋಚಿಸಬೇಕಾದ ವಿಷಯ.

೫. ಇಮ್ಮಡಿವರದರಾಜಾಚಾರ್ಯವಿರಚಿತ ಶ್ರೀ ಭಗವದ್ಗೀತಾ ಪ್ರಕಾಶ: ಭಗವದ್ಗೀತೆ, ಸಂಸಾರ ಸಾಗರದ ಸುಳಿಯಲ್ಲಿ ಸಿಕ್ಕು ತೊಳಲಾಡುವ ಮಾನವ ಕುಲಕ್ಕೆ

ಮಾರ್ಗದರ್ಶನ ಮಾಡಿದ ಕೃತಿ. ಇದರ ಹಿರಿಮೆ ಎಂದರೆ ಕಾಯಕದ ಮಹತ್ವವನ್ನು ಹೇಳಿರುವುದು. ಹೀಗಾಗಿ ಈ ಗ್ರಂಥ ವಿಶ್ವದ ಸಕಲ ಭಾಷೆಗಳಲ್ಲಿ ತನ್ನನ್ನು ಗುರುತಿಸಿಕೊಂಡಿದೆ. ಅನೇಕರು ಭಾವಿಸಿದಂತೆ ಗೀತೆ ಕೇವಲ ಪಂಡಿತರಿಗೆ ಮಾತ್ರ ಬರೆಯಲಾಗಿಲ್ಲ. ಗೀತೆ ಶ್ರೀ ಸಾಮಾನ್ಯರಿಗೂ ದಾರಿ ದೀಪ. ಗೀತೆಯನ್ನು ಕುರಿತು ಅನೇಕರು ಬರೆದಿದ್ದಾರೆ. ಹೀಗಾಗಿ ಈ ಕೃತಿಯ ವೈಶಿಷ್ಟ್ಯ ಏನು ಎಂದೇ ಕೇಳಬಹುದು.

ಸುಮಾರು ಐದು ಶತಮಾನಗಳ ಹಿಂದೆಯೇ ಆದ್ಯಮನೆತನದ ಹಿರಿಯರೊಬ್ಬರು ಅಂದರೆ ಇಮ್ಮಡಿ ವರದರಾಜರು ಈ ಕೃತಿಯನ್ನು ಪ್ರಪ್ರಥಮವಾಗಿ ವಚನ ರೂಪದಲ್ಲಿ ಪ್ರಕಟಿಸಿದರು. ಇದೊಂದು ಸಾಮಾನ್ಯ ಹಾಗೂ ಸರಳಶೈಲಿಯಲ್ಲಿ ಅಂದರೆ ಆಡು ಭಾಷೆಯಲ್ಲಿ ಬರೆದ ಗ್ರಂಥ. ಈಗ ಆದ್ಯವಂಶದ ತೌರುಮನೆಯ ಮಗಳಾದ ಶ್ರೀಮತಿ ದೇವಯಾನಿ ವೆಂಕಟರಾವ್ ಮಸರಗುಪ್ಪಿ ಅವರು ಮರುಮುದ್ರಿಸಿದ್ದಾರೆ. ಇದೊಂದು ಅಪರೂಪದ ಗ್ರಂಥ. ಕನ್ನಡಿಗರ ಹೆಮ್ಮೆಯ ಗ್ರಂಥ.

ಶ್ರೀಸಾಮಾನ್ಯರು ಮಹಿಳೆಯರಿಗೂ ಸರಳವಾಗಿ ಗೀತೆಯ ಸಾರವನ್ನು ಒದಗಿಸುತ್ತದೆ. ಇದರ ವೈಶಿಷ್ಟ್ಯ ಎಂದರೆ ಸುಮಾರು ಐದು ನೂರು ವರ್ಷಗಳ ಹಿಂದೆಯೇ ಸರಳ ಕನ್ನಡದಲ್ಲಿ ಈ ಗ್ರಂಥವನ್ನು ರಚಿಸಿದ ಕೀರ್ತಿ ಇಮ್ಮಡಿ ವರದಾಚಾರ್ಯರಿಗೆ ಸಲ್ಲುತ್ತದೆ. ಇದನ್ನು ಮರುಪ್ರಕಟಿಸಿದ ಶ್ರೀಮತಿ ದೇವಯಾನಿಯವರು ಕನ್ನಡ ಸಾಹಿತ್ಯ ಲೋಕಕ್ಕೆ ಉಪಕಾರ ಮಾಡಿದ್ದಾರೆ. ಅವರ ಈ ಕಾರ್ಯ ಶ್ಲಾಘನೀಯ.

□

೪. ಕೆಳದಿ ನೃಪ ವಿಜಯದಲ್ಲಿ ಕೇರಳ ಮಂಡಲ ಪ್ರಾಂತಗಳು

• ಡಾ. ಕೆ.ಜಿ. ವೆಂಕಟೇಶ ಜೋಯಿಸ್

ಕೆಳದಿ ನೃಪವಿಜಯ ಡಾ. ಚಿದಾನಂದ ಮೂರ್ತಿಗಳು ನೋಡಿದಂತೆ ಕೆಳದಿ ಹಾಗೂ ದಕ್ಷಿಣ ಭಾರತದ ಇತರೆ ಆಳರಸರ ಸಂಗತಿಯನ್ನೊಳಗೊಂಡ ಸಮಕಾಲೀನ ಇತಿಹಾಸ. ಪೂನಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಚಿಟ್ನೀಸ್‌ರವರು–

"The Keladinripavijayam was edited by R. Sama Sastry in 1921 with an introduction by A.R. Krishnasastry. This work seems to have been written between 1763 A.D. and 1804 A.D. The ancestors of this Lingannakavi appear to have been the Court poets under the Keladi rulers. The Keladinripavijayam is written in the champu style, i.e. partly in verse and partly in prose. This literary work, unlike many others, contains more of historical information than of literary praises about the keladi monarchs. In the work the poet mainly gives a narration of the rulers one by one. Incidentally he refers to other cntemporary dynasties ruling in India, particlularly in Karnataka. Much of the information contained in this work is in agreement with the inscriptions and foreign sources. Hence it seems to be more authentic than other literary works. I have freely drawn upon this work in my thesis corroborating it, whether possible, by the inscriptions and other sources. It is intersting to note that Lingannakavi has, in his work, supplemented the main narration by copious footnotes given usually at the end of every chapter. They contain the names of various officers serving under their respective rulers. This information is useful in writting about the ministers, military generals and other office-bearers".

ಕೆಳದಿ ಹಾಗೂ ಮಲಬಾರ

ಕ್ರಿ.ಶ. ೧೫೧೩-೬೦ ರವರೆಗೆ ರಾಜ್ಯವಾಳಿದ ಕೆಳದಿ ಸದಾಶಿವನಾಯಕನ ಕಾಲದಲ್ಲಿ ಆರಂಭಿಸಿ ಕು॥ "ತುಳುವರಾಜರ್ಕಳೆಲ್ಲಂ...... ಲ್ಯೂಯಿ ರೈಸ್‌ರವರ ಮೈಸೂರು ಗೆಝೆಟೇರ್ ಹಾಗೂ ಕೇರಳದ ಗೆಜಿಟೇರ್ ಇದನ್ನು ಸಮರ್ಥಿಸುತ್ತದೆ[೧]. ಇದು ಹಿರಿಯ ವೆಂಕಟಪ್ಪನಾಯಕನ ಕಾಲದವರೆಗೂ ಮುಂದುವರಿಯಿತು.

ಹಿರಿಯ ವೆಂಕಟಪ್ಪನಾಯಕ (೧೫೮೭-೧೬೨೯)

ಈತನ ಕಾಲದಲ್ಲಿ ಲಿಂಗಣ್ಣ ಕವಿಯೇ ಉಲ್ಲೇಖಿಸಿದಂತೆ ವ॥ ಇಂತು ಸುರಾಲರ ತೊಳಹರ ಸೀಮೆಗಳಂ ವಶಂಗೈದನಂತರಂ

> ಕಂ॥ ಬಂಗಾಜಲ ಸಾವಂತಮ। ನಂಗೊಳಿಸುವ ಚಾಟ ಮೂಲ ಕುಂಬಳೆಯಿವರಂ॥
> ಭಂಗಿಸಿ ತದ್ಧರೆಯುಮನುತ್ತುಂಗ ಶ್ರೀಮಂಗಳೂರನೂರೆ ಸಾಧಿಸಿದ್ದ॥
> ವ॥ ಇಂತು ಚಾಟ ಬಂಗಾಜಲ ಸಾವಂತಮೂಲ ಕುಂಬಳೆಕಾಸರಗೋಡಮುನ್ನೆಯರ
> ಮುರಿದು ತತ್ತದ್ಧಾರಿತ್ರಿಯಂ ವಶಗೈದು ಮಂಗಳೂರ ಸಂಸ್ಥಾನಮಂ ಸ್ವಾಧೀನಂ
> ಗೈದನಂತರಂ ಮೂಲಿಕೆ ಕೊಡೆಯಾಲ ಮೂಡಬಿದರೆ ಉಳ್ಳಾಲ ಕುಂಬಳೆ ಕಾಸರ
> ಗೋಡು ಪುದುವೆಟ್ಟು ಬೆಳ್ಳರೆ ಕಾಂತಮಂಗಲ ಬಂದ್ಯಡಕ ಕಂಡಂಕುಳಿ ಕೊಲ್ಲೂರ
> ಬಾಚಿ ಶಿಶಿಲ ಚಂದ್ರಗಿರಿ ಕಿದುಟು ಮೂಡಗೊಡೆಯಾಲ ಫಣಿಯಾಲ ಮುಂತಾದ
> ಕೋಂಟೆಗಳಂ ಬಲಿಯಿಸಿದನಂತುಮಲ್ಲದೆಯುಂ.

ಈ ರೀತಿ ಮಲಬಾರ ಪ್ರದೇಶಗಳನ್ನು ಸಾಧಿಸಿ "ಪಡುಗಡಲೊಡೆಯ"ನೆಂದು ಖ್ಯಾತಿಗಳಿಸಿದನು. ಡಾ. ಚಿಟ್ನೀಸ್‌ರವರು ಇದನ್ನು ಸಮರ್ಥಿಸುತ್ತಾ – We are told by Danvers how Venkatappa Nayaka in 1618 AD was, with 12,000 canarese strong, pursuing a war with a petty chief in Malbar[೨] ಉಲ್ಲೇಖಿಸಿದ್ದಾರೆ.

ಕುಂಬಳೆ ಅರಸರೂ ಕೊಚ್ಚಿರಾಜರ ಕುಟುಂಬದವರೂ ಒಂದೇ ವಂಶದವರಾಗಿರುತ್ತಾರೆ. ಇವರು ಉಪ್ಪಳ ಹೊಳೆಯ ದಕ್ಷಿಣದಿಂದ ಚಂದ್ರಗಿರಿ ಹೊಳೆಯ ಉತ್ತರಕ್ಕಿರುವ ಮಂಜೇಶ್ವರ ಮಾಗಣೆ, ಆಡೂರು, ಪೆರ್ಡೂಲ, ಅಂಗಡಿಮೊಗರು, ಕಾಸರಗೋಡು ಮೊಗ್ರಲ್ ಮಾಗಣೆಗಳಾದಿಯಾಗಿ ಮಂಗಳೂರು ತಾಲ್ಲೂಕಿನ ವಾಮಂಜೂರು ಮಾಗಣೆಯನ್ನು ಆಳಿಕೊಂಡಿದ್ದರು. ಕದಂಬ ಕುಲದ ಕಾಮದೇವನೇ ಮೂಲಪುರುಷನಾಗಿದ್ದು ಕುಂಬಳೆಯಿಂದ ಸುಮಾರು ಒಂದೂವರೆ ಮೈಲಿ ಪೂರ್ವದಲ್ಲಿ ಕೋಟೆ ಕಾರಿನಲ್ಲಿದ್ದ ಕೋಟೆ ಅರಮನೆಯಲ್ಲಿ ರಾಜ್ಯಭಾರ ಮಾಡಿ ಕೊಂಡಿದ್ದರು. ಕಂಚಿಕಟ್ಟೆಯಲ್ಲಿ ಈಗಲೂ ಅರಮನೆಯ ಅವಶೇಷಗಳಿವೆಯೆಂದು ತಿಳಿದುಬರುತ್ತದೆ. ಈ ವಂಶದ ಅರಸರುಗಳು ಈ ಕೆಳಕಂಡಂತಿದ್ದು ಕಾಲಮಾನದ ಬಗ್ಗೆ ಪರಿಶೋಧನೆಯಾಗಬೇಕಿದೆ.

ಜಯಸಿಂಹ

(೧) ರಾಮಂತರಸು (೨) ಚೋಳದೇಶಿಂಗರಾಯ (೩) ಪ್ರೌಢರಾಯ

(೪) ವೀರನಸಿಂಗರಾಯ (೫) ಪಾಳ್ಯದ ನರಸಿಂಗರಾಯ (೬) ಅಚ್ಯುತರಾಯ

(೭) ಸದಾಶಿವರಾಯ (೮) ರಾಮರಾಯ (೯) ಕೃಷ್ಣರಾಯ[೩]

ಡಾ. ಗುರುರಾಜಭಟ್ಟರ 'ಸ್ಟಡೀಸ್ ಇನ್ ತುಳುವ ಹಿಸ್ಟ್ರಿ' ಮೇರೆಗೆ – ಕದಂಬ ರೂಲರ್ (ಕ್ಲೋಸ್ ಆಫ್ ದಿ ೯ನೇ ಸೆಂಚುರಿ ಎಡಿ)

ಜಯಸಿಂಹ I (೧೦ನೇ ಸೆಂಚುರಿ ಎಡಿ)

ಜಯಸಿಂಹ II (೧೩ನೇ ಸೆಂಚುರಿ ಎಡಿ)

ಕಾಮದೇವ ಅರಸ (೧೩೪೯ ಎಡಿ)

ಗಣ್ಣಿಯಪ್ಪರಸ

ಸೋಮನಾಥ ಅರಸ (೧೭೭೯ ಎಡಿ)

ಹಿರಿಯ ವೆಂಕಟಪ್ಪನಾಯಕನ ಕಾಲದಲ್ಲಿರುವ ಕುಂಬಳೆ ಅರಸರನ್ನು ಗುರ್ತಿಸುವುದು ಕಷ್ಟ ಸಾಧ್ಯವಾಗಿದೆ. ಡಾ. ಗುರುರಾಜಭಟ್ಟರು ಮಾಧುಪುರ ಕುಂಬ್ಳೆಸೀಮೆ ಪೂರ್ವಸ್ಮೃತಿ (ಬೇಕಲರಾಮನಾಯಕ)ಆಧರಿಸಿದ್ದು ಈ ಕುರಿತು ಹೆಚ್ಚಿನ ಬೆಳಕು ಚೆಲ್ಲಲು ಸಂಶೋಧನೆ ಅಗತ್ಯವೆಂದು ಹೇಳಿದ್ದಾರೆ.[೪]

ಹಿರಿಯ ವೆಂಕಟಪ್ಪನಾಯಕನು ಕ್ರಿ.ಶ. ೧೬೦೮ರಲ್ಲಿ ಕನ್ನಡ ಜಿಲ್ಲೆಗೆ ಬಂದು ಪಡುವನ್ನಾಡು ಅಲವತ ನಾಡನ್ನು ಸ್ವಾಧೀನಪಡಿಸಿಕೊಂಡು ತನ್ನ ರಾಜ್ಯದ ಭದ್ರತೆಗಾಗಿ ಕಾಸರಗೋಡು ಬಂದ್ಯಡ್ಕ, ಕಾಂತಮಂಗಲ, ಕುಂಡಂಕುಳಿ, ಚಂದ್ರಗಿರಿ, ಫಣಿಯಾಲ ಇಷ್ಟು ಕಡೆಗಳಲ್ಲಿ ಕೋಟೆಗಳನ್ನು ನಿರ್ಮಿಸಿದನು.[೫]

ಶಿವಪ್ಪನಾಯಕ (೧೬೪೫–೧೬೬೦ ಎಡಿ)

ಇಂತು ಮಂಗಳೂರ ಕೋಟೆಯಂ ಕೊಂಡನಂತರಮಳವೆಯಂ ಕಟ್ಟಿ ಕೀಳೂರಂ ಸಾಧಿಸಿ ಬೇಕಲ ಚಿತ್ತಾರಿಗಳೆಂಬ ಕೋಂಟೆಗಳುಮಂಮುತ್ತಂ ಚಂದ್ರಗಿರಿ ಮುಂತಾದ ಕೋಂಟೆಗಳುಮಂ ಬಲ್ಪುಗೈಸಿನಂತುಮುಲ್ಲದೆಯುಂ

ಕಂ॥ ಬಳಿಕುರುನೀಲೇಶ್ವರದು/ಜ್ಜಳಿಪಿಳೆಯಂಕೊಂಡು ಯಿಮಾರಟ ನೆಲದೊಳ್॥

ತೊಲಗದಕಂಬವನನುವಿರನಿಲಿಸಿ ಮಹಾದ್ಭುತ ಪರಾಕ್ರಮವನುದೆ ಮೆರೆದಂ॥೭॥

ಇಂತು ನೀಲೇಶ್ವರದ ಗಡಿಮುಖದೊಳತೊಲಗದ ಕಂಬಮಂ ನಿಲಿಸಿ ನಾಯಿ ಮಾರರಂ ವಶಗೈದು ಪಣಿಮಣಿಹಂಗಳಂ ಕೊಂಡನಂತರಂ ಕೊಲ್ಲಂತಮಾಪಳರೆ ಮುಂತಾದ ಕೇರಳ ಮಂಡಲದ ಮುನ್ನೆಯರ್ಕಳನೆರ್ದೆಗೆಡಿಸಿ ಮರಳ್ದನಂತುಮುಲ್ಲದೆಯುಂ.

ಶಿವಪ್ಪನಾಯಕನ ಕಾಲದಲ್ಲಿ ಪೋರ್ಚುಗೀಸರ ಹಾವಳಿ ಅಧಿಕವಾಗುತ್ತಿರಲು, ಬಂಗರಾಜನ ಜೊತೆಯಲ್ಲಿ ಕೂಡಿಕೊಂಡು ಕೋಲತ್ತಿರಿ ಅರಸನು ವಿನಾಕಾರಣ ಕಪ್ಪಕ್ಕಾಗಿ ಪ್ರಜೆಗಳಿಗೆ ಹಿಂಸಿಸುತ್ತಿರುವುದನ್ನು ತಿಳಿದ ಕೆಳದಿ ದೊರೆಯು ದೊಡ್ಡಸೈನ್ಯ ದೊಂದಿಗೆ ಬಂದು ಕೋಲತ್ತಿರಿ ಅರಸನನ್ನು ಸೋಲಿಸಿ ಬೇಕಲ, ಚಿತ್ತಾರಿವರೆಗಿನ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡನು. ಚಂದ್ರಗಿರಿ ಕೋಟೆಯನ್ನು ಜೀರ್ಣೋದ್ಧರಿಸಿ[೬] ಆಮೇಲೆ ಬೇಕಲದಲ್ಲಿ ಸಮುದ್ರದ ಅಂಚಿನಲ್ಲಿ ಎತ್ತರವಾದ ಸ್ಥಳದ ಮೇಲೆ ಸುಮಾರು ೧೩ ಎಕರೆ ವಿಸ್ತೀರ್ಣವುಳ್ಳ ಕೋಟೆಯನ್ನು ನಿರ್ಮಿಸಿದನು. ಭಾರದ ಸರಕಾರದ ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿಯಲ್ಲಿ ಈ ಕೋಟೆಯ ವಿವರಣೆಯು ಸಂಕ್ಷಿಪ್ತವಾಗಿ–

Situated in the present Kasaragod Taluk on the sea coast, the Bekal fort was on the southern boundary of the KELADI kingdom. It had great importance, since it was from this fort that the KELADI rulers had to defend themselves against the kolathries of Malabar and the Portuguese. The fort was built of granite. It was entered through the mani gateway facing the north, and was surrounded by sea on the west and south. These was also an inner fort. The fort had many bastions and a tower in the centre. Inside the fort there were three subterrancan passages all leading to the sea, a powder magazine or a granary a temple dedicated to the god Hunuman and two sunken wells.

ಈ ರೀತಿ ಉಲ್ಲೇಖಿಸಲ್ಪಟ್ಟಿದೆ.[೭]

ಇಂತಹ ಕೋಟೆಗಳ ರಕ್ಷಣೆಗಾಗಿ ಕೆಳದಿ ಶಿವಪ್ಪನಾಯಕನು ರಾಮರಾಜ ಕ್ಷತ್ರಿಯ ಕುಲದವರನ್ನು ನೇಮಿಸಿಕೊಂಡು ಕೆಲವರಿಗೆ ಜಮೇದಾರ, ಹವಾಲ್ದಾರ, ಸುಬೇದಾರ ಮುಂತಾದ ಹುದ್ದೆಯನ್ನಿತ್ತನು. ಇಂತಹ ಕುಟುಂಬಗಳು ಈಗಲೂ ಇರುವುದನ್ನು ಕಾಣಬಹುದು.

ಕುಂಬಳೆ ಅರಸರಲ್ಲಿ ಒಬ್ಬನಾದ ಕೃಷ್ಣರಾಯನು ಶಿವಪ್ಪನಾಯಕನೊಂದಿಗೆ ಯುದ್ಧ ಸಾರಿದಾಗ ೧೬೫೪ರಲ್ಲಿ ಕೆಳದಿ ದೊರೆಯು ಕೃಷ್ಣರಾಯನನ್ನು ಸೋಲಿಸಿ, ಇವನ ರಾಜ್ಯವನ್ನು ಚಿಕ್ಕದಾಗಿಸಿ ಅಡೂರು, ಮದೂರು, ಕಾವು, ಕಣಿಪುರ (ಕುಂಬಳೆ) ಎಂಬ ೪ ಸೀಮೆಗಳು ಮಾತ್ರವೇ ಇವನಿಗೆ ಕೊಡಲ್ಪಟ್ಟವು. ಈತನು ಕುಂಬಳೆ ನದೀ ತೀರದ ಅರಮನೆಯನ್ನು ಬಿಟ್ಟು ಮಾಯಪಡಿಯಲ್ಲಿ ನೆಲೆಸಿದನು. ಕೆಳದಿ ಶಿವಪ್ಪನಾಯಕನು ಕುಂಬಳೆ ಪಾಳೆಗಾರನು ಮುಂದೆ ದಂಗೆ ಎಬ್ಬಿಸದ ಹಾಗೆ ತೆಂಕುಂಬಳೆಯಲ್ಲಿ ದೊಡ್ಡ ಕೋಟೆಯ್ನು ನಿರ್ಮಿಸಿ, ರಕ್ಷಣೆಗಾಗಿ ರಾಮರಾಜ ಕ್ಷತ್ರಿಯರನ್ನು ನೇಮಿಸಿದನು. ಈ ಕೃಷ್ಣರಾಯನ ಕುಟುಂಬದಲ್ಲಿ ಒಬ್ಬ ರಾಣಿಯು ಮಾತ್ರ ಹಳೆ ಅರಮನೆಯನ್ನು ಬಿಡಲಾರದೆ ತನ್ನ ಮಗುವಿನೊಂದಿಗೆ ಅಲ್ಲಿಯೇ ನೆಲೆಸಿದಳು. ಈ ಸಂತತಿಯವರು

ಈಗ ಕೋಟೆಕಾರಿನ ಹತ್ತಿರ ಕೊಡ್ಯಮೆಯಲ್ಲಿಯದ್ದುದರಿಂದ ಇವರಿಗೆ ಕೊಡ್ಯಮೆ ಅರಸರೆಂದು ಹೆಸರುಂಟಾಯಿತು.[೮]

ಫಾದರ್ ಲಿಯನಾರ್ಡೋ ಪಾಯೆಸೆನ್ ಉಲ್ಲೇಖದಂತೆ ಕೆಳದಿಯ ಅಧೀನದಲ್ಲಿ ತೂದ್ರಿ ನದಿಯ ಕಾಸರಗೋಡು, ನೀಲೇಶ್ವರದವರೆಗೂ ವ್ಯಾಪಿಸಿತು.[೯]

ಇತರೆ ಅಕ್ಷರಗಳಲ್ಲಿ ಕಂಡಂತೆ

ಹಿರಿಯ ಸೋಮಶೇಖರ ನಾಯಕನ (೧೬೬೪-೧೬೭೧) ಕಾಲದಲ್ಲಿ ಕೋಲತ್ತಿರಿ ಹಗೂ ಜಾಮೋರಿನ (ಇಂಟರ್ ಮ್ಯಾರೀಯೆಜ್) ವಿಜಾತಿ ವಿವಾಹ ದೆಸೆಯಿಂದ ಹಲವಾರು ವಿಪ್ಲವವುಂಟಾಯಿತು. ಆಂತರಿಕ ಕಲಹಗಳ ಕಾರಣದಿಂದ ಕೆಳದಿಗೆ ಮಾನ್ಯತೆ ನೀಡಲು ನಿರಾಕರಿಸಿದ್ದರಿಂದ ಅನಿವಾರ್ಯ ಕಾರಣದಿಂದ ಹಿರಿಯ ಸೋಮಶೇಖರ ನಾಯಕನು ಸೈನ್ಯದೊಂದಿಗೆ ಮಲೆಯಾಳ ಪ್ರಾಂತ್ಯಕ್ಕೆ ಆಗಮಿಸಿದನು. ರಾಜಕುಮಾರ ರಾಮೆಲೆಟ್ಟೈರಿಯು ಡಚ್ಚರ ಸಹಾಯವನ್ನು ಕೇಳಿಕೊಂಡಾಗ ಅವರು ನಿರಾಕರಿಸಿದ್ದರಿಂದ ಪೋರ್ಚುಗೀಸರ ಪ್ರವೇಶದಿಂದ ಕೋಲತ್ತಿರಿ ಹಾಗೂ ಕೆಳದಿಗೆ ವಿರೋಧವುಂಟಾಗಿ ಸದಾ ಕಲಹವನ್ನುಂಟುಮಾಡಿತು. ಇದರ ಪರಿಣಾಮವಾಗಿ ಇಂಗ್ಲೀಷರಿಗೆ ಕಾರ್ಖಾನೆ ತೆರೆಯಲು ಅನುವು ಮಾಡಿಕೊಟ್ಟಿದ್ದರಿಂದ ಮಲಯಾಳದ ಅರಸು ಹಾಗೂ ಇಂಗ್ಲೀಷರ ಸ್ನೇಹಕ್ಕೆ ತಳಹದಿಯನ್ನುಂಟುಮಾಡಿತು.[೧೦] ಕೆಳದಿ ರಾಣಿ ಚೆನ್ನಮ್ಮಾಜಿಯ ಕಾಲದಲ್ಲಿ (೧೬೭೧-೧೬೯೭) ಹ್ಯಾಮಿಲಿಟನ್‌ನ ನ್ಯೂ ಅಕೌಂಟ್ ಆಫ್ ಈಸ್ಟ್ ಇಂಡೀಸ್ ಪ್ರಕಾರ ಮಲೆಯಾಳಿಗಳ ಪರಾಭವಗಳ ಪರಿಣಾಮವಾಗಿ ಅನೇಕ ಕೋಟೆಗಳು ಕೆಳದಿಗೆ ಸೇರಿತು.

ಇಮ್ಮಡಿ ಸೋಮಶೇಖರ ನಾಯ್ಕನ ಕಾಲದಲ್ಲಿ ಕೋಲತ್ತಿರಿ ಹಾಗೂ ಕೆಳದಿಯ ಕದನಗಳು ಮುಂದುವರಿಯುತ್ತಲೇ ಇತ್ತು.[೧೧] ಈ ಕಾಲದಲ್ಲನ ಇಂಗ್ಲೀಷರು, ಫ್ರೆಂಚರು, ಡಚ್ಚರು ಹಾಗೂ ಪೋರ್ಚುಗೀಸರ ವೈವಿಧ್ಯಮಯ ಕಥನಗಳು ದೀರ್ಘವಾಗುವು ದರಿಂದ ಲೇಖನ ವಿಸ್ತಾರಭಯದಿಂದ ಕೈಬಿಡಲಾಗಿದೆ. ಆದರೆ ೨೬-೦೮-೧೭೩೭ ರಂದು ತಲಬೇರಿಯನ್ನು ಕೋಲತ್ತಿರಿ ಅರಸನಿಗೂ ಕೆಳದಿಯ ಸೈನ್ಯದ ಮುಖ್ಯಾಧಿಕಾರಿ ಸೂರಪ್ಪಯ್ಯನಿಗೂ ನಡೆದ ಗಡಿ ಒಪ್ಪಂದವು ಗಮನಾರ್ಹವಾದದ್ದು.

No.2

Public Department diary, (pp. 248-49)

Tellicherry

26th August, 1737

The King of Colastree & Prince of Pally having represented the Damages resulting thro the Entrance of my.... Army, & being desireous of settling the General Tranquility we havemutually Agreed on the Sbusequent Conditions Namely-

That from the Fort of Madday Westward to Urbelly Southwara, as the River winds to the Foot of the Hills-Eastward with all the Country Northward of said Rive, shall hereafter appertain to the King of Bednure, & from the parts aforesaid Southward, the king of Colastree shall enjoy what appertains to him, And, 'tis moreover Agreeed that neith of the aforesaid powers shall enter with an Armed Force for Invadig or Molesting in any wise the afsignea Territories of either. In Testimony whereof I deliver this Writting in presence of the English Chief & Council of Tellicherrry, thro" whose Mediation this Treaty is Settled, Dated August 26th, 1737.
Recd. on Thursday, 13th October, 1737

Sd.
Suryappa
Governour of Mangalore &
General of the Canaree Army

ಇಮ್ಮಡಿ ಬಸಪ್ಪನಾಯಕನ ಕಾಲದಲ್ಲಿ ಕೋಲತ್ತರಸನು ದೊಡ್ಡಸೈನ್ಯದೊಂದಿಗೆ ಚಂದ್ರಗಿರಿ ಕೋಟೆಗೆ ಮುತ್ತಿಗೆ ಹಾಕಿ ಹಿಡಿದನು. ಕ್ರಿ.ಶ. ೧೭೫೩ರಲ್ಲಿ ಬಸವಪ್ಪನು ಈ ಕೋಟೆಯನ್ನು ಸ್ವಾಧೀನಮಾಡಿಕೊಂಡನು. ಇದರ ಪರಿಣಾಮವಾಗಿ ಯುದ್ಧದ ನಷ್ಟಕ್ಕಾಗಿ ಕೋಲತ್ತರಸನು ಕೆಳದಿ ದೊರೆಗೆ ೧೦೦೦ ವರಹ ನೀಡಿದನು. ಈ ರೀತಿ ಕೋಲತ್ತರಸನ ಬಹುಭಾಗ ಪ್ರದೇಶವು ಕೆಳದಿಯವರ ವಶವಾಯಿತು.[೧೨] ೧೭೫೫ರಲ್ಲಿ ಆಳಿದ ಚೆನ್ನಬಸಪ್ಪನಾಯಕನ ಕಾಲದಲ್ಲಿಯೂ ಫ್ರೆಂಚ್, ಡಚ್, ಇಂಗ್ಲೀಷರ ಪ್ರಭಾವವಿದ್ದರೂ ಕೆಳದಿಗೇ ಜಯ ಲಭಿಸಿತು.

ಉಪಸಂಹಾರ

ಕೆಳದಿ ಹಾಗೂ ಕೇರಳ ಮಂಡಳದ ಕುರಿತು ಲಿಂಗಣ್ಣಯ್ಯ ಕವಿಯು ಕೆಳದಿ ನೃಪ ವಿಜಯ, ಬಸವರಾಜನ ಶಿವತತ್ವರತ್ನಾಕರ, ಶಾಸನೇತ್ಯಾದಿ ಆಕರಗಳು; ಮಲಬಾರ ಮನ್ನಲ, ಡಚ್, ಇಂಗ್ಲೀಷ್, ಫ್ರೆಂಚ್, ಪೋರ್ಚುಗೀಸ್ ಆಕರಗಳು, ಕೇರಳ ಸಾಹಿತ್ಯ ಚರಿತ್ರಮ್, ಕೇರಳ ಗೆಜೆಟೀರ್, ಲೋಗಸ್‌ನ ತಲಚೇರಿಯ ದಿನಚರಿಗಳು ಕೆಳದಿ-ಕೇರಳ ಮಂಡಲದ ಇತಿಹಾಸ ಕುರಿತು ಅಧ್ಯಯನ ಕೈಗೊಳ್ಳಲು ಯೋಗ್ಯವಾಗಿವೆ. ಈ ಕುರಿತು ಖಚಿತ ಮಾಹಿತಿಗಳೊಂದಿಗೆ ಸರ್ವೇಕ್ಷಣೆ ಕೈಗೊಂಡಲ್ಲಿ ಹೆಚ್ಚಿನ ಬೆಳಕು ಚೆಲ್ಲಲು ಸಾಧ್ಯ. ಕೆಳದಿ ಅರಸರ ಕಾಲದ ಕೇರಳದಲ್ಲಿರುವ ಅವಶೇಷಗಳನ್ನು ಸಮೀಕ್ಷಿಸಿ, ಮುಂದಿನ ಪೀಳಿಗೆಗೆ ಉಳಿಸುವಲ್ಲಿ ಕ್ಯಾಟಲಾಗ್ (ಅವಶೇಷಗಳ) ಎಂದಿಗಿಂತಲೂ ಇಂದು ಅತ್ಯಗತ್ಯ. ಕೆಳದಿ ಇತಿಹಾಸ ಸಂಸ್ಕೃತಿ ಸಂಶೋಧನೆಗಾಗಿಯೇ ಸರಕಾರದಿಂದ ರೂಪಗೊಂಡ ಕೆಳದಿ ಸಂಶೋಧನಾಲಯ ಇದನ್ನು ಕೈಗೊಳ್ಳುವುದು ಸೂಕ್ತ.

ಪ್ರವಾಸೋದ್ದಿಮೆಯಲ್ಲಂತೂ ಕೆಳದಿ ಶಿವಪ್ಪನಾಯಕನ ಬೇಕಲ ಕೋಟೆಯನ್ನು ಅಭಿವೃದ್ಧಿಪಡಿಸುತ್ತಿರುವ ಕೇರಳ ಸರಕಾರವು ಕನ್ನಡ ಮತ್ತು ಕೇರಳದ ಸೋದರ ಸೌಹಾರ್ದಭಾವದಿಂದ ಅಲ್ಲಿ ಕೆಳದಿ ಶಿವಪ್ಪನಾಯಕನ ಪುತ್ಥಳಿ ಸ್ಥಾಪಿಸುವುದು ಅಗತ್ಯ. ರಾಷ್ಟ್ರೀಯ ಭಾವನೆಯಲ್ಲಿ ಮುಂದಿನ ಪೀಳಿಗೆಗೆ ಇದು ಉದಾತ್ಮ ಧ್ಯೇಯಕ್ಕೆ ಪ್ರೇರಕ ಉಂಟುಮಾಡಬಲ್ಲುದಲ್ಲವೇ?

ಅಡಿಟಿಪ್ಪಣಿಗಳು

೧) ರೈಸ್, ಮೈಸೂರು ೨ ಪುಟ ೪೩೨ ಬಿ) ಗೆಜೆಟೀರ್ ಆಫ್ ಇಂಡಿಯಾ, ಕೇರಳ (ಕನ್ನಾನೂರ) ಪುಟ ೯೭, ಸ್ಟಡೀಸ್ ಇನ್ ತುಳುವ ಓಸ್ಟ್ರಿ ಅಂಡ್ ಕಲ್ಚರ್ ಪು.೫೧.

೨) ದನವರ್‍ಸ್, ದಿ ಪೋರ್ಚುಗೀಸ್ ೨, ಪುಟ. ೧೯೯.

೩) ಸ.ಕ.ಜಿ. ಪ್ರಾಚೀನ ಇತಿಹಾಸ, ಎಂ. ಗಣಪತಿರಾವ್ ಐಗಳ್ ಪು. ೩೭೨.

೪) ಸ್ಟಡೀಸ್ ಇನ್ ತುಳುವ ಹಿಸ್ಟ್ರಿ ಅಂಡ್ ಕಲ್ಚರ್ ಡಾ. ಜಿ. ಭಟ್ ಪು. ೧೦೫.

೫) ದ.ಕ.ಜಿ. ಪ್ರಾ.ಇ. ಪುಟ ೩೭೬.

೬) ಬೇಕಲ ಶಿವಾನಂದ, ಆಲ್‌ಸೋಪ್ಲೀಸ್ ರೆಫರ್ ಗೆಜಿಟೀರ ಆಫ್ ಇಂಡಿಯಾ, ಕೇರಳ ಕಣ್ಣನೂರ್ ಪುಟ ೭೧೪.

೭) ಎ.ಎಸ್.ಆರ್. (ಎಸ್.ಸಿ), ೧೯೦೩-೦೪ ಪು. ೫೫:೧೯೨೦-೨೨ ಪು.೨೬. ಆಲ್ಸೋ ರೆಫರ್ ಗೆಜೆಟೀರ್ ಆಫ್ ಇಂಡಿಯಾ, ಕೇರಳ - ಕಣ್ಣಾನೂರ್ ಪುಟ. ೯೮ ಮತ್ತು ಶಿ.ತ.ರ.ಕ. ೭ ತ. ೧೪.

೮) ದ.ಕ.ಪ್ರಾ.ಇ. ಅತಗಳ್ ಪು ೩೭೩

೯) ರೈಸ್, ಮೈಸೂರು ಮತ್ತು ಕೂರ್ಗ್ ಇನ್‌ಸ್ಕ್ರಿಪ್ಷನ್ಸ್, ೧ ಪು. ೧೫೮.

೧೦) ಬಟಾವಿಯಾ ಡಾಗ್ ರಿಜಿಸ್ಟರ್, ೧೬೬೪, ಪು. ೪೩.
ಬಿ) ಫಾಸ್ಟರ್:ಇಂಗ್ಲೀಷ್ ಫ್ಯಾಕ್ಟರೀಸ್ ಇನ್ ಇಂಡಿಯಾ೧೬೬೮-೬೯, ಪು. ೨೬೪.
ಸಿ) ಐಬಿಡ್ ಪು. ೨೬೫.

೧೧) ಸೋಮಶೇಖರ ನಾಯಕನ ಸೇನಾಧಿಪತಿ ಬಾರಕೂರು ಸೂರಪ್ಪಯ್ಯನು ೧೭೩೭ರಲ್ಲಿ ಕಾಂಇಂಗಾಡುನ್ನು ಹಿಡಿದು ಅಲ್ಲಿ ಕೋಟೆ ನಿರ್ಮಿಸಿದನು. ೧೭೪೨ರಲ್ಲಿ ರಾಮವರ್ಮ ರಾಜನೊಂದಿಗೆ ಒಪ್ಪಂದದ ಪರಿಣಾಮವಾಗಿ ಒಂದೊಂದು ಸೀಡಿನಿಂದ ೫೩೦ ಇಕ್ಕೇರಿ ವರಹ ಕಪ್ಪವನ್ನು ಕೆಳದಿ ದೊರೆಗೆ ಕೊಡುವಂತಾಯಿತು. ದ.ಕ.ಜಿ.ಪ್ರಾ.ಇ.ಐಗಳ್ ಪುಟ. ೩೮೦.

೧೨) ಅದೇ - ೩೭೯: ಈ ಕಾಲದಲ್ಲಿ ಕುನಿ ಹೋಮೋ ಇದ್ದನೆಂದು ಲೋಗನ್, ಡಾನ್ವರ್ಸ್, ತಲಬೇರಿ ದಿನಚರಿ ದಾಖಲೆಗಳು ಉಲ್ಲೇಖಿಸುತ್ತಾರೆ.

ಆಕರಗಳು

೧. ಲಿಂಗಣ್ಣಕವಿಯ ಕೆಳದಿ ನೃಪವಿಜಯ - ಕೆಳದಿ ಗುಂಡಾಜೋಯಿಸ್, ಕಸಾಪ -೧೯೭೭.
೨. ದ.ಕ.ಪ್ರಾ.ಇ. ಅತಗಳ್.
೩. Keladi Polity - Poona University.
೪. Gezetteirs fo Kerala Cananore, Govt. of Kerala 1972.
೫. Nayakas of Ikkeri, Madras University 1957 Dr. K.D.Swaminathan.
೬. Studies in Tuluva History and Culture, Prof. P. Gururaja Bhat M.A, Ph.D., 1975, Manipal Power Press.

೧೩) Madras District Manual South Kanara, page 117. Rajas of Kumbla, Vittal and Nileswar, had been under the Bednur (KELADI) Government more heriditory managers of Districts paying not Peshcush but a rent nearly as high as that paid by potails or ordiary reuters of districts of equal value. (Sir Thomas 'Munros' letter Date 16-06-1800.)

□

೫. ಮಾಸ್ತಿಕಲ್ಲುಗಳಲ್ಲಿ ಕೈ ಎತ್ತಿದ ತೋಳು – ಒಂದು ವಿಶ್ಲೇಷಣೆ

• ಡಾ. ಬಿ.ಎಸ್. ಗೀತಾ

ಎತ್ತಿದ ಕೈಯುಳ್ಳ ಮಾಸ್ತಿಕಲ್ಲುಗಳು ಸಾಕಷ್ಟು ಸಂಖ್ಯೆಯಲ್ಲಿ ಸಿಗುತ್ತವೆ. ಇಂತಹ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಬಲಗೈಯನ್ನು ಎತ್ತಿಹಿಡಿದುಕೊಂಡ ಹಾಗೆ ಚಿತ್ರಿಸಲಾಗಿರುತ್ತದೆ. ಎತ್ತಿದ ಕೈ ತೋಳಿನ ಆಚರಣೆಯ ಹಿನ್ನೆಲೆಯ ಬಗ್ಗೆ ಸಮಸ್ಯೆಗಳು ಜಟಿಲವಾಗಿಯೇ ಇದೆ. ಕೈ ಎತ್ತಿದ ತೋಳು ಆಶೀರ್ವಾದದ ಸಂಕೇತವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದರೆ ಕೈ ಎತ್ತಿದ ತೋಳು ಆಶೀರ್ವಾದದ ಸಂಕೇತವೇ? ಅಭಯಹಸ್ತವೇ? ಎನ್ನುವುದು ಚರ್ಚೆಯ ವಿಷಯವಾಗಬೇಕಾಗಿದೆ. ಈ ಬಗ್ಗೆ ಒಂದು ಪ್ರಯತ್ನವೇ ಈ ಲೇಖನದ ವಸ್ತು.

ಶಾಸನಗಳಲಿ ಈ ಬಗೆಗಿನ ವಿವರಗಳನ್ನು ಒಂದಿಷ್ಟು ಗಮನಿಸಬಹುದಾಗಿದೆ. ಶಾಸನಗಳಲ್ಲಿ ಭಾಷೆಯನ್ನು ಕೊಡುವ ಪರಿಪಾಠವೊಂದು ವ್ಯಾಪಕವಾಗಿಯೇ ಕಂಡು ಬರುತ್ತದೆ. ವೀರರು ಹೋರಾಟಕ್ಕೆ ಮೊದಲು ಭಾಷೆಯನ್ನು ಕೊಟ್ಟಿರುವುದು, ಅದೇ ರೀತಿ ಆತನ ಮಡದಿಯರು ತಾವು ಸತಿಯರಾಗುವುದಾಗಿ ಭಾಷೆಯನ್ನು ಕೊಟ್ಟಿರುವ ಉಲ್ಲೇಖಗಳು ಸಿಗುತ್ತವೆ.

ಹಳೇಬೀಡಿನ ಶಾಸನದಲ್ಲಿ 'ಭಾಷೆ[ಗೆ] ತಪ್ಪುವ ಲೆಂಕರಗಂಡಂ ಬಿಲ್ಲಬೇಟೆಯ ಕಬ್ಬಿಲ[ಜೋ]ಗೆಯ ನಾಯಕ ವೀರಬಲ್ಲಾಳನ ಕುಮಾರ ಲಕ್ಷ್ಮೀಧರದಂಣ್ನಾಯಕ್ಕನೊಡನೆ ಸಾವನ್ನಾಗಿ ನುಡಿ[ದ] ಭಾಷೆಯಂ ನೆಱಪಿದ ಯಾತನ ಮದುವಳಿಗೆ' (ಎಕ. ೯, ಹಳೇಬೀಡು ೩೭೨; ೧೨೧೫)

ತಮ್ಮ ಅರಸರು ಸತ್ತಾಗ ಅವರೊಂದಿಗೆ ಲೆಂಕರು ಭಾಷೆಯನ್ನು ಕೊಟ್ಟು, ವಂಶ ಪಾರಂಪರ್ಯವಾಗಿ ಪ್ರಾಣತ್ಯಾಗವನ್ನು ಮಾಡಿದ ಉಲ್ಲೇಖ ಶಾಸನಗಳಲ್ಲಿದೆ. ಹೊಯ್ಸಳ ಅರಸರಾದ ಎಱೆಯಂಗೆ, ಬಿಟ್ಟಿದೇವ, ನಾರಸಿಂಹದೇವ, ಬಲ್ಲಾಳ ದೇವರೊಡನೆ ಲೆಂಕರೂ, ಲೆಂಕಿಯರೂ, ಕೊಟ್ಟ ಭಾಷೆಯಂತೆ ಪ್ರಾಣತ್ಯಾಗ ಮಾಡಿದ್ದನ್ನು ಶಾಸನಗಳು ವಿವರಿಸುತ್ತವೆ. (ಎಕ.೬, ಕೃಷ್ಣರಾ; ಅಗ್ರಹಾರ ಬಾಚಹಳ್ಳಿ ೮೨; ೧೨೫೬; ೮೪; ೧೨೯೧).

ಎತ್ತಿದ ತೋಳಿನ ಚಿಹ್ನೆಗಳನ್ನು ಕುರಿತು ವಿದ್ವಾಂಸರು ಈ ರೀತಿ ಅಭಿಪ್ರಾಯ ಪಡುತ್ತಾರೆ. "ಕೆಲವೊಮ್ಮೆ ಇಂತಹ ಕಲ್ಲುಗಳ ಮೇಲೆ ಎತ್ತಿದ ತೋಳಿನ ಚಿತ್ರ

ಮಾತ್ರವಿರುತ್ತದೆ. ಸತಿಯರು ಚಿತೆಯನ್ನೇರಲು ಹೋಗುವಾಗ ಕುಂಕುಮದಲ್ಲಿ ಕೈಯನ್ನು ಅದ್ದಿ ಬಾಗಿಲಿನ ಮೇಲೆ ತಮ್ಮ ಬೆರಳುಗಳನ್ನು ಮೂಡಿಸುತ್ತಿದ್ದರು. ಬಹುಶಃ ಈಗ ದೊರಕುವ ಮಾಸ್ತಿಕಲ್ಲುಗಳ ಮೇಲಿನ ತೋಳುಗಳು ಸಹಗಮನವನ್ನು ಮಾಡಿದ ಸ್ತ್ರೀಯ ಬೆರಳುಗಳ ಪಡಿಯಚ್ಚಾಗಿದ್ದರೂ ಇರಬಹುದು. ಮಹಾಸತಿಯ ಬಲಗೈ ಶುಭದ ಸೌಭಾಗ್ಯದ ಧನ್ಯಜೀವದ ಸಂಕೇತ" (ಚಿದಾನಂದಮೂರ್ತಿ. ಎಂ. ೧೯೬೬:೩೧೮)

ಸ್ತ್ರೀಯ ಬೆರಳಿನ ಪಡಿಯಚ್ಚಿನ ಆಚರಣೆ, ಇಂದಿಗೂ ಕರ್ನಾಟಕದ ಎಷ್ಟೋ ಭಾಗದಲ್ಲಿ ಸತಿ ಆಚರಣೆಗೆ ಸಂಬಂಧಿಸಿದಂತಹ ಒಂದು ಪಳೆಯುಳಿಕೆ ಇನ್ನೂ ಜೀವಂತವಾಗಿರುವಂತಿದೆ. "ಈ ಆಚರಣೆ, ಮದುವೆಯ ಹಾಗೂ ಗೃಹಪ್ರವೇಶದ ಸಂದರ್ಭದಲ್ಲಿ 'ಕೈ ಒತ್ತಸ'ಶಾಸ್ತ್ರವಿದೆ. ಮದುವೆಯಾದ ನಂತರ ಗಂಡನ ಮನೆಗೆ ಬಂದಂತಹ ಮದುವೆಯಾದ ಹೆಣ್ಣಿನ ಎರಡು ಹಸ್ತಗಳನ್ನು ಓಕುಳಿ (ಅರಿಶಿ ಮತ್ತು ಸುಣ್ಣದಿಂದ ತಯಾರಿಸಲಾದ ಕೆಂಪು ಬಣ್ಣದ ನೀರು)ಯಲ್ಲಿ ಅದ್ದಿಸಿ ಅವುಗಳನ್ನು ಉರಿಯುತ್ತಿರುವ ಒಲೆಯ ಬದುವಿನ ಮೇಲ್ಭಾಗದ ಗೋಡೆಗೆ ಒತ್ತಿಸುತ್ತಾರೆ. (ಒಲೆಯ ಗೂಡಿನ ಒಳಗೆ ಸೌದೆಯಿಂದ ತಯಾರಿಸಲಾದ ಒಲೆ ಉರಿಯುತ್ತಿರುತ್ತದೆ. ಅದರ ಮೇಲ್ಭಾಗದ ಗೋಡೆ). ಇದರಲ್ಲಿ ಆ ಹೆಣ್ಣುಮಗಳು ಮನೆಗೆ ಶುಭ ತರಲಿ ಎನ್ನುವ ಆಶಯವಿರುತ್ತದೆ. ಹಾಗೆಯೇ ಇದೇ ರೀತಿಯ ಆಚರಣೆಯನ್ನು ಗೃಹಪ್ರವೇಶದ ದಿನ ಮದುವೆಯಾಗಿ ಹೋಗಿದ್ದ ಮನೆಯ ಹೆಣ್ಣು ಮಗಳಿಂದ ನೆರವೇರಿಸಲಾಗುತ್ತದೆ. ಗಮನಿಸಿ, ಮನೆಯ ಸೊಸೆಯಿಂದಲ್ಲ. ದೇಕಬ್ಬೆಯ ಶಾಸನದಲ್ಲಿರುವ 'ಕೊಬ್ಬಾಕೊಣ್ಡ ಮನೆಯೆಸವಿಂಮಿವಿಲ್ ಎಂದು ದೇಕಬ್ಬೆ ಹೇಳುವ ಮಾತುಗಳು, ಮೇಲಿನ ಸೊಸೆ ಹಾಗೂ ಮಗಳು ನೆರವೇರಿಸಬೇಕಾದಂತಹ ಕೈಯನ್ನು ಒತ್ತಿಸುವ ಆಚರಣೆಯ ಹಿನ್ನೆಲೆಯ ಆಶಯವಾಗಿರಬೇಕು. ಇನ್ನು ಈ ಪಡಿಯಚ್ಚಿನ ಬಗ್ಗೆ ಹೇಳುವುದಾದರೆ ಇದು ಆಶೀರ್ವಾದವನ್ನು ಅಥವಾ ಅಭಯ ಹಸ್ತವನ್ನು ಸೂಚಿಸುವಂತೆ ಕಾಣುತ್ತಿಲ್ಲ. ಆ ಮನೆಗೆ ಇನ್ನೂ ಚಿಕ್ಕವಳಾಗಿ ಬಂದು (ಆಕೆಯ ಅತ್ತೆ, ಅತ್ತಿಗೆ ಮೊದಲಾದ ದೊಡ್ಡವರು ಇರುವಾಗ) ಪ್ರವೇಶಿಸುತ್ತಿರುವ ಈ ಹೆಣ್ಣುಮಗಳು ಅಷ್ಟೆಲ್ಲಾ ದೊಡ್ಡವರಿಗೆ ಆಶೀರ್ವಾ ಮಾಡಲು ಸಾಧ್ಯವಿಲ್ಲವಲ್ಲವೆ? ಅಂದರೆ ಇವನ್ನು ಅರ್ಥೈಸುವುದೇ ಬೇರೆಯಾಗಿದೆ. ತಾನು ಈ ಮನೆಗೆ ಶುಭವನ್ನು ತರುತ್ತೇನೆಂದು ಮದುವೆಯಾದ ಹೆಣ್ಣು ಪ್ರಮಾಣ ಮಾಡುತ್ತಿದ್ದಾಳೆ, ಭಾಷೆಯನ್ನು ಕೊಡುತ್ತಿದ್ದಾಳೆ. (ಗೀತಾ ಬಿ.ಎಸ್. ೨೦೦೮–; ೧೭೭).

ಕೈಗಳನ್ನು ಹಾಲಿನಲ್ಲಿಯೋ, ಹಾಗೆಯೇ ಮುತ್ತೈದೆಯರಾಗಿದ್ದರೆ ಕೆಂಪು ಬಣ್ಣದ ನೀರಿನಲ್ಲಿ ಅದ್ದಿಸಿ ಪ್ರಮಾಣ ಮಾಡಿಸುವ ಪದ್ಧತಿ ಹಿಂದಿನಿಂದಲೂ ಇದೆ. ಹಾಗಾದರೆ ಎತ್ತಿದ ತೋಳು ಭಾಷೆಯನ್ನು ಕೊಡುವ ಸಂಕೇತವೇ? "ಎತ್ತಿದ ತೋಳಿನ ಚಿತ್ರಗಳನ್ನು ಗಮನಸಿದಾಗ ಈ ಅಭಿಪ್ರಾಯ ಹೆಚ್ಚು ಸಹಕಾರಿಯಾಗುತ್ತದೆ. ಏಕೆಂದರೆ ಮಾಸ್ತಿಯ ಕೈಯನ್ನು ಮಾಸ್ತಿಯ ಜೊತೆಯಲ್ಲಿ ಇರುವ ಚಿತ್ರ, ಆಕೆ ತನ್ನ ಬಲ ತೋಳನ್ನು ತನ್ನ ತಲೆಯ ಭಾಗದಷ್ಟೆತ್ತರಕ್ಕೆ ಇಲ್ಲವೆ ಭುಜದಿಂದ ಸ್ವಲ್ಪ ಮೇಲಕ್ಕೆ ಎತ್ತಿರುತ್ತಾಳೆ.

ಆಶೀರ್ವಾದ ಸೂಚಕವಾದ ಕೈ ಆ ವ್ಯಕ್ತಿಯ ಸೊಂಟಕ್ಕೆ ಅಥವಾ ಭುಜ ಭಾಗಕ್ಕೆ ನೇರವಾಗಿರುವುದನ್ನು ಕಾಣಬಹುದು. ಇದಕ್ಕೆ ಸ್ಪಷ್ಟನೆಗಾಗಿ ಕ್ರೀಡಾಪಟುಗಳು ಕ್ರೀಡೆ ಪ್ರಾರಂಭವಾಗುವುದಕ್ಕೆ ಮುಂಚೆ ತಮ್ಮ ಬಲಗೈಯನ್ನು ಹಸ್ತತೋರಿಸುವಂತೆ ಎತ್ತಿಹಿಡಿದು ಪ್ರಮಾಣ 'Oath' 'ಮಾಡುವುದನ್ನು ಗಮನಿಸಿಯೇ ಇದ್ದೇವೆ, ನಾವೆಲ್ಲರು (ಮೇಲಿನದ)

ಹಿಂದೆ ನಾವು ಗಮನಿಸಿದಂತೆ ಶಾಸನಗಳಲ್ಲಿ 'ಭಾಷೆಗೆ ತಪ್ಪುವವರಲ್ಲ ಎಂದು ಕೊಟ್ಟ ಮಾತಿಗೆ ತಕ್ಕಂತೆ ಹೋರಾಡಿ ಪ್ರಾಣ ತ್ಯಜಿಸಿದ ವ್ಯಕ್ತಿಗಳ ಜೊತೆಗೆ ಆತನ ಪತ್ನಿಯರು ಆತನಂತೆಯೇ ಮಾತಿಗೆ ತಪ್ಪದಂತೆ ಸತಿ ಹೋದ ವಿವರಗಳನ್ನು ನೋಡಲಾಯಿತು. ಅಂದರೆ ಇಲ್ಲಿ ಭಾಷೆಯನ್ನು ಕೊಡುವ ಪದ್ಧತಿ ಪ್ರಚಲಿತವಾಗಿತ್ತು. ಅದರಂತೆಯೇ ವೀರರು ಮತ್ತು ಅವರ ಪತ್ನಿಯರು ನಡೆದುಕೊಳ್ಳುತ್ತಿದ್ದರು ಎನ್ನುವುದು ವೇದ್ಯವಾಗುತ್ತದೆ. ಹಾಗಾದರೆ ಎತ್ತಿದತೋಳು ಆಶೀರ್ವಾದ ಸೂಚಕವಲ್ಲವೇ ಅಥವಾ ಹಸ್ತವಲ್ಲವೇ? ಭಾಷೆಗಾಗಿ ತೋಳನ್ನು ಎತ್ತಿಹಿಡಿಯಲಾಗಿರುತ್ತದೆಯೆ? ಇದಕ್ಕೆ ಇನ್ನೂ ಸ್ಪಷ್ಟನೆಗಾಗಿ ಜನಪದ ಮೂಲವನ್ನು ಒಂದಿಷ್ಟು ನೋಡೋಣ. 'ವಡ್ಡೆಗೆರೆ ನಾಗಮ್ಮ'ನ ಜನಪದ ಗೀತೆಯಲ್ಲಿ, ವಡ್ಡಗೆರೆಗೆ ಮದುವೆಯಾಗಿ ಹೋದ ನಾಗಮ್ಮ, ರಣಾಗ್ರಕ್ಕೆ ಹೋದ ಈರಣ್ಣ ಮಾಡಿದ ಸುದ್ದಿಯ ಕೇಳಿಕೊಂಡಕ್ಕೆ ಹೋಗಲು ಸಿದ್ಧವಾಗುತ್ತಾಳೆ. ನಾಗಮ್ಮನು ಹೇಳಿದ ಹಾಗೆಯೇ ಗುಡಿಯನ್ನು ಕಟ್ಟುತ್ತಾರೆ. ಲಿಂಗವನ್ನು ಪ್ರತಿಷ್ಠೆ ಮಾಡಿಸುತ್ತಾರೆ. ಹಿಂದೆ ನಾಗವ್ವ ಕೊಟ್ಟಮಾತಿನಂತೆ – 'ಒಂದು ಗುಡಿಯನ್ನು ಕಟ್ಟಿಸಿ ಅದರೊಳಗೆ ನಾನು ಪತ್ಯಕ್ಷಳಾಗಿ ಸೇರುತ್ತೇನೆ; ವರುಷಕ್ಕೊಂದು ಬಾರಿ ಪೂಜೆ ನಡೆಸಿ ನಿಮ್ಮನ್ನು ಕರೆಸುತ್ತೇನೆ' ಎಂದು ಹೇಳುತ್ತಾಳೆ. ಅದೇ ರೀತಿ ನಾಗಮ್ಮ ಪ್ರತ್ಯಕ್ಷವಾಗಿ ಆನಂದವಾಗಿ ತನ್ನ ತವರವರು ಬೆಳೆಯಲೆಂದು – ವರುಷಕ್ಕೆ ಪೂಜೆ ತರಲೆಯ 'ಬಲಗೈಯನ್ನು ಎತ್ತಿ ಬಾಸೆ ಕೊಡುತ್ತಾಳೆ. (ಕಾಳೇಗೌಡ ನಾಗವಾರ; ೧೯೭೩).

'ಮಹಾಸತಿ ತಂಗ್ಯಮ್ಮ' ಜನಪದ ಗೀತೆಯಲ್ಲಿ ಈ ಬಾಸೆ ಕೊಡುವುದರ ಬಗ್ಗೆ ವಿವರಗಳಿವೆ.

ಆಚೆಗದ್ಯಾಗ ನೀನು ಈಚೆಗದ್ಯಾಗ ನಾನು
ಬಾಸೇಯ ಕೊಳ್ಳಿ ಬಲಗೈಲಿ
ಬಾಸೇಯ ಕೊಳ್ಳಿ ಬಲಗೈಲಿ । ಗಂಗಮ್ಮ
ಬಾಸೆ ತಪ್ಪೋರ ಮಗಳಲ್ಲ
ಇಂದಲ ಗದ್ಯಾಗ ನೀನು ಮುಂದಲ ಗದ್ಯಾಗ ನಾನು
ನಂಬೀಗೆ ಕೊಳ್ಳಿ ಬಲಗೈಲಿ
ನಂಬೀಗೆ ಕೊಳ್ಳಿ ಬಲಗೈಲಿ । ಗಂಗಮ್ಮ
ನಂಬೀಕೆ ತಪ್ಪೋರ ಮಗಳಲ್ಲ ॥ (ಕೃಷ್ಣಮೂರ್ತಿ ಹನೂರು)

ಮೇಲಿನ ಈ ಎಲ್ಲಾ ಉಲ್ಲೇಖಗಳು ಸ್ಪಷ್ಟವಾಗಿಯೇ ಬಲಗೈಯನ್ನು ಎತ್ತಿ ಭಾಷೆಯನ್ನು ಕೊಟ್ಟಿರುವ ಸಂಕೇತವಾಗಿದೆ. ಹಿಂದೆ ನಾವು ಗಮನಿಸಿದಂತೆ

ಉರಿಯುತ್ತಿರುವ ಸೌದೆ ಒಲೆ, ಹೆಣ್ಣಿನ ಹಸ್ತದಪಡಿಯಚ್ಚಿನ ಗುರುತು ಇವೆಲ್ಲವೂ ಒಂದು ರೀತಿಯಲ್ಲಿ ಸತಿಯ ಆಚರಣೆಯ ಅಥವಾ ಸಹಗಮನದ ಸಂಕೇತವಾಗಿ ಇಂದಿಗೂ ಉಳಿದು ಬಂದಿರುವಂತಿದೆ. ಶಾಸನಗಳಲ್ಲಿ 'ಭಾಷೆ'ಯನ್ನು ಕೊಡುವ ಉಲ್ಲೇಖಗಳು ಹಾಗೆಯೇ ಜನಪದ ಗೀತೆಗಳಲ್ಲಿ ಸ್ಪಷ್ಟವಾಗಿಯೇ 'ಬಾಸೆ'ಯನ್ನು ಕೊಡುವ ವಿವರಗಳಿವೆ. ಈ ಎಲ್ಲಾ ಕಾರಣಗಳಿಂದಾಗಿ ಎತ್ತಿದ ತೋಳಿನ ಸಂಕೇತವು ಆಶೀರ್ವಾದ ಅಥವಾ ಅಭಯಹಸ್ತವನ್ನು ಸೂಚಿಸದೆ ಶುಭವನ್ನು ತರುವುದಾಗಿ, ನಂಬಿಕೆಯನ್ನು ಉಳಿಸುವುದಾಗಿ ಸತಿಯಾದವಳು ತನ್ನ ಕರ್ತವ್ಯವನ್ನು ಪಾಲಿಸುವ ಸಲುವಾಗ, ಅಂದಿನ ಕಾಲದಲ್ಲಿ ಇದ್ದಂತಹ ಸಂಸ್ಕೃತಿಯನ್ನು ಉಳಿಸುವುದಾಗಿ 'ಭಾಷೆ'ಯನ್ನು ಕೊಡುವ ಪ್ರಮಾಣಮಾಡುವ ಸಂಕೇತವೆಂದೇ ಹೇಳಬಹುದಾಗಿದೆ.

ಗ್ರಂಥಸೂಚಿ

೧. ಕಾಳೇಗೌಡ ನಾಗವಾರ (ಸಂ), ಬಯಲು ಸೀಮೆ ಲಾವಣಿಗಳು

೨. ಕೃಷ್ಣಮೂರ್ತಿ ಹನೂರು (ಸಂ), ಕತ್ತಾಲದಾರಿದೂರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧.

೩. ಗೀತಾ ಬಿ.ಎಸ್, ಕರ್ನಾಟಕದ ಸಾಂಸ್ಕೃತಿಕ ಸಂಘರ್ಷ – ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೪. ಚಿದಾನಂದಮೂರ್ತಿ ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೬.

□

೬. ಭಾಷಾ ಪ್ರಪಂಚ

• ಬಿ.ಆರ್. ರವೀಂದ್ರನಾಥ್

ಟವರ್ ಆಫ್ ಬೇಬಲ್ ಎಂಬ ಬೈಬಲ್ ಕಥೆಯಲ್ಲಿ ಒಂದೇ ವಿಶ್ವ ಭಾಷೆ ಅಥವಾ ನಮೂನೆಯಿಂದ ಸಾಧಿಸಬಹುದೆಂಬ ಮಿಥ್ಯೆಯನ್ನು ರೂಪಿಸಲಾಗಿದೆ. ಮಹಾ ಪ್ರಳಯದ ನಂತರ ನಿಮ್ ರಾಡ್ ಎಂಬ ರಾಜ ಎಲ್ಲರಿಗೂ ಒಂದೇ ಗುರಿಯನ್ನು ನೀಡುವ ಉದ್ದೇಶದಿಂದ ಭೂಮಿಯಿಂದ ಆಕಾಶಕ್ಕೆ ತಲುಪುವಷ್ಟು ಎತ್ತರವಿರುವ ಒಂದು ಗೋಪುರವನ್ನು ನಿರ್ಮಾಣ ಮಾಡಲು ಆದೇಶ ನೀಡಿದ. ಟವರ್ ಆಫ್ ಬೇಬಲ್ ಗೋಪುರ ನಿಜವಾಗಲೂ ಮಾನವನ ಮಹಾ ಸಾಮರ್ಥ್ಯವನ್ನು ನಿರೂಪಿಸಿತು. ರಾಜ ನಿಮ್‌ರಾಡ್‌ನಿಗೆ ಕಣ್ಣುದ್ದ ಹಾಯಿಸಿದಷ್ಟೇ ವಿಶಾಲವಾದ ಪ್ರದೇಶ ಹಾಗೂ ಅಲ್ಲಿ ವಾಸವಿದ್ದ ಮಾನವರೆಲ್ಲರೂ ಅವನಿಗೆ ವಿಧೇಯರಾಗಿರುತ್ತಾರೆಂಬ ಭಾವನೆ ಕಂಡು ದೇವರಿಗೆ ರೇಗಿ ಹೋಯಿತು. ಭಗವಂತನು ಪ್ರಜೆಗಳ ನಾಲಿಗೆಗಳನ್ನು ತಿರುಚಿ ಎಲ್ಲರೂ ಬೇರೆ ಬೇರೆ ಭಾಷೆಗಳನ್ನು ಆಡುವ ಹಾಗೆ ಮಾಡಿಬಿಟ್ಟ. ಮೊದಲಿಗೆ ಬಹಳ ಗೊಂದಲ ಉಂಟಾಯಿತು. ಕ್ರಮೇಣ ಆಯಾ ಭಾಷೆಯನ್ನು ಆಡುವ ಪ್ರಜೆಗಳೆಲ್ಲರೂ ಒಂದುಗೂಡಿ ಪ್ರತ್ಯೇಕವಾಗಿ ಜೀವಿಸಲು ಪ್ರಾರಂಭ ಮಾಡಿದರು. ಹೀಗಾಗಿಯೇ ಬೇರೆ ಭಾಷೆಗಳನ್ನು ಬಳಸುವ ಬೇರೆ ಬೇರೆ ಯೋಜನಾ ಲಹರಿಗಳೊಂದಿಗೆ ಆಗಾಗ್ಗೆ ತಮ್ಮ ತಮ್ಮೊಳಗೆ ಕಾದಾಡುವ ವಿಶ್ವದ ಹಲವು ರಾಷ್ಟ್ರಗಳು ರೂಪಿತಗೊಂಡವು.

ಭಾಷೆ ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಸ್ವತಂತ್ರ ಧ್ವನಿಸಂಕೇತಗಳ ವ್ಯವಸ್ಥೆ. ಯಾದೃಚ್ಛಿಕ ಮೌಖಿಕ ಧ್ವನಿಸಂಕೇತಗಳ ವ್ಯವಸ್ಥೆಯಿಂದ ಕೂಡಿ ಒಂದು ಸಾಮಾಜಿಕ ಸಮೂಹದ ಸಹಕಾರಕ್ಕೆ ಕಾರಣವಾಗುವುದೇ ಭಾಷೆ ಎಂದು ಬ್ಲಾಕ್ ಮತ್ತು ಟ್ರೇಗರ್ ಹೇಳಿದ್ದಾರೆ. ಭಾಷೆ ಒಂದು ವ್ಯವಸ್ಥೆ; ಸಂಕೇತಗಳ ವ್ಯವಸ್ಥೆ; ಉಚ್ಚರಿತ ಸಂಕೇತಗಳ ವ್ಯವಸ್ಥೆ; ಯಾದೃಚ್ಛಿಕ ಉಚ್ಚರಿತ ಸಂಕೇತಗಳ ವ್ಯವಸ್ಥೆಯೇ ಭಾಷೆ ಎಂದು ತಿಳಿದುಬರುತ್ತದೆ. ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಂಕೇತಗಳ ಒಂದು ಸುವ್ಯವಸ್ಥೆಯೇ ಭಾಷೆ ಎಂದು ಡಿ. ಸಸೂರ್ ಹೇಳಿದ್ದಾನೆ. ಶಬ್ದಗಳೆಂಬ ನಾಣ್ಯಗಳ ಮುಲಕ ಮಾತ್ರ ನಾವು ನಮ್ಮೊಳಗೇ

ಆಲೋಚನೆಗಳ ವಿನಿಮಯ ಮಾಡಿಕೊಳ್ಳಲು ಸಾಧ್ಯ ಎಂಬುದಾಗಿ ಕ್ವಿಲರ್ ಕೌಂಚ್ ಅಭಿಪ್ರಾಯಪಟ್ಟಿದ್ದಾನೆ.

ಮೃಗಕ್ಕೂ ಮಾನವನಿಗೂ ಇರುವ ವ್ಯತ್ಯಾಸಗಳಲ್ಲಿ ಭಾಷೆಯೇ ಪ್ರಮುಖವಾದುದು. ಭಾಷೆ ಸಂಸ್ಕೃತಿಯ ಸಾಧನ ಸಾಮಗ್ರಿ. ಭಾಷೆಯಿಂದಲೇ ಮಾನವ ಸಮಾಜ ಸಂಸ್ಕೃತಿ ಅರಳಿ ವಿಕಾಸಗೊಂಡಿದೆ. ನಮ್ಮ ಪರಸ್ಪರ ವ್ಯವಹಾರಕ್ಕೆ ಭಾಷೆ ಪ್ರಮುಖ ಸಾಧನ. ಮಾನವ ಮನಸ್ಸನ್ನು ಅರಳಿಸುವ, ಮುದುಡಿಸುವ ಕ್ರಿಯಾಶೀಲವಾಗುವಂತೆ ಮಾಡುವ ಶಕ್ತಿ ಭಾಷೆಗುಂಟು.

ವಿಶ್ವದಲ್ಲಿ ಸುಮಾರು ೬೮೦೦ ಭಾಷೆಗಳಿರಬಹುದೆಂದು ಅಂದಾಜಿಸಲಾಗಿದೆ. ಅವುಗಳಲ್ಲಿ ೧೦೦೦ ಭಾಷೆಗಳು ಅಮೇರಿಕಾ ಖಂಡದಲ್ಲಿದ್ದರೆ, ಆಫ್ರಿಕಾದಲ್ಲಿ ೨೪೦೦ ಹಾಗೂ ಏಷ್ಯಾದಲ್ಲಿ ೨೦೦೦ ಭಾಷೆಗಳು ಬಳಕೆಯಲ್ಲಿವೆ. ಯೂರೋಪ್‌ನಲ್ಲಿ ಕೇವಲ ೨೦೦ ಭಾಷೆಗಳು ಬಳಕೆಯಲ್ಲಿವೆ. ವಿಶ್ವದಲ್ಲಿನ ಭಾಷೆಗಳ ಪೈಕಿ ಶೇ. ೨೫ರಷ್ಟು ಭಾಷೆಗಳು ಮಾತ್ರ ತಮ್ಮದೇ ಆದ ಸ್ವಂತ ಲಿಪಿಗಳನ್ನು ಹೊಂದಿರುತ್ತವೆ. ಕೆಲವು ಭಾಷಾತಜ್ಞರ ಹೇಳಿಕೆಯಂತೆ ಈ ಶತಮಾನದ ಅಂತ್ಯದೊಳಗೆ ಸುಮಾರು ಶೇ. ೯೦ ರಷ್ಟು ಭಾಷೆಗಳು ಕಣ್ಮರೆಯಾಗಿರುತ್ತವೆಯಂತೆ.

೧. ವಿಶ್ವದಲ್ಲಿ ಟಾಪ್ ೧೦ ಭಾಷೆಗಳು

ಭಾಷೆ	ಜನಸಂಖ್ಯೆ
ಚೀನಿ	೧೦೧.೫೦ ಕೋಟಿ
ಇಂಗ್ಲೀಷ್	೫೧.೪೦ ಕೋಟಿ
ಹಿಂದುಸ್ಥಾನಿ	೪೯.೬೦ ಕೋಟಿ
ಸ್ಪ್ಯಾನಿಷ್	೪೨.೫೦ ಕೋಟಿ
ರಷ್ಯನ್	೨೭.೫೦ ಕೋಟಿ
ಅರಾಬಿಕ್	೨೫.೬೦ ಕೋಟಿ
ಬಂಗಾಲಿ	೨೧.೫೦ ಕೋಟಿ
ಪೋರ್ಚುಗೀಸ್	೧೯.೪೦ ಕೋಟಿ
ಮಲಯಾ/ ಇಂಡೋನೇಷಿಯಾ	೧೭.೬೦ ಕೋಟಿ
ಫ್ರೆಂಚ್	೧೨.೯೦ ಕೋಟಿ

ಮೇಲ್ಕಂಡಂತೆ ಚೀನಿ ಭಾಷೆಯನ್ನು ವಿಶ್ವದಲ್ಲಿಯೇ ಅತಿಹೆಚ್ಚು ಜನರು ಬಳಸುವ ಭಾಷೆಯೆಂದು ಪರಿಗಣಿಸಬಹುದಾದರೂ ಚೀನಿಭಾಷೆಯಲ್ಲಿನ ವೈವಿಧ್ಯತೆಯನ್ನು ಪರಿಶೀಲಿಸಿದಾಗ ಚೀನಿ ಭಾಷೆಯ ಹೆಸರಿನಡಿಯಲ್ಲಿ ಹಲವಾರು ಚೀನಿ ಭಾಷೆಗಳು ಪ್ರಚಲಿತವಾಗಿರುತ್ತವೆ ಹಾಗೂ ಒಂದು ಪ್ರಾಂತ್ಯದ ಚೀನಿ ಭಾಷೆಯನ್ನು ಇನ್ನೊಂದು

ಪ್ರಾಂತ್ಯದ ಚೀನಿಯರು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಪರಿಸ್ಥಿತಿ ಚೀನಿ ಭಾಷೆಗೆ ಮಾತ್ರ ಸೀಮಿತವಲ್ಲ. ಅರಾಬಿಕ್ ಭಾಷೆಯ ಸುಮಾರು ೨೨ ದೇಶಗಳಲ್ಲಿ ಅಧಿಕೃತ ಹಾಗೂ ಬಳಕೆಯ ಭಾಷೆಯಾಗಿದ್ದರೂ ವಿಶ್ವದ ಒಂದು ಭಾಗದಲ್ಲಿ ಬಳಸುವ ಅರಾಬಿಕ್ ಭಾಷೆಯನ್ನು ವಿಶ್ವದ ಇನ್ನೊಂದು ಭಾಗದಲ್ಲಿರುವ ಅರಾಬಿಕ್ ಜನರಿಗೆ ಅರ್ಥವಾಗುವುದಿಲ್ಲ.

ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಷೆಗಳು ಬಳಕೆಯಲ್ಲಿವೆ. ದೇಶದ ಇತಿಹಾಸ ಹಾಗೂ ಭೌಗೋಳಿಕ ಪ್ರದೇಶದ ವ್ಯಾಪ್ತಿ ಹೆಚ್ಚಿದ್ದಷ್ಟೂ ಹೆಚ್ಚು ಸಂಖ್ಯೆಯಲ್ಲಿ ಭಾಷೆಗಳು ಬಳಕೆಯಲ್ಲಿರುತ್ತವೆ. ಅದೇ ರೀತಿ ಬಹುತೇಕ ಎಲ್ಲ ಪ್ರಮುಖ ಭಾಷೆಗಳ ಬಳಕೆಯಲ್ಲಿಯೂ ವೈವಿಧ್ಯತೆಗಳು ಇದ್ದೇ ಇರುತ್ತದೆ. ಇಂಗ್ಲೀಷ್ ಒಳಗೊಂಡಂತೆ ಇತರ ಹಲವಾರು ಭಾಷೆಗಳಲ್ಲಿನ ಪ್ರಾಂತೀಯ ವ್ಯತ್ಯಾಸಗಳು ಬಹಳಷ್ಟಿರುವುದು ಸರ್ವೇಸಾಮಾನ್ಯ. ಅಮೇರಿಕಾದ ಸಿನಿಮಾಗಳನ್ನು ಮೊದಲ ಬಾರಿಗೆ ಇಂಗ್ಲೆಂಡಿನಲ್ಲಿ ಪ್ರದರ್ಶಿಸಿದಾಗ ಅಮೇರಿಕಾದವರು ಆಡುವ ಭಾಷೆಯನ್ನು ಅರ್ಥಮಾಡಿಕೊಳ್ಳಲಾಗದ ಬ್ರಿಟನ್‌ನ ವೀಕ್ಷಕರಿಗಾಗಿ ಸಿನಿಮಾಗಳಲ್ಲಿ ಉಪಶೀರ್ಷಿಕೆಗಳನ್ನು (subtitling) ತೋರಿಸಬೇಕಾಯಿತಂತೆ.

ಆದರೂ ಪೋಲೀಷ್ ಭಾಷೆಯು ಈ ನಿಟ್ಟಿನಲ್ಲಿ ಸ್ವಲ್ಪ ವಿಭಿನ್ನವಾದ ಲಕ್ಷಣಗಳನ್ನು ಹೊಂದಿರುವುದು ಕಂಡುಬರುತ್ತದೆ. ಪೋಲೀಸ್ ಭಾಷೆಯನ್ನು ವಿಶ್ವದಾದ್ಯಂತ ೪.೬ ಕೋಟಿ ಜನರು ಬಳಸುತ್ತಾರೆ. ಈ ಭಾಷೆಯು ೧೧ ದೇಶಗಳಲ್ಲಿ ಹೆಚ್ಚು ಬಳಕೆಯಲ್ಲಿದ್ದು ೨೬ ದೇಶಗಳಲ್ಲಿ ಈ ಭಾಷೆಯನ್ನು ಬಳಸುವ ಸಾಕಷ್ಟು ಜನರಿದ್ದಾರೆ, ಪೋಲಾಂಡ್ ಹಾಗೂ ಯೂರೋಪಿಯ್ ಯೂನಿಯನ್‌ಗಳಲ್ಲಿ ಇದು ಅಧಿಕೃತ ಭಾಷೆಯಾಗಿರುತ್ತದೆ. ಪೋಲೆಂಡ್ ದೇಶದಲ್ಲಿ ಶೇ. ೯೭ರಷ್ಟು ಜನರು ತಮ್ಮ ಮಾತೃಭಾಷೆ ಪೋಲೀಷ್ ಎಂದು ಗುರುತಿಸಿಕೊಳ್ಳುವ ಕಾರಣದಿಂದ ಇಡೀ ಯೂರೋಪ್‌ನಲ್ಲಿ ಪೋಲೆಂಡ್ ಭಾಷಾವಾರು ಏಕೀಕರಣವಾಗಿರುವ ಏಕೈಕ ದೇಶ ಎಂದು ಕರೆಸಿಕೊಳ್ಳುತ್ತದೆ. ಪೋಲೀಷ್ ಭಾಷೆಯನ್ನು ಇತರ ಭಾಷಿಕರು ಕಲಿತುಕೊಳ್ಳುವುದು ಕಷ್ಟಕರ ಎಂದು ಹೇಳಲಾಗುತ್ತದೆ. ಸಾಮಾನ್ಯ ಪೋಲೀಷ್ ಭಾಷೆಯ ಬಳಕೆಯಲ್ಲಿ ಪೋಲೆಂಡ್‌ನ ವಿವಿಧ ಪ್ರಾಂತ್ಯಗಳಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸಗಳಿದ್ದರೂ, ಈ ವ್ಯತ್ಯಾಸಗಳು ಬಹಳ ಕಡಿಮೆ ಮಟ್ಟದಾಗಿದ್ದು ಪೋಲೀಷ್ ಬಲ್ಲ ಇತರ ಭಾಷಿಕರಿಗೆ ಈ ವ್ಯತ್ಯಾಸಗಳನ್ನು ಗುರುತಿಸುವುದು ಸುಲಭವಲ್ಲ. ಇಡೀ ದೇಶದಲ್ಲಿ ಸಾಮಾನ್ಯ ಪೋಲೀಷ್ ಭಾಷೆಯನ್ನು ಬಳಸುವಲ್ಲಿ ಯಾವುದೇ ತೊಂದರೆಗಳಿರುವುದಿಲ್ಲ.

ಭಾಷೆಗಳ ವಿಸ್ತರಣೆಯಲ್ಲಿ ಭಾರಿ ಅಸಮತೋಲನ ಕಂಡುಬರುತ್ತದೆ. ವಿಶ್ವದ ಶೇ. ೯೫ರಷ್ಟು ಜನ ೫ರಷ್ಟು ಭಾಷೆಗಳನ್ನು ಮಾತ್ರ ಬಳಸುತ್ತಾರೆ. ೨೨ ದೇಶಗಳಲ್ಲಿ ಸುಮಾರು ೪೬೭೮ ಭಾಷೆಗಳ ಬಳಕೆಯಾಗುತ್ತದೆ. ಅಂದರೆ ವಿಶ್ವದಲ್ಲಿ ಶೇ. ೬೪ರಷ್ಟು ಭಾಷೆಗಳು ಕೇವಲ ೨೨ ದೇಶಗಳಲ್ಲಿ ಬಳಕೆಯಾದರೆ ೨೦೫ ದೇಶಗಳಲ್ಲಿ ಕೇವಲ

೨೧-೨೨ ಭಾಷೆಗಳು ಬಳಕೆಯಾಗುತ್ತದೆ. ಅದರಲ್ಲೂ ಭಾರತವನ್ನೂ ಒಳಗೊಂಡಂತೆ ಪ್ರಥಮ ನಾಲ್ಕು ದೇಶಗಳಲ್ಲಿ ೨೧೫೫ ಭಾಷೆಗಳು ಬಳಕೆಯಲ್ಲಿದ್ದು, ಇದು ವಿಶ್ವದಲ್ಲಿನ ಶೇ. ೩೦ರಷ್ಟು ಭಾಷೆಗಳನ್ನು ಒಳಗೊಳ್ಳುತ್ತವೆ.

ಇಂಡೋನೇಷಿಯದಲ್ಲಿ ಅತ್ಯಧಿಕ ೯೯೪ ಭಾಷೆಗಳ ಬಳಕೆಯಾಗುತ್ತದೆ. ಭಾರತದಲ್ಲಿ ೩೩೭ ಭಾಷೆಗಳ ಬಳಕೆಯಿದ್ದು ನಾಲ್ಕನೇ ಸ್ಥಾನವನ್ನು ಪಡೆದಿರುತ್ತದೆ. ಭಾರತದ ನೆರೆ ದೇಶವಾದ ನೇಪಾಳದಂತಹ ಸಣ್ಣ ರಾಷ್ಟ್ರದಲ್ಲಿಯೇ ೧೧೨ ಭಾಷೆಗಳು ಬಳಕೆಯಲ್ಲಿವೆ.

ಭಾಷೆಗಳ ಸಂಖ್ಯೆಗಳ ಪ್ರಕಾರ ದೇಶಗಳನ್ನು ವಿಂಗಡಿಸಿದಾಗ ಕಂಡುಬರುವ ಚಿತ್ರ ಹೀಗಿರುತ್ತದೆ.

ಭಾಷೆಗಳು	ದೇಶಗಳು
೧-೫	೯೯
೬-೧೦	೩೭
೧೧-೫೦	೫೭
೫೧-೧೦೦	೧೭
೧೦೧-೬೦೦	೧೨
>-೬೦೦	೦೨
ಒಟ್ಟು	**೨೨೮**

ಭಾರತ ಬಹು ಭಾಷೆಗಳ ದೇಶ. ಭಾರತೀಯ ಭಾಷೆ ಮತ್ತು ಉಪಭಾಷೆಗಳ ಸರ್ವೇಕ್ಷಣಾ ಕಾರ್ಯವನ್ನು ಮೊತ್ತಮೊದಲು ಆರಂಭಿಸಿದ ಜಾರ್ಜ್ ಗ್ರಿಯರ್‌ಸನ್ ಅವರು ತಮ್ಮ ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾ ಎಂಬ ಕೃತಿಯಲ್ಲಿ ೧೮೯೧ರ ಜನಗಣತಿ ಆಧಾರದ ಮೇಲೆ ೧೭೯ ಭಾಷೆಗಳನ್ನೂ ೫೪೪ ಉಪಭಾಷೆಗಳನ್ನೂ ಪಟ್ಟಿಮಾಡಿದ್ದಾರೆ. ೧೯೨೧ರ ಜನಗಣತಿ ವರದಿಯಲ್ಲಿ ೧೮೮ ಭಾಷೆಗಳೂ ೪೯ ಉಪಭಾಷೆಗಳೂ ಉಕ್ತವಾಗಿವೆ. ೧೯೫೧ರ ಗಣತಿ ಒಟ್ಟು ೭೮೨ ಭಾಷೆ ಮತ್ತು ಉಪಭಾಷೆಗಳನ್ನು ಹೇಳುತ್ತದೆ. ೧೯೭೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಒಂದು ಸಾವಿರದ ಐನೂರಕ್ಕೂ ಹೆಚ್ಚು ಭಾಷೆ ಮತ್ತು ಉಪಭಾಷೆಗಳು ಬಳಕೆಯಲ್ಲಿವೆ ಎಂಬುದಾಗಿ ತಿಳಿದುಬಂದಿದೆ. ಭಾಷೆಗಳ ಈ ಸಂಖ್ಯೆ ಕರಾರುವಾಕ್ಕಾಗಿಲ್ಲ. ಏಕೆಂದರೆ ಸರ್ವೇಕ್ಷಣೆ ನಡೆಸಿದ ತಜ್ಞರು ಉಪಭಾಷೆಗಳನ್ನೂ ಭಾಷೆಗಳೆಂದೇ ತಿಳಿದು ಅವನ್ನು ಭಾಷಾ ಗುಂಪಿನಲ್ಲಿ ಸೇರಿಸಿದ್ದಾರೆ. ಅಲ್ಲದೆ ಒಂದೇ ಭಾಷೆಗೆ ಇರುವ ಬೇರೆ ಬೇರೆ ಹೆಸರುಗಳನ್ನು ತಿಳಿಯದೆ ಅವನ್ನೆಲ್ಲ ಬೇರೆ ಬೇರೆ ಭಾಷೆಗಳೆಂದೇ ವರ್ಗೀಕರಿಸಿದ್ದಾರೆ. ಎಷ್ಟೋ ಭಾಷೆ ಮತ್ತು ಉಪಭಾಷೆಗಳನ್ನು ಆಡುವವರ ಸಂಖ್ಯೆ ಕೇವಲ ಒಂದು ಅಥವಾ ಎರಡು ಎಂಬುದಾಗಿ ತಿಳಿಸಿರುವುದುಂಟು. ಅನೇಕ ಗುಡ್ಡಗಾಡಿನ ಜನರ ಭಾಷೆಗಳನ್ನು ಇನ್ನೂ ಗುರುತಿಸಬೇಕಾಗಿದೆ.

೨. ಭಾರತದಲ್ಲಿನ ಆಡಳಿತ ಭಾಷೆಗಳ ವಿವರ ಹೀಗಿರುತ್ತದೆ.

ಕ್ರಸಂ.	ರಾಜ್ಯ	ಆಡಳಿತ ಭಾಷೆ
೧.	ಆಂಧ್ರ ಪ್ರದೇಶ	ತೆಲುಗು, ಉರ್ದು
೨.	ಅರುಣಾಚಲ ಪ್ರದೇಶ	ಇಂಗ್ಲೀಷ್, ಹಿಂದಿ
೩.	ಅಸ್ಸಾಂ	ಅಸೋಮಿಯ/ಅಸ್ಸಾಮಿಸ್, ಬೋಡೋ, ಬೆಂಗಾಲಿ, ಕರ್ಬಿ
೪.	ಬಿಹಾರ್	ಹಿಂದಿ, ಉರ್ದು, ಭೋಜ್ಪುರಿ, ಮಗಧಿ,ಮೈಥಿಲಿ
೫.	ಛತ್ತೀಸ್‌ಗಢ	ಹಿಂದಿ, ಛತ್ತೀಸ್‌ಗರಿ
೬.	ಗೋವಾ	ಕೊಂಕಣಿ, ಮರಾಠಿ, ಪೋರ್ಚುಗೀಸ್, ಇಂಗ್ಲೀಷ್
೭.	ಗುಜರಾತ್	ಗುಜರಾತಿ, ಹಿಂದಿ, ಉರ್ದು
೮.	ಹರಿಯಾಣ	ಹಿಂದಿ, ಪಂಜಾಬಿ
೯.	ಹಿಮಾಚಲ್ ಪ್ರದೇಶ್	ಹಿಂದಿ, ಪಹಾಡಿ
೧೦.	ಜಮ್ಮು ಮತ್ತು ಕಾಶ್ಮೀರ	ಡೋಗ್ರಿ, ಕಾಶ್ಮಿರಿ, ಉರ್ದು
೧೧.	ಜಾರ್ಖಂಡ್	ಹಿಂದಿ
೧೨.	ಕರ್ನಾಟಕ	ಕನ್ನಡ
೧೩.	ಕೇರಳ	ಮಲಯಾಳಂ
೧೪.	ಮಧ್ಯಪ್ರದೇಶ	ಹಿಂದಿ
೧೫.	ಮಹಾರಾಷ್ಟ್ರ	ಮರಾಠಿ, ಕೊಂಕಣಿ
೧೬.	ಮಣಿಪುರ	ಮೈತೈ
೧೭.	ಮೇಘಾಲಯ	ಖಾಸಿ, ಗರೊ, ಇಂಗ್ಲೀಷ್
೧೮.	ಮಿಝೋರಾಂ	ಮಿಝೊ, ಇಂಗ್ಲೀಷ್
೧೯.	ನಾಗಾಲ್ಯಾಂಡ್	ಇಂಗ್ಲೀಷ್
೨೦.	ಒರಿಸ್ಸಾ	ಒರಿಯಾ
೨೧.	ಪಂಜಾಬ್	ಪಂಜಾಬಿ
೨೨.	ರಾಜಾಸ್ಥಾನ್	ಹಿಂದಿ, ರಾಜಾಸ್ಥನಿ
೨೩.	ಸಿಕ್ಕಿಂ	ನೇಪಾಲಿ
೨೪.	ತಮಿಳುನಾಡು	ತಮಿಳು
೨೫.	ತ್ರಿಪುರಾ	ಬೆಂಗಾಲಿ, ಕೊಕ್ಬೊರೊಕ್
೨೬.	ಉತ್ತರಾಖಂಡ್	ಹಿಂದಿ
೨೭.	ಉತ್ತರ ಪ್ರದೇಶ	ಹಿಂದಿ, ಉರ್ದು
೨೮.	ಪಶ್ಚಿಮ ಬಂಗಾಳ	ಬೆಂಗಾಲಿ
೨೯.	ದೆಹಲಿ	ಹಿಂದಿ, ಇಂಗ್ಲೀಷ್, ಉರ್ದು, ಪಂಜಾಬಿ

೩. ಕೇಂದ್ರಾಡಳಿತ ಪ್ರದೇಶಗಳು

ಕ್ರಸಂ.	ಕೇಂದ್ರಾಡಳಿತ ಪ್ರದೇಶಗಳು	ಆಡಳಿತ ಭಾಷೆ
೧.	ಅಂಡಮಾನ್ ಮತ್ತು ನಿಕೋಬರಿಸ್, ನಿಕೋಬಾರ್ ಐಸ್‌ಲ್ಯಾಂಡ್ಸ್	ಬೆಂಗಾಲಿ, ಇಂಗ್ಲೀಷ್, ಹಿಂದಿ ಮಲಯಾಳಂ, ಪಂಜಾಬಿ, ತಮಿಳು, ತೆಲುಗು
೨.	ಚಂಡಿಗಢ	ಪಂಜಾಬಿ, ಹಿಂದಿ
೩.	ದಾದ್ರಾ ಮತ್ತು ನಗಾರ್ ಹವೇಲಿ	ಗುಜರಾತಿ
೪.	ದಾಮನ್ ಮತ್ತು ಡಯು	ಗುಜರಾತಿ, ಇಂಗ್ಲೀಷ್
೫.	ಲಕ್ಷದ್ವೀಪ್	ಮಲಯಾಳಂ
೬.	ಪಾಂಡಿಚರಿ	ತಮಿಳು, ಫ್ರೆಂಚ್

೪. ಭಾರತದಲ್ಲಿನ ಪ್ರಮುಖ ಭಾಷೆಗಳ ವಿವರ ಹೀಗಿರುತ್ತದೆ

ರಾಜ್ಯ	ಭಾಷೆಗಳು
ಆಂಧ್ರಪ್ರದೇಶ	ತೆಲುಗು ಮತ್ತು ಉರ್ದು
ಅರುಣಾಚಲ್ ಪ್ರದೇಶ	ಮಿಜಿ, ಅಪೊಟಂಜಿ, ಮೆರ್ದುಕಪೆನ್, ತಗಿನ್, ಆದಿ, ಹೊನ್ಸ, ಬಂಗಿನಿ–ನಿಶಿ
ಅಸ್ಸಾಂ	ಅಸ್ಸಾಮಿ
ಬಿಹಾರ್	ಹಿಂದಿ
ಛತ್ತೀಸ್‌ಗಢ	ಹಿಂದಿ
ಗೋವಾ	ಮರಾಠಿ ಮತ್ತು ಕೊಂಕಣಿ
ಗುಜರಾತ್	ಗುಜರಾತಿ
ಹರಿಯಾಣ	ಹಿಂದಿ
ಹಿಮಾಚಲ್ ಪ್ರದೇಶ್	ಹಿಂದಿ ಮತ್ತು ಪಹಾಡಿ
ಮಿಝೋರಾಂ	ಮಿಜೋ ಮತ್ತು ಇಂಗ್ಲೀಷ್
ಜಮ್ಮು ಮತ್ತು ಕಾಶ್ಮೀರ	ಕಶ್ಮೀರಿ, ಡೋಗ್ರಿ, ಉರ್ದು, ಲಡಾಖಿ, ಪಹಾಡಿ, ಪಂಜಾಬಿ ಮತ್ತು ಬದ್ರಿ
ಜಾರ್ಖಂಡ್	ಹಿಂದಿ
ಕರ್ನಾಟಕ	ಕನ್ನಡ
ಕೇರಳ	ಮಲೆಯಾಳಂ

ಮಧ್ಯಪ್ರದೇಶ್	ಹಿಂದಿ
ಮಹಾರಾಷ್ಟ್ರ	ಮರಾಠಿ
ಮಣಿಪುರ	ಮಣಿಪುರಿ
ಮೇಘಾಲಯ	ಖಾಸಿ, ಜೈಂಟ ಮತ್ತು ಗರೊ
ನಾಗಾಲ್ಯಾಂಡ್	ಅಒ. ಕೊನ್ಯಕ್, ಅಂಗಾಮಿ, ಸೆಮ ಮತ್ತು ಲೊಥ
ಒರಿಸ್ಸಾ	ಒರಿಯಾ
ಪಂಜಾಬ್	ಪಂಜಾಬಿ
ರಾಜಾಸ್ಥಾನ್	ರಾಜಸ್ಥಾನಿ ಮತ್ತು ಹಿಂದಿ
ಸಿಕ್ಕಿಂ	ಭೂತ್ಯ, ಹಿಂದಿ, ನೇಪಾಲಿ ಲೆಪ್ಚಾ, ಲಿಂಬು,
ತಮಿಳುನಾಡು	ತಮಿಳು
ತ್ರಿಪುರಾ	ಬೆಂಗಾಲಿ, ತ್ರಿಪುರಿ, ಮಣಿಪುರಿ, ಕಾಕ್‌ಬೊರಾಕ್
ಉತ್ತರ ಪ್ರದೇಶ	ಹಿಂದಿ
ಉತ್ತರಾಖಂಡ್	ಹಿಂದಿ
ಪಶ್ಚಿಮ ಬಂಗಾಳ	ಬೆಂಗಾಲಿ

ವಿಶ್ವದಾದ್ಯಂತ ಅನೂಚಾನವಾಗಿ ಕೆಲ ಭಾಷೆಗಳು ನಶಿಸಿಹೋಗುತ್ತಿರುತ್ತವೆ. ಸದ್ಯದಲ್ಲಿ ೮೩ ದೇಶಗಳಲ್ಲಿನ ೭೭೦ ಭಾಷೆಗಳು ಅಪಾಯದಲ್ಲಿರುವ ಭಾಷೆಗಳು ಎಂದು ಹೇಳಲಾಗುತ್ತಿದೆ. ಅಪಾಯದಲ್ಲಿರುವ ಭಾಷೆಗಳು ಎಂದರೆ ನಶಿಸಿ ಹೋಗುವ ಹಾದಿಯಲ್ಲಿರುವ ಭಾಷೆ ಎಂದು ಕರೆಯಬಹುದು.

ಪೋಷಕರು ತಮ್ಮ ಮಕ್ಕಳಿಗೆ ಅವರ ಮಾತೃ ಭಾಷೆಯನ್ನು ಹೇಳಿ ಕೊಡದಿದ್ದಾಗ ಹಾಗೂ ಅವರು ತಮ್ಮ ದೈನಂದಿನ ಜೀವನದಲ್ಲಿ ತಮ್ಮ ಭಾಷೆಯನ್ನು ಬಳಕೆ ಮಾಡದಿದ್ದಾಗ ಅಂತಹ ಭಾಷೆಯನ್ನು ಅಪಾಯದ ಅಂಚಿನಲ್ಲಿರುವ ಭಾಷೆ ಎಂದು ಪರಿಗಣಿಸಲಾಗುತ್ತಿದೆ. ಒಂದು ಭಾಷೆಯ ಬಳಕೆಯನ್ನು ಕೆಲವೇ ಜನ ವೃದ್ಧರು ಬಳಸುತ್ತಿದ್ದಲ್ಲಿ, ಅಂತಹ ಭಾಷೆಯನ್ನು ಅಳಿದುಹೋಗುತ್ತಿರುವ ಭಾಷೆಯೆಂದು ಪರಿಗಣಿಸಲಾಗುತ್ತದೆ.

ಒಂದು ಭಾಷೆಯು ಅಪಾಯದ ಹಂತಕ್ಕೆ ತಲುಪಲು ಈ ಕೆಳಕಂಡ ಅಂಶಗಳು ಕಾರಣವಾಗಿರಬಹುದು:

೧. ಭಾಷೆಯ ಬಳಕೆಯನ್ನು ಸಣ್ಣ ಸಂಖ್ಯೆಯ ಜನರು ಮಾತ್ರ ಮಾಡುತ್ತಿರುವುದು ಹಾಗೂ ಅವರ ಈಗಿನ ಸರಾಸರಿ ವಯಸ್ಸು.

೨. ಆ ಸಮುದಾಯದ ಮಕ್ಕಳು ಆ ಭಾಷೆಯನ್ನು ಬಳಸುತ್ತಿಲ್ಲದಿದ್ದಲ್ಲಿ

೩. ಇತರ ಭಾಷೆಗಳ ಬಳಕೆಯ ಪರಿಣಾಮ

೪. ತಮ್ಮ ಭಾಷೆಯ ಬಗ್ಗೆ ಅಭಿಮಾನ ಶೂನ್ಯತೆ.

೫. ಯುವ ಪೀಳಿಗೆಯು ನಗರಗಳತ್ತ ವಾಲುತ್ತಿರುವುದು.
೬. ಸರಕಾರದ ಭಾಷಾ ನೀತಿಗಳು
೭. ಶಿಕ್ಷಣ ಕ್ಷೇತ್ರದಲ್ಲಿ ಬಳಸುವ ಭಾಷೆಗಳು
೮. ಭಾಷೆಯ ಕಲಿಕೆಯಿಂದ ದೊರಕಬಹುದಾದ ನೌಕರಿಗಳು
೯. ಭಾಷೆಗೆ ಲಿಪಿಯಿದೆಯೇ ಇಲ್ಲವೋ
೧೦. ಭಾಷೆಯಲ್ಲಿರುವ ಸಾಹಿತ್ಯ ಸಂಪದ
೧೧. ಭಾಷೆಯ ಬಳಕೆಗೆ ಇರುವ ಪ್ರತಿಷ್ಠೆ
೧೨. ಭಾಷೆಯ ಬಳಕೆಗೆ ಇರುವ ಜನ ಬೆಂಬಲ
೧೩. ಒಂದು ಭಾಷೆಯ ಜನರು ಬೇರೆ ಭಾಷೆಗಳು ಹೆಚ್ಚು ಬಳಕೆಯಲ್ಲಿರುವ ಪ್ರದೇಶಕ್ಕೆ ವಲಸೆ ಹೋದಾಗ
೧೪. ಸರಕಾರವು ಬೇರೊಂದು ಭಾಷೆಯನ್ನು ಶಾಲಾ/ಕಾಲೇಜು ಮಟ್ಟಗಳಲ್ಲಿ, ಸರಕಾರಿ ಕಚೇರಿಗಳಲ್ಲಿ, ಮಾಧ್ಯಮಗಳಲ್ಲಿ ಬಳಸುವಂತೆ ಸಕ್ರಿಯವಾಗಿ ಬೆಂಬಲಿಸುತ್ತಿದ್ದಾಗ
೧೫. ಸಾಮಾಜಿಕ ಆರ್ಥಿಕ ಕಾರಣಗಳಿಂದ ಪೋಷಕರು ತಮ್ಮ ಮಕ್ಕಳಿಗೆ ಹೆಚ್ಚು ಮಾನ್ಯತೆ ಪಡೆದಿರುವ ಭಾಷೆಗಳನ್ನು ಹೇಳಿಕೊಡುವ ಪದ್ಧತಿಗಳಿದ್ದಾಗ ಪ್ರಪಂಚದಲ್ಲಿ ಅತಿ ಕಡಿಮೆ ಬಳಕೆಯಲ್ಲಿರುವ ಭಾಷೆಗಳ ವಿವರಗಳೂ ಹೀಗಿವೆ.

ಜನಸಂಖ್ಯೆ	ಭಾಷೆಗಳ ಸಂಖ್ಯೆ	ಭಾಷೆಗಳನ್ನು ಬಳಸುವ ಒಟ್ಟು ಜನಸಂಖ್ಯೆ
೧೦೦-೯೯೯	೧೦೭೧	೪೫೭ ಲಕ್ಷ
೧೦-೯೯	೩೪೪	೧೩೧೬೩
೧-೦೯	೨೦೪	೬೯೮
ಒಟ್ಟು	೧೬೧೯	೪೭೦

೨೦ ವರ್ಷಗಳ ಕೆಳಗೆ ಅಲಾಸ್ಕಾದ ಯೂಪಿಕ್ ಸಮುದಾಯದವರು ಯೂಪಿಕ್ ಭಾಷೆಯಲ್ಲಿ ಮಾತನಾಡುತ್ತಿದ್ದರು. ಆದರೆ ಈಗ ಆ ಭಾಷೆಯನ್ನು ಬಳಸುವವರೆಲ್ಲರೂ ೨೦ ವರ್ಷ ವಯಸ್ಸನ್ನು ಮೀರಿರುತ್ತಾರೆ. ನ್ಯೂಯಾರ್ಕ್ ರಾಜ್ಯದ ಮಾಹ್ವಾಕ್ ಮತ್ತು ಓನೋನ್‌ಡಾಗ ಭಾಷೆಗಳು ಬಳಕೆಯಲ್ಲಿದ್ದರೂ ಆ ಸಮುದಾಯದ ವೃದ್ಧರು ಮಾತ್ರ ಬಳಸುತ್ತಾರೆ. ಎಷ್ಟೋ ಭಾಷೆಗಳನ್ನು ಆಯಾ ಸಮುದಾಯದ ಒಬ್ಬರೋ ಇಬ್ಬರೋ ವೃದ್ಧರು ಮಾತ್ರ ಬಳಸುತ್ತಿರುತ್ತಾರೆ. ಸಂಸ್ಕೃತಿಯನ್ನು ವಿಸ್ತರಿಸಲು ಭಾಷೆಯು ಒಂದು ಅತ್ಯಂತ ದಕ್ಷ ಸಾಧನವಾಗಿರುತ್ತದೆ. ಒಂದು ಭಾಷೆಯು ಅವಸಾನಗೊಂಡರೆ ಆ ಭಾಷೆಯು ಪ್ರತಿನಿಧಿಸುವ ಸಂಸ್ಕೃತಿಯು ನಷ್ಟಗೊಳ್ಳುತ್ತದೆ. ಏಕೆಂದರೆ ಬಹುತೇಕವಾಗಿ ಎಲ್ಲ ಜನರೂ ತಮ್ಮ ಸಂಸ್ಕೃತಿಯನ್ನು ಭಾಷೆಯ ಜೊತೆಗೆ ಗುರುತಿಸಿಕೊಳ್ಳುತ್ತಾರೆ.

ಒಂದು ಭಾಷೆಯ ಬಳಕೆಯಿಂದ ಅಳಿಸಿಹೋಗುವ ಮುನ್ನ ತಜ್ಞರು ಆ ಭಾಷೆಯನ್ನು ದಾಖಲಿಸಿ ವಿಶ್ಲೇಷಣೆ ಮಾಡಬೇಕಾಗುತ್ತದೆ. ಅಳಿಸಿಹೋಗುವ ಮಟ್ಟಕ್ಕೆ ತಲುಪಿರುವ ಬಹುತೇಕ ಭಾಷೆಗಳಿಗೆ ಲಿಪಿಯೇ ಇಲ್ಲದಿರುವುದರಿಂದ ಒಂದು ಭಾಷೆಯು ಅಳಿಸಿ ಹೋಯಿತೆಂದರೆ ಆ ಭಾಷೆಯಲ್ಲಿ ಅಡಗಿರುವ ಸಾಂಸ್ಕೃತಿಕ, ಇತಿಹಾಸ, ಪರಿಸರ ಹಾಗೂ ವೈದ್ಯಕೀಯ ಮೂಲಿಕೆಗಳು ಇತ್ಯಾದಿಗಳ ಬಗ್ಗೆ ಮಾತನಾಡುವ ವ್ಯಕ್ತಿಗಳು ಹೊಂದಿರಬಹುದಾದ ಅಪಾರ ಜ್ಞಾನಸಂಪತ್ತು ಸದಾಕಾಲಕ್ಕೂ ನಷ್ಟವಾಗುತ್ತದೆ. ಹೀಗಾಗಿ ಭಾಷೆಯನ್ನು ಉಳಿಸಲಾಗದಿದ್ದರೂ ಆ ಭಾಷೆಯ ಬಗ್ಗೆ ದಾಖಲೆಗಳನ್ನು ಕಾಪಾಡಿಕೊಂಡಿದ್ದಲ್ಲಿ, ಭವಿಷ್ಯದಲ್ಲಿ ಮುಂದಿನ ಪೀಳಿಗೆಯವರು ಅಧ್ಯಯನ ಮಾಡಬಹುದು ಹಾಗೂ ಭಾಷೆಗೆ ಪನರ್ಜೀವ ನೀಡಬಹುದು.

ಭಾಷೆಯನ್ನು ಉಳಿಸಿಕೊಳ್ಳುವುದು ಹಾಗೂ ಪುನರ್ಜೀವ ನೀಡುವುದು ಕಷ್ಟ ಸಾಧ್ಯವೇ. ಹೀಗೆ ಹಲವಾರು ಭಾಷೆಗಳು ಪೂರ್ಣವಾಗಿ ನಶಿಸಿಹೋಗದ್ದರೂ ಹಲವಾರು ಭಾಷೆಗಳನ್ನು ಮರು ಬಳಕೆಗೆ ಕರೆತರಲಾಗಿದೆ. ಉದಾಹರಣೆಗಳ ನಡುವೆ ಮುಖ್ಯವಾದವುಗಳೆಂದರೆ:

ಹವಾಯಿನ್ : ೧೮೯೮ ರಲ್ಲಿ ಅಮೇರಿಕಾ ದೇಶವು ಹವಾಯಿ ದ್ವೀಪಗಳನ್ನು ಸೇರಿಸಿಕೊಂಡ ನಂತರ ಹವಾಯಿ ಭಾಷೆಯನ್ನು ಶಾಲೆಗಳಲ್ಲಿ ಬೋಧಿಸಬಾರದೆಂದು ಸೂಚನೆಯನ್ನು ನೀಡಿತ್ತು. ಇಂದು ಸುಮಾರು ೧೦೦೦೦ ಹವಾಯಿನ್ ಜನರು ತಮ್ಮ ಮಾತೃ ಭಾಷೆಯನ್ನು ಬಲ್ಲವರಾಗಿದ್ದಾರೆ.

ಹಿಬ್ರೂ: ಇಸ್ರೇಲಿನ ಹೀಬ್ರೂ ಭಾಷೆಗ ಸುದೀರ್ಘ ಇತಿಹಾಸವಿದೆ. ಈ ಭಾಷೆಯನ್ನು ದೇವ ಭಾಷೆ ಎಂದು ಪರಿಗಣಿಸಿ ಯಾರೂ ಕಲಿಯುವ ಗೋಜಿಗೆ ಹೋಗುತ್ತಿರಲಿಲ್ಲ. ಹೀಬ್ರೂ ಮಾತೃ ಭಾಷೆಯನ್ನು ಹೊಂದಿದ್ದ ಒಬ್ಬ ಮನುಷ್ಯರೂ ಇಲ್ಲದಿದ್ದ ಪರಿಸ್ಥಿತಿ ಒಮ್ಮೆ ಇತ್ತು. ಹೀಬ್ರೂ ಭಾಷೆಯಿಂದಲೇ ಮುಂದೆ ಇಸ್ರೇಲಿಗರು ಸಂಘಟಿತರಾಗಿ ದೇಶ ಕಟ್ಟಿದರು. ಇಂದು ೫ ಮಿಲಿಯ ಜನರು ಹಿಬ್ರೂ ಭಾಷೆಯನ್ನು ಬಲ್ಲವರಾಗಿದ್ದಾರೆ.

ಐರ್ಲೆಂಡ್‌ನ ಜನರು ತಮ್ಮ ದೇಶದ ಭಾಷೆಯನ್ನು ಹೆಚ್ಚು ಹೆಚ್ಚು ಪ್ರಚಾರ ಮಾಡಿ ಇಂದು ಜನ ಸಂಖ್ಯೆಯ ಶೇ. ೧೩ ರಷ್ಟು ಜನರು ಐರಿಶ್ ಭಾಷೆಯನ್ನು ಬಳಸುತ್ತಿದ್ದಾರೆ.

ಗಂಡಾಂತರವಿರುವ ಭಾಷೆಗಳ ಸಂಖ್ಯೆಗೆ ಅನುಗುಣವಾಗಿ ದೇಶಗಳನ್ನು ವಿಂಗಡಿಸಿದಾಗ ಹೀಗೆ ಕಾಣುತ್ತದೆ.

ಗಂಡಾಂತರದಲ್ಲಿರುವ ಭಾಷೆಗಳು	ದೇಶಗಳು
೧-೫	೫೮
೬-೧೦	೮
೧೧-೫೦	೧೪
೫೧-೧೦೦	೨
>೧೦೦	೧
ಒಟ್ಟು	**೮೩**

ಆಸ್ಟ್ರೇಲಿಯಾ ದೇಶದಲ್ಲಿ ೧೭೯ ಭಾಷೆಗಳು ಗಂಡಾಂತದಲ್ಲಿದ್ದು ಅದು ಮೊದಲನೆಯ ಸ್ಥಾನದಲ್ಲಿರುತ್ತದೆ. ಅಲ್ಲಿ ಇವಲ್ಲದೇ ೨೨೬ ಜೀವಂತ ಭಾಷೆಗಳೂ ಬಳಕೆಯಲ್ಲಿವೆ. ಅಮೇರಿಕಾ ದೇಶದಲ್ಲಿ ೯೩ ಭಾಷೆಗಳು ಗಂಡಾಂತರದಲ್ಲಿದ್ದು ೧೬೫ ಜೀವಂತ ಭಾಷೆಗಳು ಬಳಕೆಯಲ್ಲಿವೆ.

೫. ಭಾರತದಲ್ಲಿ ೧೫ ಭಾಷೆಗಳು ವಿನಾಶದ ಅಂಚಿನಲ್ಲಿವೆ. ಅವುಗಳ ವಿವರಗಳು ಇಂತಿವೆ.

೧. ಅಹೋ
೨. ಅಕಾಬೇ
೩. ಅಕಾ-ಬೋ
೪. ಅಕಾ-ಕಾರಿ
೫. ಅಕಾ-ಬೆರು
೬. ಅಕಾ-ಕೆದೆ
೭. ಅಕಾ-ಕೋಲ್
೮. ಅಕಾ-ಕೋಲಾ
೯. ಅಕರ ಬಲೆ
೧೦. ಅಕರ ಪುಕವಾರ
೧೧. ಇಂಡೋ ಪೋರ್ಚುಗೀಸ್
೧೨. ಶಮಯಾಂಗ್
೧೩. ಓಕೊಜವಾಯಿ
೧೪. ಪಾಲಿ
೧೫. ತುರುಂಗ್

ಮೇಲ್ಕಂಡ ಭಾಷೆಗಳನ್ನು ರಕ್ಷಿಸುವಲ್ಲಿ ಏನು ಪ್ರಯತ್ನಗಳು ನಡೆಯುತ್ತಿವೆ ಎಂಬುದರ ಬಗ್ಗೆ ಹೆಚ್ಚಿನ ಮಾಹಿತಿಗಳು ಲಭ್ಯವಿಲ್ಲ.

ಭಾಷೆ ಮರುಭೂಮಿಯ ಮಹತ್ಕೃತಿ. ಮೃಗಕ್ಕೂ ಮಾನವನಿಗೂ ಇರುವ ವ್ಯತ್ಯಾಸಗಳಲ್ಲಿ ಭಾಷೆಯೇ ಪ್ರಮುಖವಾದುದು. ಭಾಷೆ ಸಂಸ್ಕೃತಿಯ ಸಾಧನ ಸಾಮಗ್ರಿ. ಭಾಷೆಯಿಂದಲೇ ಮಾನವ ಸಮಾಜ ಸಂಸ್ಕೃತಿ ಅರಳಿ ವಿಕಾಶಗೊಂಡಿದೆ. ನಮ್ಮ ಪರಸ್ಪರ ವ್ಯವಹಾರಕ್ಕೆ ಭಾಷೆ ಪ್ರಮುಖ ಸಾಧನ. ಮಾನವ ಮನಸ್ಸನ್ನು ಅರಳಿಸುವ, ಮುದುಡಿಸುವ ಕ್ರಿಯಾಶೀಲವಾಗುವಂತೆ ಮಾಡುವ ಶಕ್ತಿ ಭಾಷೆಗುಂಟು. ಆದ್ದರಿಂದ ಇಂದಿನ ನಾಗರಿಕ ಬದುಕಿನಲ್ಲಿ ಭಾಷೆ ಅಗತ್ಯವೂ ಅನಿವಾರ್ಯವೂ ಆಗಿದೆ.

ಜಾಗತೀಕರಣದ ಹಿನ್ನೆಲೆಯಲ್ಲಿ ಪ್ರಪಂಚವೇ ಒಂದು ಹಳ್ಳಿಯಾಗುವ ಹಂತದಲ್ಲಿದ್ದು ಪ್ರಮುಖ ವಾಣಿಜ್ಯ ಭಾಷೆಗಳನ್ನು ಹೊರತುಪಡಿಸಿ ಇತರ ಭಾಷೆಗಳಿಗೆ ಭವಿಷ್ಯವೇ ಇಲ್ಲ ಎಂದು ಹೇಳಿರುವವರೂ ಇದ್ದಾರೆ. ಅಂತರ್ಜಾಲವು ಸರ್ವಾಂತರ್ಯಾಮಿಯಾಗಿದ್ದು ಪ್ರಮುಖ ವಾಣಿಜ್ಯ ಭಾಷೆಯಾದ ಇಂಗ್ಲೀಷನ್ನು ತಕ್ಕಮಟ್ಟಿಗೆ ಅರಿತಿದ್ದರೆ ಬೇರೆ ಯಾವುದೇ ಭಾಷೆಯ ಅಗತ್ಯವೇ ಬೀಳುವುದಿಲ್ಲ ಎಂದು ನಂಬಿಕೊಂಡಿರುವವರೂ ಅಪಾರ ಸಂಖ್ಯೆಯಲ್ಲಿದ್ದಾರೆ. ಆದರೆ ಅಂತರ್ಜಾಲದಲ್ಲಿಯೂ ಭಾಷಾವಾರು ಸ್ಪರ್ಧಾತ್ಮಕ ಚಟುವಟಿಕೆಗಳು ನಡೆಯುತ್ತಲಿವೆ. ಹೀಗಾಗಿ ಭಾಷೆಗಳ ಮಹತ್ವ ನಮ್ಮ ಜೀವಮಾನದಲ್ಲಿಯಂತೂ ಕಡಿಮೆಯಾಗುವುದಿಲ್ಲ ಎಂಬುದರಲ್ಲಿ ಸಂದೇಹವಿಲ್ಲ.

೭. ಅಯ್ದನೆಯ ನೂರ್ಮಾನದ ಕಲ್ನಾಟ್ಟಿನ ಕನ್ನಡದಾಗ ಕಾರಕ ಸಂಬಂಧವೂ ಕಾರಕ ಸಂಬಂದದ ಒಟ್ಟುಗಳೂ

• ಪ್ರೊ. ಬಸವರಾಜ ಕೋಡಗುಂಟಿ

ಕನ್ನಡ ದ್ರಾವಿಡ ಮಾತುಗಳ ಮನೆತನದ ಒಂದು ಸದಸ್ಯ. ದ್ರಾವಿಡದಾಗ ವಾಕ್ಯ ಸಂಬಂದವನ್ನು ಹೇಳುವುದಕ್ಕೆ ಮೊದಮೊದಲ ಹಂತದಾಗ ಬೇರೆ ರೂಪಗಳು ಇರಲಿಲ್ಲ ಎಂಬುದು ತಿಳುವಳಿಕೆಗೆ ಎಟುಕಿದೆ. ಮೊದಮೊದಲು ಸ್ವತಂತ್ರ ಆಕ್ರುತಿಮಾ ರೂಪಗಳು ಹೀಗೆ ಸಂಬಂಧಗಳನ್ನು ಹೇಳಲು ಬಳಕೆಯಾಗತೊಡಗಿದವು, ಇವುಗಳೆ ಮುಂದೆ ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಂಡು ಒಟ್ಟುಗಳಾಗಿ ಬೆಳೆದವು ಎಂಬುದನ್ನೂ ತಿಳಿದುಕೊಂಡಿದ್ದೇವೆ.

ಈ ಎಲ್ಲ ಅಂಶಗಳನ್ನು ತಿಳಿದುಕೊಳ್ಳುವಲ್ಲಿ ದ್ರಾವಿಡ ಮನೆತನದ ಹಳೆಯ ಕಾಲದ ಬರವಣಿಗೆಯನ್ನು ಹೊಂದಿರುವ ಕನ್ನಡ, ತಮಿಳು ಇಂತಹಾ ಕೆಲವು ಮಾತುಗಳು ಹೆಚ್ಚು ಪೂರಕವಾಗಿವೆ. ಹಳೆಯ ಕಾಲದ ಮಾಹಿತಿಯನ್ನು ಇಟ್ಟುಕೊಂಡು ಇಂತಹಾ ಮಹತ್ವದ ನಿರ್ದಾರಗಳಿಗೆ ಬರಲು ಸಾದ್ಯವಾಗಿದೆ.

ಹಾಗಾದರೆ ಕನ್ನಡದ ಇದುವರೆಗಿನ ದೊರೆತ ತುಂಬಾ ಹಳೆಯ ದಾಖಲೆಗಳನ್ನು ಇಟ್ಟುಕೊಂಡು ಈ ಎಲ್ಲ ಅಂಶಗಳನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಬಹುದು.

ಇಲ್ಲಿ ಆಯ್ದನೆಯ ನೂರ್ಮಾನದಾಗ ಬರೆದಿರಬಹುದೆಂದು ಎಣಿಸಿರುವ ಕನ್ನಡ ಕಲ್ನಾಟ್ಟುಗಳನ್ನು ಮಾತ್ರ ಆಕರಕ್ಕಾಗಿ ಇಟ್ಟುಕೊಳ್ಳಲಾಗಿದೆ. ಇದರಾಗ ಇದುವರೆಗೆ ಹೆಚ್ಚು ಮಂದಿ ಅರಿಗರು ಒಪ್ಪಿಕೊಂಡಿರುವ ಕಲ್ಬರಹಗಳನ್ನು ಮಾತ್ರ ಪರಿಗಣಿಸಲಾಗಿದೆ. ಇನ್ನೂ ವಾದದ ಕೊಂಡಿಯೊಂದಿಗಿರುವವುಗಳನ್ನು ಇಲ್ಲಿ ತೆಗೆದುಕೊಂಡಿಲ್ಲ.

ಕನ್ನಡ – ದ್ರಾವಿಡ ಮಾತುಗಳಾಗ ವಾಕ್ಯ ಸಂಬಂದ ಬೆಳೆದುಬಂದಿರುವ ಬಗೆಗೆ ಇಲ್ಲಿ ಒಂದೆರಡು ಮಾತನ್ನಾಡಬಹುದು. ಇದುವರೆಗಿನ ವಾಕ್ಯ ಸಂಬಂದಗಳ ವಿವರಣೆ ಈ ನಿಟ್ಟಿನಲ್ಲಿ ಹೆಚ್ಚು ಸಹಾಯಕಾರಿಯಾಗಿರಲಿಲ್ಲ, ಅಲ್ಲದೆ ಅದು ವಯಿಗ್ನಾನಿಕ ವಾದುದೂ ಆಗಿರಲಿಲ್ಲ. ಆದರೆ ಈ ನಿಟ್ಟಿನಾಗ ಬಮದ ಹೊಸ ವಿವರಣೆ ಹೆಚ್ಚು ವಯಿಗ್ನಾನಿಕವಾಗಿದೆ. ೧ ಕಾರಕ ಸಂಬಂದಗಳ ಒಟ್ಟುಗಳನ್ನು ಮುಕ್ಯವಾಗಿ

ಆರಯ್ಯುವುದರ ಮೂಲಕ ಮಹತ್ವದ ತೀರ್ಮಾನಗಳಿಗೆ ಬಂದಿರುವ ಅಧ್ಯಯನವು ಹೇಳುವಂತೆ ಮಾತಿನ ಅರಿವು ಮನುಶ್ಯರಿಗೆ ಬರುವ ಹೊತ್ತಿನಲ್ಲಿ ಒಂದೊಂದಾಗಿ ವಾಕ್ಯ ಸಂಬಂದಗಳು ಬೆಳೆದು ಬಂದಿವೆ. ಅವುಗಳ ಬೆಳವಣಿಗೆ ಬಗೆ ಹೀಗಿದೆ.

ಬೆಳವಣಿಗೆ ಕ್ರಮ	ಕಾರಕ ಸಂಬಂಧ
೧	ಮಾಡುಗ
೨	ನೆಲೆ
೩	ಗುರಿ
೪	ಆಗುಗ
೫	ಸಾದನ
೬	ಬಿಡುಗಡೆ

ಈ ಬೆಳವಣಿಗೆಯ ಕ್ರಮವನ್ನು ಈಗಿನ ಬರಿಕೆಯಾಗ ಕಾರಕ ಸಂಬಂದಗಳ ಮತ್ತು ಅವುಗಳ ಒಟ್ಟುಗಳ ವಿವರಣೆಗೆ ಇಟ್ಟುಕೊಳ್ಳಲಾಗಿದೆ.

ಇಲ್ಲಿ ಅಯ್ದನೆಯ ನೂರ್ಮಾನದ ಕನ್ನಡ ಕಲ್ನಾಟುಗಳಲ್ಲಿ ಬಳಕೆಯಾಗಿರುವ ವಿಭಕ್ತಿ ರೂಪಗಳನ್ನು ಇಟ್ಟುಕೊಂಡು ಒಂದು ಅಯ್ತಿಹಾಸಿಕ ಅವಲೋಕನೆಯನ್ನು ಮಾಡ ಬಹುದು. ಅದರೊಂದಿಗೆ ಅವುಗಳಿಂದ ಬಳಕೆಯಾಗಿರುವ ವಾಕ್ಯ ಸಂಬಂದಗಳನ್ನು ಅವಲೋಕಿಸಬಹುದು.

ಮಾಡುಗ ಸಂಬಂದ: ವಾಕ್ಯದಾಗ ಇರುವ ಕೆಲಸದ ಮಾಡುಗವನ್ನು ಹೇಳುವುದೆ ಮಾಡುಗ ಸಂಬಂದ. ಜಗತ್ತಿನ ಬಹುತೇಕ ಮಾತುಗಳಾಗ ಈ ಸಂಬಂದವನ್ನು ನೋಡಬಹುದು. ಸಾಮಾನ್ಯವಾಗಿ ನೆಲೆ, ಗುರಿ ಈ ಮೊದಲಾದ ಮುಕ್ಯ ಸಂಬಂದ ಗಳನ್ನು ಒಂದು ಮಾತಿನಲ್ಲಿ ನೋಡುವುದಾದರೆ ಆ ಮಾತಿನಾಗ ಮಾಡುಗ ಇದೆಯೆಂದು ತಿಳಿಯಬೇಕು. (ಬಟ್ ಮಿರಿಯಮ್. ೨೦೦೬. Theories of Clase. ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಮುದ್ರಣಾಲಯ, ದಿ ಎಡಿನ್‌ಬರ್ಗ್ ಕಟ್ಟಡ, ಕೇಂಬ್ರಿಜ್). ಕನ್ನಡ ದ್ರಾವಿಡದಾಗ ಬೇರೆ ಮುಕ್ಯವೆನ್ನಬಹುದಾದ ವಾಕ್ಯ ಸಂಬಂದಗಳು ಇವೆ ಯೆಂದಾದರೆ, ಅವುಗಳಿಗಿಂತಾ ಮೊದಲು ಮಾಡುಗ ಸಂಬಂದ ಬೆಳೆದಿರಲೇಬೇಕು.

ಮಾಡುಗ ಸಂಬಂದದ ಒಟ್ಟಿಗೆ ಸಂಬಂದಿಸಿದಂತೆ ಒಂದು ಸಾರ್ವತ್ರಿಕ ಅಂಶವೆಂದರೆ ಜಗತ್ತಿನ ಬಹುತೇಕ ಮಾತುಗಳಲ್ಲಿ ಮಾಡುವಾಗ ಸಂಬಂದವನ್ನು ಹೇಳುವುದಕ್ಕೆ ಯಾವುದೆ ರೂಪ ಬಳಕೆಯಾಗುವುದಿಲ್ಲ. ಕನ್ನಡದಲ್ಲಿಯೂ ಇದು ಸಹಜವಾಗಿದೆ. ಆದರೆ ಕೆಲವು ರೂಪಗಳನ್ನು ಮಾಡುಗ ಸಂಬಂದವನ್ನು ಹೇಳುತ್ತಿವೆ ಎಂದು ತಪ್ಪಾಗಿ ಗುರುತಿಸಲಾಗಿತ್ತು. ಆದರೆ ಅವುಗಳು ಹೆಸರ್ಪದಗಳ (ನಾಮಪದಗಳ) ಬಾಗಗಳಾಗಿವೆ ಹೊರತು ಒಟ್ಟುಗಳಲ್ಲ.

ಬಳಕೆ : ಶ್ರೀಮತ್ ಕದಂಬಪನ್ ತ್ಯಾಗ ಸಂಪನ್ನನ್ (ಕ.ಸಂ. ೧)

ಶ್ರೀ ಕದಂಬನು ತ್ಯಾಗ ಸಂಪನ್ನನು

ಇಲ್ಲಿ ಬಳಕೆಯಾಗಿರುವ –ಅನ್ ರೂಪವು ಹೆಸರ್ಪದದ ಬಾಗವಾಗಿದೆ. ಇದನ್ನು ಸ್ಪಶ್ಟ ಪಡಿಸುವ ಇನ್ನೊಂದು ಬಳಕೆಯನ್ನು ಇಲ್ಲಿ ನೋಡಬಹುದು.

ಬಳಕೆ : ಸ್ವಸ್ತಿ ಶ್ರೀ ರವಿವರ್ಮ[ರ್]ನಾಡಾಳೆ (ಕ.ಸಂ.೧)

ಸ್ವಸ್ತಿಶ್ರೀ ರವಿವರ್ಮರು ನಾಡನ್ನಾಳಲು

ಬಳಕೆ ಒಂದರಲ್ಲಿ –ಅನ್ ಇರುವ ಜಾಗದಲ್ಲಿ ಬಳಕೆ ಎರಡರಲ್ಲಿ –ಅರ್ ಇದೆ. –ಅರ್ ಇದು ಗವ್ರವ ಹೇಳುವ ಒರ್ವಚನ ಎಂಬುದು ತಿಳಿದಿದೆ. ಆದ್ದರಿಂದ ಮಾಡುಗ ಸಂಬಂದಕ್ಕೆ ಕನ್ನಡದಲ್ಲಿ – ನಿರ್ದಿಶ್ಟವಾಗಿ ಪೂರ್ವದ ಹಳೆಗನ್ನಡದಲ್ಲಿ ಒಟ್ಟು ಇರಲಿಲ್ಲ.

ಹಾಗಾದರೆ ಮಾಡುಗ ಸಂಬಂದ ಬಳಕೆಯಾಗುತ್ತಿದ್ದಿತೆ ಎಂಬ ಪ್ರಶ್ನೆಯನ್ನು ಇಲ್ಲಿ ಎದುರುಗೊಳ್ಳಬಹುದು.

ಪೂರ್ವದ ಹಳೆಗನ್ನಡದಾಗ ಮಾಡುಗ ಸಮಬಂದ ಬಳಕೆಯಲ್ಲಿದ್ದಿತು. ಒಂದು ಕೆಲಸವನ್ನು ಮಾಡುತ್ತಿರುವ ಕದಂಬನೂ ತ್ಯಾಗಸಂಪನ್ನನೂ ಆಗಿರುವವನ ಇರುವಿಕೆ, ರವಿವರ್ಮನ ನಾಡಾಳುವಿಕೆ ಇವು ಸ್ಪಶ್ಟವಾಗಿ ತಿಳಿಯುತ್ತವೆ ಮತ್ತು ಅವುಗಳನ್ನು ಮಾಡುವಂತವರುಗಳ ಬಗೆಗೂ ಕೂಡಾ. ಮಾಡುಗ ಮತ್ತು ಮಾಟಗಳ ನಡುವೆ ಸಂಬಂಧ ಸ್ಪಶ್ಟವಾಗಿ ತಿಳಿಯುತ್ತದೆ. ಹೀಗಾಗಿ ಮಾಡುಗ ಸಂಬಂದದ ಬಳಕೆಯಾಗಿರುವುದು ಸ್ಪಶ್ಟ.

ನೆಲೆ ಸಂಬಂದ: ವಾಕ್ಯದಾಗ ಇರುವ ಕೆಲಸದ ನೆಲೆಯನ್ನು ಹೇಳುವಂತದ್ದೆ ನೆಲೆ ಸಂಬಂದ. ನೆಲೆ ಸಂಬಂದವು ಕನ್ನಡ–ದ್ರಾವಿಡದಾಗ ಮಾಡುಗದ ಬಳಿಕ ಬೆಳೆದು ಬಂದ ಸಂಬಂದವಾಗಿದೆ. ಇದಕ್ಕೆ ಮೊದಮೊದಲು ಸ್ವತಂತ್ರ ಆಕ್ರುತಿಮಾಗಳು ಬಳಕೆಯಾಗುತ್ತಿದ್ದವು. ಇಂದಿಗೂ ಅನೇಕ ಸ್ವತಂತ್ರ ಆಕ್ರುತಿಮಾಗಳು ನೆಲೆಯನ್ನು ಹೇಳುವ ಒಟ್ಟುಗಳಾಗಿ ಬೆಳೆದಿವೆ. ಇಂದು ದೊರೆಯುವ ಹೆಚ್ಚಿನ ಒಟ್ಟು ಮೊದಲು ನೆಲೆಯನ್ನ ಹೇಳಲು ಬಳಕೆಯಾಗಿವೆ. ಅವುಗಳು ಮುಂದೆ ಮಾತಿನಾಗ ಬೇರೆ ಬೇರೆ ಸಂಬಂದಗಳು ಬೆಳೆದಂತೆಲ್ಲ ಅವುಗಳನ್ನು ಹೇಳಲು ಮುಂದೆ ಬಂದಿವೆ. ಈ ಕಾರಣದಿಂದಾಗಿ ನೆಲೆಯನ್ನು ಹೇಳಲು ಹೆಚ್ಚು ರೂಪಗಳು ಬಳಕೆಯಲ್ಲಿವೆ. ಇಂದಿಗೂ ಹೆಚ್ಚು ಪದೋತ್ತರ ರೂಪಗಳು ಬಳಕೆಯಲ್ಲಿವೆ.

ಅಯ್ದನೆಯ ಶತಮಾನದ ಕಲ್ಬರಹಗಳ ಕನ್ನಡವನ್ನು ಗಮನಿಸಿ ನೆಲೆಯನ್ನು ಹೇಳಲು ಬಳಕೆಯಾಗಿರುವ ರೂಪಗಳನ್ನು ಇಲ್ಲಿ ಪಟ್ಟಿ ಮಾಡಿದೆ. –ಅಲ್, –ಅಲಿ, –ಇನ್, ಉಳ್, –ಎ

ಬಳಕೆ : ನರಿದಾವಿ[ಳೆ] ನಾಡುಳ್ ಮೃಗೇಶ (ಕ.ಸಂ.೧)

ನರಿದಾವಿಳೆ ನಾಡಿನಲ್ಲಿ ಮ್ರುಗೇಶ

ದಕ್ಷಿಣಾಪಥ ಬಹುಶತಹವನಾಹವದು[ಳ್] (ಕ.ಸಂ.೧)

ದಕ್ಶಿಣಾಪತ ಬಹುಶತಹವನಾಹವದಲ್ಲಿ

ವೀರಪುರುಷ ಸಮಕ್ಷದೆ (ಕ.ಸಂ. ೧)
ವೀರಪುರುಷರ ಎದುರಿನಲ್ಲಿ
ಭಟ್ಟರ್ಗ್ಗೀಗಟ್ದೆಒಡ್ಡಲಿ ಆ ಪತ್ತೊನ್ದಿ (ಕ.ಸಂ.೧)
ಬಟ್ಟರಿಗೆ ಈ ಗದ್ದೆಯ ಒಡ್ಡಿನಲ್ಲಿ ಆ ಹತ್ತರ ಒಂದು ಬಾಗ
ಕಾಳಗುಜ್ಜನಿಯಾ ಪಡು[ಗಲ್]? (ಕ.ಸಂ.೨)
ಕಾಳೆಗುಜ್ಜೆನಿಯ ಪಶ್ಚಿಮದಾಗ
ಬ್ರಹ್ಮದೇಯ ಕ್ರಮದಾಗ
ಬಿಣದೇಯ ಕ್ರಮದಿನ್ (ಕ.ಸಂ. ೩)
ಬ್ರಹ್ಮಾದೇಯ ಕ್ರಮದಾಗ
ಬಿಣಮಣಿ ಅನ್ತು ಭೋಗಿ ಬಿಣದುಳ್ (ಕ.ಸಂ.೪)
ಬಿಣಮಣಿಯಂತೆ ಬೋಗಿ ತೂಕದಾಗ

ಈ ರೂಪಗಳನ್ನು ಇಲ್ಲಿ ಒಂದಿಷ್ಟು ವಿವರವಾಗಿ ನೋಡಬಹುದು. ***–ಅಲ್, –ಅಲಿ:** ಕನ್ನಡದ ದೂರತೋರುಗ *–ಅ ಇದು *ಆ ಎಂದು ಉದ್ದಕ್ಕರವಾಗಿ ಬೆಳೆದು ಮತ್ತೆ ಹಿಮ್ಮುಕ ಬೆಳವಣಿಗೆಯಲ್ಲಿ ಗಿಡ್ಡಕ್ಕರವಾಗಿ ಬೆಳೆದಿದೆ. ಉದ್ದಕ್ಕರ ರೂಪವಿರುವಾಗಲೆ *–ಆ ಇದಕ್ಕೆ ಬೇರೆ ಪೂರಕ ಒಟ್ಟುಗಳು ಸೇರಿಕೊಂಡು *–ಆಲ್/*–ಆನ್/*–ಆಳ್ ರೂಪಗಳ ಮೂಲ ರೂಪವೊಂದು ಬೆಳೆದಿದೆ. (/ಲ್/,/ನ್/ಮತ್ತು/ಳ್/ ಇವು ಮೂರೂ ಉಲಿಗಳು ಮೂಲ ಉಲಿಯಿಂದ ಬೆಳೆದಿವೆ. ಅದು ಮುಂದೆ ಉಲಿಯೊಡೆತ ಕಾರಣವಾಗಿ ಈಗಿನಂತೆ ಮೂರು ಉಲಿಗಳೊಂದಿಗೆ ಮೂರು ರೂಪಗಳನ್ನು ಪಡೆದುಕೊಂಡಿದೆ. ಇವು ನೆಲೆಯನ್ನು ಹೇಳಲು ಬಳಕೆಯಾಗಿವೆ. ಬೇರೆಡೆಗೆ ಇವುಗಳಿಗೆ ಬಳಕೆಗಳು ಸಿಗುತ್ತವೆ. ಮುಂದೆ ಒಟ್ಟುಗಳ ಮೊದಲುದ್ದಕ್ಕರ ಮೊದಲ್‌ಗಿಡ್ಡಕ್ಕರವಾಗುವ ಪ್ರಕ್ರಿಯೆಯಲ್ಲಿ *–ಆಲ್ ಇದು –ಅಲ್ ಎಂದು ಬೆಳೆದಿದೆ. ಇದುವೆ ಮುಂದೆ ಸ್ವರಕೊನೆಯಾಗಿ ಬೆಳೆಯುವ ಹೊತ್ತಿನಲ್ಲಿ –ಅಲಿ ಎಂದು ಬೆಳೆದಿದೆ. ಇದಲ್ಲದೆ ಇನ್ನೂ ಕೆಲವು ರೂಪಗಳು ಇದರಿಂದ ಬೆಳೆದಿವೆ. ಇವುಗಳು ಬೇರೆ ಕಡೆ ಬಳಕೆಯಾಗಿವೆ.

*–ಇನ್. ಕನ್ನಡದ ಸಮೀಪತೋರುಗ *–ಇ ಇದರ ಬೆಳೆದ ರೂಪವೆ *–ಇನ್. *–ಇ ಇದು ಉದ್ದಕ್ಕರವಾಗಿ ಬೆಳೆದಿರುವ ಅವಕಾಶವಿದೆಯಾದರೂ ಇದನ್ನು ಹೇಳುವುದಕ್ಕೆ ಸದ್ಯಕ್ಕೆ ಕಯ್ಯಾಗ ಬಳಕೆಗಳು ಇಲ್ಲ. ಅದಕ್ಕೆ ಇನ್ನಷ್ಟು ಅವಲೋಕನೆ ಅವಶ್ಯವಿದೆ. *–ಇ ಇದು ಬೆಳೆದು ಅದಕ್ಕೆ ಪೂರಕ ಒಟ್ಟುಗಳು ಸೇರುವುದರ ಮೂಲಕ *–ಇನ್/*–ಇಲ್ ಇವುಗಳು ಬೆಳೆದಿವೆ. *–ಇಳ್ ಎಂಬ ಇನ್ನೊಂದು ರೂಪ ಬೆಳೆದಿರುವ ಅವಕಾಶವಿದೆಯಾದರೂ ಇದುವರೆಗೆ ಅಂತದೊಂದು ರೂಪದ ಬಳಕೆ ಸಿಕ್ಕಿಲ್ಲ. ಆದ್ದರಿಂದ ಸದ್ಯಕ್ಕೆ ಎರಡು ರೂಪಗಳ ಬಗೆಗೆ ಮಾತ್ರ ಮಾತನಾಡಬಹುದು. ಈಗಾಗಲೆ ಹೇಳಿದಂತೆ *–ಇಲ್/*–ಇನ್ ಈ ಎರಡೂ ರೂಪಗಳು ಒಂದೆ ಆಗಿದ್ದ ಮೂಲ ಉಲಿಯ ಒಡೆತದೊಂದಿಗೆ ಬೇರೆಯಾಗಿ ಬೆಳೆದಿವೆ. ಈ ಎರಡೂ ರೂಪಗಳು

ಕನ್ನಡದಾಗ ಬಳಕೆಯಾಗಿವೆ. ಅಯ್ದನೆಯ ನೂರ್ಮಾನದಾಗ *–ಇನ್ ಇದು ನೆಲೆಯನ್ನು ಹೇಳಲು ಬಳಕೆಯಾಗಿದೆ. ಉಳಿದೊಂದು ರೂಪವೂ ಬೇರೆ ಕಡೆ ನೆಲೆಯನ್ನು ಹೇಳಲು ಬಳಕೆಯಾಗಿದೆ.

***–ಉಳ್:** *–ಉ ಇದು ಕನ್ನಡದ ನಡುತೋರುಗ. ಇದು ಉದ್ದಕ್ಕರವಾಗಿ *–ಊ ಎಂದಾಗಿ ಬೆಳೆದಿರುವುದಕ್ಕೆ ಕೆಲವೆಡೆ ಬಳಕೆಗಳು ದೊರೆತಿವೆ. ಮುಂದೆ ಮತ್ತೆ ಉದ್ದಕ್ಕರ ಗಿಡ್ಡಕ್ಕರವಾಗಿ ಬೆಳೆದಿದೆ. *–ಉ ಇದಕ್ಕೆ ಪೂರಕ ಒಟ್ಟು ಸೇರುವುದರೊಂದಿಗೆ ಒಂದು ರೂಪ ಬೆಳೆದಿದೆ. ಮುಂದೆ ಇದುವೆ ಉಲಿ ಒಡೆತ ಕಾರಣವಾಗಿ *–ಉಲ್/*–ಉಳ್/*–ಉನ್ ಎಂದಾಗಿ ಬೆಳೆದಿದೆ. ಅಯ್ದನೆಯ ನೂರ್ಮಾನದ ಕಲ್ಬಾಟ್ಟುಗಳಾಗ *–ಉಳ್ ಇದು ನೆಲೆಯನ್ನು ಹೇಳಲು ಬಳಕೆಯಾಗಿದೆ. ಉಳಿದ ರೂಪಗಳು ಬೇರೆಡೆ ನೆಲೆಯ್ನು ಹೇಳಲು ಬಳಕೆಯಾಗಿವೆ.

***–ಎ:** *–ಎ ಇದು ನೆಲೆಯನ್ನು ಹೇಳಲು ಕನ್ನಡದಲ್ಲಿ ಇಂದಿಗೂ ಬಳಕೆಯಾಗುತ್ತಿರುವ ರೂಪ. ಇದರ ಮೂಲವನ್ನು ಪಶ್ನರೂಪದ ಮೂಲ ರೂಪ *–ಎ ದಲ್ಲಿ ನೋಡಬಹುದು. ಮೂಲ ಕನ್ನಡದ ತೋರುಗ ರೂಪಗಳಾದ *–ಅ. *–ಇ. *–ಉ ಇವುಗಳಂತೆಯೆ ಮೂಲ ಪ್ರಶ್ನ ರೂಪ *–ಎ ಕೂಡ ವಾಕ್ಯ ಸಂಬಂದ ಹೇಳುವುದಕ್ಕೆ ಬೆಳೆದಿದೆ.

ಗುರಿ: ವಾಕ್ಯದಾಗ ಇರುವ ಕೆಲಸದ ಗುರಿಯನ್ನು ತಿಳಿಸುವುದು ಗುರಿ ಸಂಬಂದ. ಗುರಿ ಸಂಬಂದವು ಕನ್ನಡ –ದ್ರಾವಿಡದಾಗ ನೆಲೆಯ ಬಳಿಕ ಬೆಳೆದ ವಾಕ್ಯ ಸಂಬಂದವಾಗಿದೆ. ಈಗಾಗಲೆ ಮಾತಿನಲ್ಲಿ ಬೆಳೆದ ವಾಕ್ಯ ಸಂಬಂದವಾದ ನೆಲೆಯನ್ನು ಹೇಳಲು ಅಂದು ಬಳಕೆಯಲ್ಲಿದ್ದ ಬೇರೆ ಕೆಲವು ಸ್ವತಂತ್ರ ಆಕ್ರುತಿಮಾಗಳು ಗುರಿ ಸಂಬಂದವನ್ನು ಹೇಳಲು ಮುಂದೆ ಬಂದವು. ಹೀಗೆ ಬಂದ ಕೆಲವು ರೂಪಗಳು ಗುರಿ ಸಂಬಂದಮೊಂದಿಗೆ ಉಳಿದುಕೊಂಡಿವೆ. ಮೂಲ ಹಂತದಾಗ ಬೇರೆ ಬೇರೆ ಒಳ ನುಡಿಗಳು ಬೇರೆ ಬೇರೆ ರೂಪಗಳನ್ನು ಬಳಸುತ್ತಿದ್ದವು ಎಂದು ಹೇಳಲೂ ಸಾಧ್ಯವಿದೆ. ಇದನ್ನು ಇಂದು ಮಾತುಗಳಾಗಿ ನಿಂತಿರುವ ಮೂಲ ದ್ರಾವಿಡದ ಒಳನುಡಿಗಳನ್ನು ಅದ್ಯಯನ ಮಾಡುವುದರ ಮೂಲಕ ತಿಳಿದುಕೊಳ್ಳಬಹುದು. ಅಲ್ಲದೆ ಮುಖ್ಯವಾದ ಅಂಶವೆಂದರೆ ಇಂದಿನ ಕನ್ನಡದ ಒಳನುಡಿಗಳನ್ನು ಅದ್ಯಯನ ಮಾಡುವುದರ ಮೂಲಕವೂ ಈ ನಿಜವನ್ನು ತಿಳಿದುಕೊಳ್ಳಬಹುದು. ಈ ನಿಟ್ಟಿನಾಗ ಒಳ್ಳೆಯ ಅದ್ಯಯನಗಳು ಬರಬೇಕಿವೆ.

ಇಲ್ಲಿ ಅಯ್ದನೆಯ ನೂರ್ಮಾನದ ಕಲ್ಬಾಟ್ಟುಗಳಲ್ಲಿ ಬಳಕೆಯಾಗಿರುವ ಗುರಿ ಒಟ್ಟುಗಳನ್ನು ನೋಡಬಹುದು. – ಕ್ಕೆ ಮತ್ತು –ಗೆ ಇವುಗಳು ಹೀಗೆ ಬಳಕೆಯಾಗಿರುವುದು ಕಾಣುತ್ತದೆ.

ಬಳಕೆ : ಪಶುಪತಿ ನಾಮದೇಯನ್ ಆಸರಕ್ಕೆಲ್ಲ ಬಟರಿಯಾ (ಕ.ಸಂ.೧)

ಪಶುಪತಿ ಎಂಬ ಹೆಸರಿನವನೂ ಆಶ್ರಯಕ್ಕೆಲ್ಲ ಬಟರಿಯ (ಬಟರಿ ಮನೆತನದ)

ಸುತನ್ಗೆ ಪ್ರೇಮಾಲಯ ಸುತನ್ಗೆ (ಕ.ಸಂ.೧)
ಪ್ರೇಮಕ್ಕೆ ಆಲಯನಾದ ಮಗನಿಗೆ
ಪೆತ್ತಜಯನಾ ವಿಜ ಅರಸನ್ಗೆ (ಕ.ಸಂ. ೧)
ಜಯವನ್ನು ಹೊಂದಿದವನಾದ ವಿಜ ಅರಸನಿಗೆ
ಪಲ್ಮಡಿಗೆ ಕುಱುಮ್ಬಿಡಿವಿಟ್ಟಾರ್ (ಕ.ಸಂ.೧)
ಪಲ್ಮಡಿಗೆ ಕುರುಂಬಿಡಿಯನ್ನು ಬಿಟ್ಟರು
ಅದಾನ್ ಅಳಿವೊನ್ಗೆ ಮಹಾಪಾತಕಮ್ (ಕ.ಸಂ. ೧)
ಅದನ್ನು ಅಳಿಯುವವನಿಗೆ ಮಹಾಪಾತಕವು
ಭಟ್ಟರ್ಗ್ಗೀಗಟ್ಟಿ ಒಡ್ಡಲಿ ಆ ಪತ್ತೊನ್ದಿ (ಕ.ಸಂ. ೧)
ಬಟ್ಟರಿಗೆ ಈ ಗದ್ದೆಯ ಒಡ್ಡಿನಲ್ಲಿ ಆ ಹತ್ತರ ಒಂದು ಬಾಗ
ತಿಪ್ಪುರ ಕದಸ್ವಮಿಗಲ್ಗೆ (ಕ.ಸಂ. ೩)
ಪ್ರಣಯಿಜನಕ್ಕೆ ಕಾಮನಸಿತೋತ್ಪಲವರ್ಣ್ಣನವನ್ (ಕ.ಸಂ. ೪)
ಪ್ರಣಯಿಜನರಿಗೆ ಕಾಮನು ನೀಲಿಬಣ್ಣದವನು

ಹೀಗೆ ನೆಲೆಯನ್ನು ಹೇಳುತ್ತಿದ್ದ ಮುಂದೆ ಗುರಿಯನ್ನು ಹೇಳಲು ಮುಂದೆ ಬಂದ ರೂಪಗಳಲ್ಲಿ *–ಅಕನ್ ಇದು ಅತ್ಯಂತ ಪ್ರಮುಕವಾದುದು. ಇದು ಇಂದಿನ ಬಹಳಶ್ಟು ದ್ರಾವಿಡ ಮಾತುಗಳಾಗ ಗುರಿ ಒಟ್ಟಾಗ ಉಳಿದುಕೊಂಡು ಬಂದಿದೆ. ಇದರೊಂದಿಗೆ ಬೇರೆ ಅನೇಕ ರೂಪಗಳು ಇದ್ದರೂ ತೆಂಕದ್ರಾವಿಡ ಮಾತುಗಳಲ್ಲಿ *–ಅಕನ್ ಇದು ವಿಶೇಶ ಬೆಳವಣಿಗೆಯಾಗಿದೆ. *–ಅಕನ್ ಇದು ಇದೆ ರೂಪದಲ್ಲಿ ಕನ್ನಡದಾಗ ಬಾಳಾ ಬಾರಿ ಬಳಕೆಯಾಗಿರುವುದಕ್ಕೆ ಹಳೆಯ ಮತ್ತು ನಡುಗಾಲದ ಸಾಹಿತ್ಯದೊಳಗೆ ಬಳಕೆಗಳು ಸಿಗುತ್ತದೆ. *–ಅಕನ್ ಇದು ಕನ್ನಡ ಮಾತಿನಲ್ಲಾದ ಅನೇಕ ಬೆಳವಣಿಗೆಗಳಿಗೆ ಪಕ್ಕಾಗಿದೆ. ಮೂಲ ಹಂತದಲ್ಲಿಯೆ ಇದ್ದ ವ್ಯಂಜನಾಂತಗಳು ಸ್ವರಾಂತಗಳಾಗುವ ಪ್ರಕ್ರಿಯೆಯೊಳಗೆ ಕೊನೆ ವ್ಯಂಜನವನ್ನು ಕಳೆದುಕೊಂಡಿದೆ. ಅದರೊಂದಿಗೆ ಕೆಲವೆಡೆ ಮೊದಲ ಸ್ವರವನ್ನೂ ಕಳೆದುಕೊಂಡಿದೆ. ಒಟ್ಟುಗಳ ಸಂದರ್ಬದಾಗ ಮೊದಲ ಸ್ವರವನ್ನು ಕಳೆದುಕೊಳ್ಳುವುದು ಕನ್ನಡದಲ್ಲಿ ಸಹಜವಾಗಿ ಕಂಡುಬರುವ ಒಂದು ಪ್ರಕ್ರಿಯೆ. ಕನ್ನಡದಲ್ಲಿ ನಂತರದ ಹಂತದಾಗ ಬೆಳೆದ ಕೊರಳಿಸಿದ ಉಲಿಗಳಿಂದಾಗಿ *–ಅಕನ್ ಇದು ಅಗನ್ ಎಂದಾಗಿದೆ. ಹೀಗೆ ಅನೇಕ ಬೆಳವಣಿಗಗಳಿಗೆ ಪಕ್ಕಾಗಿ *–ಅಕನ್ ಇದು ಅನೇಕ ರೂಪಗಳನ್ನು ಪಡೆದುಕೊಂಡಿದೆ. ಅವುಗಳಲ್ಲಿ *–ಅಕನ್, –ಅಕ, –ಅಗನ್, –ಅಗ, –ಕ, –ಕೆ, –ಕ್ಕ, –ಕ್ಕೆ, –ಗ, –ಗೆ ಮೊದಲಾದವುಗಳನ್ನು ನೋಡಬಹುದು. ಇವುಗಳಲ್ಲಿ –ಕ್ಕೆ, –ಗೆ ಇವುಗಳು ಅಯ್ದನೆಯ ನೂರ್ಮಾನದಾಗ ಬಳಕೆಯಾಗಿವೆ.

ಆಗುಗ ಸಂಬಂದ : ವಾಕ್ಯದಾಗ ಇರುವ ಕೆಲಸದ ಆಗುಗವನ್ನುಹೇಳುವುದೆ ಆಗುಗ ಸಂಬಂದ. ಕನ್ನಡ – ದ್ರಾವಿಡದಾಗ ಗುರಿಯ ಬಳಿಕ ಬೆಳೆದ ವಾಕ್ಯ ಸಂಬಂದ ಆಗುಗ ಸಂಬಂದವಾಗಿದೆ. ಈ ಮೇಲೆ ಹೇಳಿದಂತೆ ಈ ಮೊದಲು ಹೇಳಲು ಬಳಕೆಯಲ್ಲಿದ್ದ

ಬೇರೆ ಬೇರೆ ರೂಪಗಳಲ್ಲಿ ಕೆಲವು ರೂಪಗಳು ಆಗುಗ ಸಂಬಂದವನ್ನು ಹೇಳಲು ಇರುವ ರೂಪಗಳಿಗಿಂತ ಹೆಚ್ಚು ವಯ್ವಿದ್ಯತೆ ಕಾಣಿಸುತ್ತದೆ, ಇದಕ್ಕೆ ಕಾರಣ ಗುರಿ ಸಂಬಂದವು ಬಹು ಹಿಂದೆಯೆ, ನೆಲೆ ಸಂಬಂದ ಬೆಳೆದ ಹತ್ತಿರದಾಗ ಬೆಳೆದಿರಬೇಕು. ಹೀಗಾಗಿ ಇದಕ್ಕೆ ಕಡಿಮೆ ಒಟ್ಟುಗಳು ಹೆಚ್ಚು ಗಟ್ಟಿಯಾಗಿ ಅಂಟಿಕೊಂಡಿವೆ. ಆದರೆ ಇಶ್ಟೊಂದು ಜಿಗುಟುತನ ಆಗುವ ಸಂಬಂದದ ಒಟ್ಟುಗಳಲ್ಲಿ ಕಾಣುವುದಿಲ್ಲ. ಗುರಿ ಸಂಬಂದ ಮತ್ತು ಆಗುಗ ಸಂಬಂದಗಳ ಬೆಳವಣಿಗೆ ನಡುವೆ ಬಲು ದೊಡ್ಡ ಅಂತರವಿರಬೇಕು.

ಕನ್ನಡದ ಅಯ್ದನೆಯ ಶತಮಾನದ ಬರಿಕೆಯಲ್ಲಿ ಆಗುಗವನ್ನು ಹೇಳುವುದಕ್ಕೆ –ಅನ್, *–ಆನ್ ಇವುಗಳು ಬಳಕೆಯಾಗಿವೆ.

ಬಳಕೆ : ಕೇಕಯ **ಪಲ್ಲವರಂ** ಕಾದ್ಎಜಿ‌ದು (ಕ.ಸಂ. ೧)

ಕೇಕಯ ಪಲ್ಲವರನ್ನು ಕಾದು ಇರಿದು

ಅದಾನ್ ಅಳಿವೊನ್ಗೆ ಮಹಾಪಾಕಮ್ (ಕ.ಸಂ. ೧)

ಅದನ್ನು ಅಳಿಸುವವನಿಗೆ ಮಹಾಪಾತಕ

ಇನ್ನಿ(ಂತಿ)ದಾನ್ನ್ ಅಟಿವೋರ್ (ಕ.ಸಂ. ೧)

ಇನ್ನು ಇಂತು ಇದನ್ನು ಅಳಿವವರು

–ಅನ್ ಮತ್ತು *–ಆನ್ ರೂಪಗಳ ಬಗೆಗೆ ಒಂದು ಚೂರು ಗಮನ ಹರಿಸಬಹುದು.

ಈಗಾಗಲೆ ನೋಡಿದಂತೆ, ಕನ್ನಡದ ದೂರತೋರುಗ *–ಅ ಇದು ಉದ್ದಕ್ಕರವಾಗಿ ಬೆಳೆದು ಮತ್ತೆ ಗಿಡ್ಡಕ್ಕರವಾಗಿ ಬೆಳೆದಿದೆ. ಈ ಪ್ರಕ್ರಿಯೆಯ ನಡುವೆ ಸುಮಾರಾಗಿ ಉದ್ದಕ್ಕರ ರೂಪಕ್ಕೆ ಪೂರಕ ಒಟ್ಟುಗಳು ಸೇರಿಕೊಂಡು *–ಆನ್/*–ಆಲ್/*–ಆಳ್ ಮೊದಲಾದ ರೂಪಗಳ ಮೂಲ ರೂಪವೊಂದು ಸಿದ್ದವಾಗಿ ಮುಂದೆ ಉಲಿಯೊಡೆತದಿಂದಾಗಿ ಮೂರು ರೂಪಗಳಾಗಿ ಬೆಳೆದಿವೆ. ಮೊದಲುದ್ದಕ್ಕರ ಮೊದಲ್‌ಗಿಡ್ಡಕ್ಕರವಾಗಿ ಬೆಳೆವ ಬಳಿಕ ಈ ಮೂರೂ ರೂಪಗಳು ಮೊದಲ್‌ಗಿಡ್ಡಕ್ಕರಗಳಾಗಿ ಬೆಳೆದವು. ಇವುಗಳಿಗೆ ಬಳಕೆಗಳನ್ನು ಬೇರೆ ಕಡೆ ಕನ್ನಡದಾಗ ನೋಡಬಹುದು.

ಅಯ್ದನೆಯ ಶತಮಾನದ ಕಲ್ನಾಟ್ಟುಗಳಾಗ *–ಆ ಮತ್ತು –ಅನ್ ಈ ಎರಡೂ ರೂಪಗಳು ಆಗುಗವನ್ನು ಹೇಳಲು ಬಳಕೆಯಾಗಿವೆ.

ಸಾದನ ಸಂಬಂದ : ವಾಕ್ಯದಾಗಿನ ಕೆಲಸದ ಸಾದನವನ್ನು ಹೇಳುವುದು ಸಾದನ ಸಂಬಂದ. ಆಗುಗ ಸಂಬಂದದ ಬಳಿಕ ಕನ್ನಡ–ದ್ರಾವಿಡದಾಗ ಬೆಳೆದ ವಾಕ್ಯ ಸಂಬಂದ ಸಾದನ ಸಂಬಂದ. ಅಯ್ದನೆಯ ನೂರ್ಮಾನದ ಕನ್ನಡ ಬರಿಕೆಯನ್ನು ಅವಲೋಕಿಸಿದಾಗ ಸಾದನವನ್ನು ಹೇಳುವ ಯಾವುದೆ ರೂಪಗಳು ಬಳಕೆಯಾಗಿಲ್ಲವೆಂಬುದು ತಿಳಿಯುತ್ತದೆ. ಅಲ್ಲದೆ ಸಾದನ ಸಂಬಂದ ಕೂಡ ಇದರಲ್ಲಿ ಬಳಕೆಯಾಗಿಲ್ಲ. ಆದರೆ ಸಾದನ ಸಂಬಂದ ಇರಲಿಲ್ಲ ಎಂದು ಇದರಿಂದ ವಾದಿಸಲು ಆಗದು. ಬದಲಾಗಿ

ದೊರೆತ ಬರಿಕೆಯಾಗ ಆ ಸಂಬಂದ ಬಳಕೆಯಾಗಿಲ್ಲ ಎಂದು ಹೇಳಬಹುದು.

ಬಿಡುಗಡೆ ಸಂಬಂದ : ವಾಕ್ಯದಾಗ ಕೆಲಸದ ಬಿಡುಗಡೆಯನ್ನು ಹೇಳುವ ಸಂಬಂದವೆ ಬಿಡುಗಡೆ ಸಂಬಂದ. ಇದು ಕನ್ನಡ– ದ್ರಾವಿಡದಲ್ಲಿ ಸಾದನ ಸಂಬಂದದ ಬಳಿಕ ತೀರಾ ಇತ್ತೀಚೆಗೆ ಬೆಳೆದ ವಾಕ್ಯಸಂಬಂದವಾಗಿದೆ. ಇದಕ್ಕಿರುವ ಒಟ್ಟುಗಳ ವಿಬ್ವಿದ್ಯತೆ ಇದನ್ನು ಎತ್ತಿ ಹಿಡಿಯುತ್ತದೆ. ಅಯ್ದನೆಯ ಶತಮಾನದ ಕನ್ನಡ ಕಲ್ಬಾಟುಗಳಲ್ಲಿ ಬಿಡುಗಡೆ ಸಂಬಂದ ಬಳಕೆಯಾಗಿಲ್ಲ. ಹೀಗಾಗಿ ಅದನ್ನು ಹೇಳುವ ಒಟ್ಟುಗಳನ್ನು ಕೂಡ ಇದರಲ್ಲಿ ಎದುರ್ಗಾಣಲಾಗದು. ಆದರೆ ಬಿಡುಗಡೆ ಸಂಬಂದ ಆ ಕಾಲಕ್ಕಾಗಲೆ ಬೆಳೆದಿರಬೇಕು. ಬಿಡುಗಡೆ ಸಂಬಂದ ಇರಲಿಲ್ಲ ಎಂದು ಹೇಳಲಾಗದು. ಕನ್ನಡ ಮಾತು ಬರಿಕೆಗೆ ಇಳಿಯುವ ಆದೆಶ್ಟೊ ಮೊದಲು ಈ ವಾಕ್ಯ ಸಂಬಂದಗಳು ಬೆಳೆದಿವೆ.*

* ವಾಕ್ಯ ಸಂಬಂದಗಳ ಬೆಳವಣಿಗೆ ಮೊದಲಾದ ಅಂಶಗಳ ವಿವರವಾದ ಮಾತುಕತೆಗೆ ನೋ.ಕನ್ನಡ ವಿಭಕ್ತಿ ರೂಪಗಳ ಅಯ್ತಿಹಾಸಿಕ ಬೆಳವಣಿಗೆ. ಬಸವರಾಜ ಕೋಡಗುಂಟಿ, ಮಯ್ಸೂರು ವಿಶ್ವವಿದ್ಯಾಲಯಕ್ಕೆ ಹಾಜರು ಪಡಿದ ಸಂಶೋದನಾ ಪ್ರಬಂದ. ೨೦೦೮.

ಹೊಂದಿಕೆ: ಶಾಸನ ಪಾಟ. ಶ. ಶೆಟ್ಟರ್ ಅವರ ಪ್ರಕಟವಾಗಿಲ್ಲದ ಕಲ್ಬಾಟ್ಟಿನ ಕಟ್ಟಿನಿಂದ. (ಶೆಟ್ಟರ್ ಅವರು ಒಟ್ಟು ಆರು ಕಲ್ಬಾಟ್ಟುಗಳನ್ನು ಅಯ್ದನೆಯ ನೂರ್ಮಾನದವುಗಳೆಂದು ನಾಲ್ಕನೆಯ ನೂರ್ಮಾನದ್ದೊಂದು ಕಲ್ಬಾಟ್ಟು ಎಂದು ಗುರಿತಿಸಿದ್ದಾರೆ. ಆದರೆ ಇಲ್ಲಿ ವಿವಾದದೊಳಗಿಲ್ಲದ, ಅಯ್ದನೆಯ ನೂರ್ಮಾನದವುಗಳೆಂದು ಈ ಮೊದಲೆ ಎಲ್ಲರೂ ಒಪ್ಪಿಕೊಂಡ ಕಲ್ಬಾಟ್ಟುಗಳನ್ನು ಮಾತ್ರ ಅದ್ಯಯನಕ್ಕೆ ಬಳಸಿಕೊಳ್ಳಲಾಗಿದೆ).

೧. **ಪೂರ್ವ ಕದಂಬರು –ಕಾಕುಸ್ತವರ್ಮ – ಸು. ೪೫೦:**

ಜಯತಿ ಶ್ರೀ ಪರಿಶ್ವಜ್ಗಶ್ಯಾರ್ಗ [ವ್ಯಾ]ನತಿರ್ ಅಚ್ಯುತಹ ದಾನವಕ್ಶೋಣ್ಣರ್ ಯುಗಾನ್ತ ಅಗ್ನಿಹಿ [ಶಿಶ್ಟಾನಾನ್ತು] ಸುದರ್ಶನಹ ನಮಹ ಶ್ರೀಮತ್ ಕದಂಬಪನ್ ತ್ಯಾಗ ಸಂಪನ್ನನ್ ಕಲಬೋರ[ನಾ] ಅರಿ ಕಕುಸ್ತಬಟ್ಟೋರನ್ ಆಳೆ ನರಿದಾವಿ[ಳೆ] ನಾಡುಳ್ ಮ್ರುಗೇಶ ನಾಗೇನ್ದ್ರಾಬೀಳರ್‌ಬ್ಬಟ ಹರಪ್ಪೋರ್ ಶ್ರೀಮ್ರುಗೇಶ ನಾಗಾಹ್ವಯರ್ ಇರ್‌ವ್ವರಾ ಬಟರಿ ಕುಲಾಮಲ ವ್ಯೋಮತಾರಾಧಿ ನಾತನ್ ಅಳಪ ಗಣ ಪಶುಪತಿಯಾ ದಕ್ಶಿಣಾಪತ ಬಹುಶತಹವನಾಹವದು[ಳ್] ಪಶುಪ್ರದಾನ ಶವುರ್‍ಯೋದ್ಯಮ ಬರಿತೋ[ನ್ದಾನ] ಪಶುಪತಿಯೆನ್ದು ಪೊಗಟೆಪ್ಪೊಟ್ಟಣ ಪಶುಪತಿ ನಾಮದೇಯನ್ ಆಸರಕ್ಕೆಲ್ಲ ಬಟರಿಯಾ ಪ್ರೇಮಾಲಯ ಸುತನ್ಗೆ ಸೇನ್ದ್ರಕ ಬಣೋಬಯ ದೇಶದಾ ವೀರಪುರುಶ ಸಮಕ್ಶದೆ ಕೇಕಯ ಪಲ್ಲವರಂ ಕಾದ್‌ಎಱಿದು ಪೆತ್ತಜಯನಾ ವಿಜ ಅರಸನ್ಗೆ ಬಾಳ್ಗಟ್ಟು ಪಲ್ಮಡಿಉಂ ಮೂಟಿವಳ್ಳಿಉಂ ಕೊಟ್ಟಾರ್ ಬಟಾರಿ ಕುಲದೊನಳ ಕದಮ್ಬನ್ ಕಳ್ದೋನ್ ಮಹಾಪಾತಕನ್ ಇರ್‌ವ್ವರುಂ ಸಟ್ಟಿಜ್ಗದರ್ ವಿಜಾರಸರುಂ ಪಲ್ಮಡಿಗೆ ಕುಱುಮ್ಬಿಡಿ ವಿಟ್ಟಾರ್ ಅದಾನ್ ಅಳಿವೊನ್ಗೆ ಮಹಾಪಾತಕಮ್ ಸ್ವಸ್ತಿ ಬಟ್ಟರ್‍ಗ್ಗೀಗಟ್ಟಿ ಒಡ್ಡಲಿ ಆ ಪತ್ತೊನ್ದಿ ವಿಟ್ಟಾರಕರ.

೨. **ಕದಂಬ –ರವಿವರ್ಮ – ಸು. ೫ನೇ ನೂರ್ಮಾನ.**

ಸ್ವಸ್ತಿ ಶ್ರೀ ರವರಿವರ್ಮ್ಮ[ರ್] ನಾಡಾಳೆ ಮಲ್ಲಿಗೆ ಆ ಅರಸರಾ ಪೆರಿಯಾ ಅರಸಿ ಕಾಳಗುಜ್ಜೆನಿಯಾ

ಪಡು[ಗಲ್] ಇನ್ನಿ(ಂತಿ)ದಾನ್ಸ್ ಅಟುವ್ರೋರ್ ಪ[ಞ್ವಪಾ]ದಗ ಸಮ್ಯುತ್ತರಪ್ಪಾ(ಪ್ಪೋ)[ರ್]

೩. **ಗಂಗ – ಅವಿನೀತ : ಸು.೫–೬ನೇ ನೂರ್ಮಾನ.**

ಪ್ರವರವಿಜಯಾವತ್ರುಮಸ್ಯೆ(ಸ್ಯ)[ಶ್ರೀಮಾನ್] ಮ(ಮಾ)ದವ[ಮಹಾದಿ]ರಾಜಸ್ಯ ಪುತ್ತ್ರಪ(ತ್ರಹ) ಕೊಜ್ಗುಣಿ–ರಾಜಸ್ಯ ದತ್ತ(ತ್ತಂ) ಕಾಡಸ್ವಮಿಶ್ಜ ತೈತ್ತಿರಿ(ರೀ)ರ್ಯ್ಯ(ಯ) ಸಬ್ರಹ್ಮಣಸ್ಯ ಹಿರಣ್ಯಕೇಶಿ ಸೂತ್ರೇಬ್ಯ ಮರುಗರೆಯರಸ್ತ್ರ ತಿಪ್ಪುರ ಕದಸ್ವಮಿಗಲ್ಗೆ ಬ್ರಹ್ಮದೇಯ ಕ್ರಮದಿನ್ [ಮೆ]ಲುರ [ಕೆಜ್] ಕೀಟಿ ಪ[ನ್ನಿ]ರ್ಕಣ್ಡುಗ ವ್ರೀಹಿಬೂಮಿ ದತ್ತವ್ಯ ತ್ತ್ರಶ್ಪಾದಶಜಾತಿಭಿಹಿ ಸರ್ವ್ವಪರಿಹಾರವ್[ಹ] (ಮುಂದಿನ ೯ ಸಾಲುಗಳು ಸಂಸ್ಕೃತದಲ್ಲಿವೆ). . . ರ್ಗ್ಗಟನಿನ್ದ ಪನ್ನಿರ್ಕ್ಕಣ್ಡುಗ ವೆದನೆಲ್ಮಣ್ಣಂ ಒಸ್ದು ಪಾಟುಂ . . . ರ ಪಡೆದಂ ಪಡೆದೋನಜಿಮ . . .

೪. **ಕದಂಬ – ಗುಣಮದುರ : ಸು. ೫೦೦.**

ಬಿಣಮಣಿ ಅನ್ತು ಬೋೀಗಿ ಬಿಣದುಳ್ ಮಣಿವಿಲ್ ಮನದೋನ್ ರಣಮುಖದುಳ್ಳ ಕೋಲಂ ನೆರೆಯಕ್ಕುಂ ಅನಿನ್ದ್ಯಗುಣನ್ ಪ್ರಣಯಿಜನಕ್ಕೆ ಕಾಮನ ಸಿತೋತ್ಪಲವರ್ಣ್ಣನ್ ಅವನ್ ಗುಣ ಮದುರಾಂಕ ದಿವ್ಯಪುರುಶನ್ ಪುರುಶ ಪ್ರವರನ್.

* ಈ ಲೇಖನದಲ್ಲಿ ಮಹಾಪ್ರಾಣಾಕ್ಷರಗಳ ಬದಲು ಅಲ್ಪಪ್ರಾಣಾಕ್ಷರಗಳನ್ನು ಬಳಸಲಾಗಿದೆ. ಆಂದ್ರ, ಸಂಬಂದ, ಪ್ರಾದ್ಯಾಪಕ, ಮುಕ್ಯ, ಸಿದ್ದ, ದಾಕಲೆ, ವಿಬಕ್ತಿ, ಪ್ರಬಂದ, ಬಾಗ, ಹಿಮ್ಮುಕ, ಅದ್ಯಯನ, ಸಾದ್ಯ, ಸಂದರ್ಬ, ಸಾದನ, ಪಾಟ, ಮದುರ, ಬಾಶೆ. 'ಷ' ವ್ಯಂಜನದ ಬದಲು 'ಶ' ವ್ಯಂಜನವನ್ನು ಬಳಸಲಾಗಿದೆ. ನಿರ್ದಿಶ್ಟ, ಸ್ಪಶ್ಟ, ಬಾಶೆ, ಮನುಶ್ಯ, ಒಂದಿಶ್ಟು, ಇನ್ನಶ್ಟು, ಬಹಳಶ್ಟು, ಇಶ್ಟೊಂದು. ಐದನೆಯ, ಗೌರವ, ಆಕೃತಿಮ, ವೈಜ್ಞಾನಿಕ, ಐತಿಹಾಸಿಕ, ಮೈಸೂರು, ದ್ರಾವಿಡದಲ್ಲಿ, ಕನ್ನಡದಲ್ಲಿ, ವೈವಿಧ್ಯತೆ ಎಂಬ ಶಬ್ದಗಳ ಬದಲು ಅಯ್ದನೆಯ, ಗವ್ರವ, ಆಕ್ರುತ್ರಿಮ ವಯಿಗ್ನಾನಿಕ, ಅಯ್ತಿಹಾಸಿಕ, ಮಯ್ಸೂರು ದ್ರಾವಿಡದಾಗ, ಕನ್ನಡದಾಗ, ವಯ್ವಿದ್ಯತೆಎಂಬ ಶಬ್ದ ರೂಪಗಳನ್ನು ಬಳಸಲಾಗಿವೆ. ನೂರ್ಮಾನ, ಆಗುಗ, ಗಿಡ್ಡಕ್ಷರ, ಉದ್ದಕ್ಕರ, ಅರಿಗರು, ಮಾಡುಗ, ಬಳಕೆ, ಒಟ್ಟು, ಉಲಿಯೊಡೆತ, ಎದುರ್ಗ್ಗಣು, ಬರಿಕೆ ಎಂಬಿವೇ ಮುಂತಾದ ವಿಶಿಷ್ಟ ರೂಪಗಳ ಬಳಕೆಯನ್ನು ಮಾಡಲಾಗಿವೆ. ಇದಕ್ಕೆ ಕಾರಣಗಳು ಅನೇಕ ಇವೆ: ಪ್ರದೇಶ, ನುಡಿರೂಪ, ಆಡುಮಾತಿನಂತೆ ಬರೆಯುವ್ರುದು, ಉಚ್ಚಾರಣಾ ವ್ಯತ್ಯಾಸ ಹೀಗೆ ಹಲವಾರು : **ಸಂಪಾದಕರು**

□

೮. ತುಳು – ಹವ್ಯಕ ಕನ್ನಡ ಭಾಷಾ ಸಾದೃಶ್ಯಗಳು

• ಎ. ಲಕ್ಷ್ಮೀ

ಮೂಲ ದ್ರಾವಿಡದ ಅನೇಕ ವೈಲಕ್ಷಣ್ಯಗಳನ್ನು ಉಳಿಸಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಿರುವ ತುಳು ಹಾಗೂ ಹವ್ಯಕ ಕನ್ನಡದಲ್ಲಿ ಅನೇಕ ಸಾದೃಶ್ಯಗಳು ಇವೆ. ಮೂಲ ದ್ರಾವಿಡ ಭಾಷೆಯ ಮುಖ್ಯ ಲಕ್ಷಣವೆಂದು ಪರಿಗಣಿಸಲ್ಪಟ್ಟಿರುವ ಆತ್ಮಾರ್ಥಕ ಸರ್ವನಾಮಗಳಲ್ಲಿರುವ ಎರಡು ಪ್ರಭೇದಗಳು ತುಳು ಹಾಗೂ ಹವ್ಯಕ ಕನ್ನಡದಲ್ಲಿ ಅನುಲಕ್ಷಿಸಲ್ಪಟ್ಟಿವೆ. ಅಭಿವ್ಯಾಪಕ ಮತ್ತು ವ್ಯಾವರ್ತಕ ಸರ್ವನಾಮಗಳಲ್ಲಿನ, ಬಳಕೆಯಲ್ಲಿನ ವ್ಯತ್ಯಾಸವನ್ನು ಈ ಎರಡು ಭಾಷೆಗಳಲ್ಲಿ ಸ್ಪಷ್ಟವಾಗಿ ಗುರುತಿಸಲಾಗುತ್ತಿದೆ. ಕನ್ನಡದಲ್ಲಿ ಅಭಿವ್ಯಾಪಕ ಅಂದರೆ ಎದುರಿಗೆ ಇರುವವರನ್ನು ಸೇರಿಸಿ ಹೇಳುವ ಆತ್ಮಾರ್ಥಕ ಸರ್ವನಾಮ ಮತ್ತು ವ್ಯಾವರ್ತಕ ಅಂದರೆ ಎದುರಿಗೆ ಇರುವವರನ್ನು ಬಿಟ್ಟು ಹೇಳುವ ಆತ್ಮಾರ್ಥಕ ಸರ್ವನಾಮ – ಈ ಎರಡು ಸರ್ವನಾಮಗಳಿಗೂ ನಾವು, ನಮ್ಮ ಎನ್ನುವ ಒಂದೇ ರೀತಿಯ ಪದವನ್ನು ಬಳಕೆ ಮಾಡುತ್ತಾರೆ.

ಉದಾ: ಮಕ್ಕಳಿಬ್ಬರು ತಂದೆಯ ಹತ್ತಿರ 'ನಾವು ಅಂಗಡಿಗೆ ಹೋಗೋಣ' ಎಂದು ಹೇಳುವಾಗ ಇಲ್ಲಿ ನಾವು ಅನ್ನುವ ಪದ ಎದುರಿಗೆ ಇರುವ ತಂದೆಯನ್ನು ಸೇರಿಸಿ ಹೇಳಲಾಗಿದ್ದು, ಇದು ಇಲ್ಲಿ ಅಭಿವ್ಯಾಪಕ ಸರ್ವನಾಮವಾಗಿ ಬಳಕೆಯಾಗಿದೆ. ಇದೇ ಪದ ವ್ಯಾವರ್ತಕ ಸರ್ವನಾಮಕ್ಕೂ ಬಳಕೆಯಾಗುತ್ತದೆ.

ಉದಾ: ಮಕ್ಕಳಿಬ್ಬರು ತಂದೆಯ ಹತ್ತಿರ 'ನಾವು ಅಂಗಡಿಗೆ ಹೋಗುತ್ತೇವೆ' ಎಂದು ಹೇಳುತ್ತಾರೆ. ಇಲ್ಲಿ ತಂದೆಯನ್ನು ಹೊರತುಪಡಿಸಿ 'ನಾವು ಎಂದು ಹೇಳಲಾಗಿದೆ. ಎದುರಿಗಿರುವವರನ್ನು ಹೊರತುಪಡಿಸಿ ಬಳಸುವ ಸರ್ವನಾಮ ವ್ಯಾವರ್ತಕ ಸರ್ವ ನಾಮವಾಗಿದ್ದು ಇಲ್ಲಿ 'ನಾವು' ಎನ್ನು ಅದೇ ಪದ ವ್ಯಾವರ್ತಕವಾಗಿ ಬಳಸಲ್ಪಟ್ಟಿದೆ. ಆದ್ದರಿಂದ ಕನ್ನಡ ಭಾಷೆಯಲ್ಲಿ ವ್ಯಾವರ್ತಕ ಮತ್ತು ಅಭಿವ್ಯಾಪಕ ಸರ್ವನಾಮಗಳ ಸ್ವರೂಪವನ್ನು ಸ್ಪಷ್ಟಪಡಿಸುವುದು ಕಷ್ಟ. ಆದರೆ ತುಳು ಮತ್ತು ಹವ್ಯಕಕನ್ನಡದಲ್ಲಿ ಅಭಿವ್ಯಾಪಕ ಮತ್ತು ವ್ಯಾವರ್ತಕ ಸರ್ವನಾಮಗಳಿಗೆ ಬೇರೆ ಬೇರೆ ಪದಗಳು ಬಳಕೆಯಲ್ಲಿವೆ. 'ಹವ್ಯಕ ಕನ್ನಡ ಭಾಷೆಯಲ್ಲಿ ಅಭಿವ್ಯಾಪಕ ಸರ್ವನಾಮಕ್ಕೆ ಕನ್ನಡದಲ್ಲಿ ಪ್ರಚಲಿತವಿರುವ ಆತ್ಮಾರ್ಥಕ ಸರ್ವನಾಮವೇ ಬಳಕೆಯಾಗುತ್ತದೆ.

ಉದಾ : ಮಕ್ಕಳಿಬ್ಬರು ತಂದೆಯ ಹತ್ತಿರ ನಾವು ಅಂಗಡಿಗೆ ಹೋಮ (ಕ–ನಾವು ಅಂಗಡಿಗೆ ಹೋಗೋಣ) ಎಂದು ಹೇಳುವಾಗ ಎದುರಿಗಿರುವ ತಂದೆಯನ್ನು ಸೇರಿಸಿ 'ನಾವು' ಎಂದು ಹೇಳಲಾಗಿದೆ.

ಆದರೆ ಹವ್ಯಕ ಕನ್ನಡದಲ್ಲಿ ವ್ಯಾವರ್ತಕ ಸರ್ವನಾಮಕ್ಕೆ ಬೇರೆಯೇ ಪದ ಪ್ರಯೋಗವಿದೆ.

ಉದಾ : ಮಕ್ಕಳಿಬ್ಬರು ತಂದೆಯ ಹತ್ತಿರ "ಎಂಗ ಅಂಗಡಿಗೆ ಹೋವುತ್ತೆಯ" (ಕ–ನಾವು ಅಂಗಡಿಗೆ ಹೋಗುತ್ತೇವೆ) ಎಂದು ಹೇಳುವಲ್ಲಿ ಎದುರಿಗಿರುವ ತಂದೆಯನ್ನು ಬಿಟ್ಟು 'ನಾವು' ಹೋಗುತ್ತೇವೆ ಎಂಬಲ್ಲಿ 'ನಾವು' ಎಂಬ ಪದದ ಬದಲಿಗೆ 'ಎಂಗ' ಎನ್ನುವ ಪದವನ್ನು ಬಳಸಲಾಗಿದೆ.

ಈ ಪದ ವಿಭಕ್ತಿಯ ಅನುಗುಣವಾಗಿ ಹೀಗೆ ಇರುತ್ತದೆ.

ವಿಭಕ್ತಿ	ಹವ್ಯಕ ಕನ್ನಡ	ತುಳು	ಕನ್ನಡ
ಪ್ರಥಮಾ	ಎಂಗ	ಎಂಕುಳು	ನಾವು
ದ್ವಿತೀಯಾ	ಎಂಗಳ	ಎಂಕ್ಲೆನು	ನಮ್ಮನ್ನು
ತೃತೀಯಾ	ಎಂಗಳಂದ	ಎಂಕ್ಲೆಡ್ದು	ನಮ್ಮಿಂದ
ಚತುರ್ಥೀ	ಎಂಗೊಗೆ	ಎಂಕ್ಲೆಗು	ನಮಗೆ
ಪಂಚಮೀ	ಎಂಗಳಂದಾಗಿ	ಎಂಕ್ಲೆಡ್ದಾದು	ನಮ್ಮಿಂದಾಗಿ, ನಮ್ಮ ದೆಸೆಯಿಂದ
ಷಷ್ಠೀ	ಎಂಗಳ	ಎಂಕ್ಲೆನ	ನಮ್ಮ
ಸಪ್ತಮೀ	ಎಂಗಳಲ್ಲಿ	ಎಂಕ್ಲೆನವುಳು	ನಮ್ಮಲ್ಲಿ

ಹವ್ಯಕ ಭಾಷೆಯಂತೆ ತುಳುವಿನಲ್ಲಿ ಕೂಡ ಅಭಿವ್ಯಾಪಕ ಮತ್ತು ವ್ಯಾವರ್ತಕ ಸರ್ವನಾಮಗಳ ಪ್ರಯೋಗದಲ್ಲಿ ಬೇರೆ–ಬೇರೆ ಪದಗಳು ಬಳಕೆಯಲ್ಲಿವೆ. **ಉದಾ:** ಮಕ್ಕಳಿಬ್ಬರು ತಂದೆಯ ಹತ್ತಿರ "ನಮ್ಮ ಅಂಗಡಿಗು ಪೋಯಿ"

'ಕ–ನಾವು ಅಂಗಡಿಗೆ ಹೋಗೋಣ' ಎಂದು ಹೇಳುವಲ್ಲಿ ತಂದೆಯನ್ನು ಸೇರಿಸಿ ನಮ (ಕ–ನಾವು) ಎಂದು ಅಭಿವ್ಯಾಪಕ ಸರ್ವನಾಮವನ್ನು ಬಳಸಲಾಗಿದೆ. ವ್ಯಾವರ್ತಕ ಸರ್ವನಾಮಕ್ಕೆ ಬೇರೆಯೇ ಪದ ಬಳಕೆಯಲ್ಲಿದೆ.

ಉದಾ : ಮಕ್ಕಳಿಬ್ಬರು ತಂದೆಯ ಹತ್ತಿರ 'ಎಂಕುಳು ಅಂಗಡಿಗು ಪೋಪ' (ಕ–ನಾವು ಅಂಗಡಿಗೆ ಹೋಗುತ್ತೇವೆ') ಎಂದು ಹೇಳುವಲ್ಲಿ ಎದುರಿಗಿರುವ ತಂದೆಯನ್ನು ಬಿಟ್ಟು ಹೇಳುವಾಗ 'ಎಂಕುಳು'(ಕ–ನಾವು) ಎಂದು ವ್ಯಾವರ್ತಕ ಸರ್ವನಾಮದಲ್ಲಿ ಬಳಕೆಯಾಗುತ್ತದೆ. ವ್ಯಾವರ್ತಕ ಹಾಗೂ ಅಭಿವ್ಯಾಪಕ ಸರ್ವನಾಮಗಳ ವ್ಯತ್ಯಾಸ ಬಹುವಚನದಲ್ಲಿ ಮಾತ್ರ ಇರುತ್ತದೆ. ಯಾಕೆಂದರೆ ಎದುರಿಗಿರುವವನನ್ನು ಸೇರಿಸಿ

ಅಥವಾ ಬಿಟ್ಟು ವ್ಯವಹರಿಸುವಾಗ ಈ ವ್ಯತ್ಯಾಸಗಳು ಕಾಣಿಸುತ್ತವೆ. ಏಕವಚನದಲ್ಲಿ ನಾನು(ಕ) ಆನು(ಹ.ಕ) ಏನು/ಯಾನು/ಯೇನು (ತುಳು) ಎಂಬ ಆತ್ಮಾರ್ಥಕ ಸರ್ವನಾಮ ಇರುತ್ತದೆ.

ತುಳು ಮತ್ತು ಹವ್ಯಕ ಕನ್ನಡದ ವ್ಯಾವರ್ತಕ ಹಾಗೂ ಆತ್ಮಾರ್ಥಕ ಸರ್ವನಾಮಗಳು ವಿಭಕ್ತಿಗನುಸಾರವಾಗಿ ಹೀಗೆ ಬಳಸಲ್ಪಡುತ್ತವೆ.

ವಿಭಕ್ತಿ	ತುಳು		ಹವ್ಯಕ ಕನ್ನಡ		ಕನ್ನಡ
	ವ್ಯಾಪರ್ತಕ	ಅಭಿವ್ಯಾಪಕ	ವ್ಯಾವರ್ತಕ	ಅಭಿವ್ಯಾಪಕ	
ಪ್ರಥಮಾ	ಎಂಕುಳು	ನಮ	ಎಂಗ	ನಾವು	ನಾವು
ದ್ವಿತೀಯಾ	ಎಂಕ್ಲೆನು	ನಮನು	ಎಂಗಳ	ನಮ್ಮ	ನಮ್ಮ
ತೃತೀಯಾ	ಎಂಕ್ಲೆಡ್ದು	ನಮಡ್ದು	ಎಂಗಳಂದ	ನಮ್ಮಿಂದ	ನಮ್ಮಿಂದ
ಚತುರ್ಥೀ	ಎಂಕ್ಲೆಗು	ನಂತು	ಎಂಗೊಗೆ	ನಮಗೆ	ನಮಗೆ
ಪಂಚಮೀ	ಎಂಕ್ಲೆಡ್ದಾದು	ನಮಡ್ದಾದು	ಎಂಗಳದಾಗಿ	ನಮ್ಮಂದಾಗಿ	ನಮ್ಮಿಂದಾಗಿ।
	ಎಂಕ್ಲೆದೆನುಡ್ದು	ನಮ್ಮದೆಸಡ್ದು	ಎಂಗಳದೆಸೆಂದ	ನಮ್ಮದೆಸೆಂದ	ನಮ್ಮ ದೆಸೆಯಿಂದ
ಷಷ್ಠೀ	ಎಂಕ್ಲೆನ	ನಮ್ಮ	ಎಂಗಳ	ನಮ್ಮ	ನಮ್ಮ
ಸಪ್ತಮೀ	ಎಂಕ್ಲೆನವುಳು	ನಮ್ಮೊಡು	ಎಂಗಳಲ್ಲಿ	ನಮ್ಮಲ್ಲಿ	ನಮ್ಮಲ್ಲಿ

ಹೀಗೆ ವ್ಯಾಕರಣದ ದೃಷ್ಟಿಯಿಂದ ಹವ್ಯಕ ಮತ್ತು ತುಳು ಭಾಷೆಗೆ ತುಂಬ ಸಾಮ್ಯತೆ ಇದೆ. ಅದೇ ರೀತಿ ಅನೇಕ ಶಬ್ದಗಳ ಬಳಕೆಯಲ್ಲಿ ಕೂಡ ಸಾಮ್ಯತೆ ಇದೆ.

ಉದಾ: ತುಳುವಿನಲ್ಲಿ ತಾಯಿಗೆ ಅಪ್ಪೆ ಎಂದು ಹೇಳಿದರೆ ಹವ್ಯಕ ಕನ್ನಡದಲ್ಲಿ 'ಅಬ್ಬೆ' ಎಂಬ ಪ್ರಯೋಗ ಈಗ ಕೂಡ ಅಸ್ತಿತ್ವದಲ್ಲಿದೆ. ಅಪ್ಪೆ ಎನ್ನುವುದೇ, ಅಬ್ಬೆ ಎಂದಾಗಿರಬಹುದು ಅಥವಾ ಮೊದಲು ಕನ್ನಡದಲ್ಲಿ 'ಅಬ್ಬೆ' ಎಂಬ ಪದ ತಾಯಿಗೆ ಬಳಕೆಯಾಗುತ್ತಿದ್ದು ತುಳುವಿನ 'ಅಪ್ಪೆ'ಯ ಪ್ರಭಾವದಿಂದಾಗಿ ಹವ್ಯಕ ಕನ್ನಡದಲ್ಲಿ ಅಬ್ಬೆ ಎಂಬ ಪ್ರಯೋಗ ಉಳಿದುಕೊಂಡಿರಬಹುದು. ಹವ್ಯಕ ಭಾಷೆಯಲ್ಲಿ ಉತ್ತಮ ಪುರುಷ ಸರ್ವನಾಮದ ಏಕವಚನದ ಜೊತೆ ಪ್ರಯೋಗವಾಗುವ ಕ್ರಿಯಾ ಪದಗಳು 'ಎ'ಕಾರಂತವಾಗಿ ಬದಲಾಗುತ್ತವೆ.

ಉದಾ : ಆನು ಹೋವುತ್ತೆ (ಕ – ನಾನು ಹೋಗುತ್ತೇನೆ)
ಆನು ಬತ್ತೆ (ಕ – ನಾನು ಬರುತ್ತೇನೆ)
ಆನು ತಿನ್ನುತ್ತೆ (ಕ – ನಾನು ತಿನ್ನುತ್ತೇನೆ)
ಆನು ಕುಡುದೆ (ಕ – ನಾನು ಕುಡಿದೆ)

ಇದೇ ರೀತಿ ತುಳುವಿನಲ್ಲಿ ಕೂಡ ಉತ್ತಮ ಪುರುಷ ಸರ್ವನಾಮದ ಏಕವಚನದ ಜೊತೆ ಪ್ರಯೋಗವಾಗುವ ಕ್ರಿಯಾಪದಗಳು 'ಎ'ಕಾರಾಂತವಾಗುತ್ತವೆ.

ಉದಾ: ಯಾನು ಪೋಪೆ (ಕ – ನಾನು ಹೋಗುತ್ತೇನೆ)
ಯಾನು ಬರ್ಪೆ (ಕ – ನಾನು ಬರುತ್ತೇನೆ)
ಯಾನು ತಿನ್ಪೆ (ಕ – ನಾನು ತಿನ್ನುತ್ತೇನೆ)
ಯಾನು ಪರಿಯೆ (ಕ ನಾನು ಕುಡಿದೆ)

ಕನ್ನಡದಲ್ಲಿ ಉತ್ತಮ ಪುರುಷ ಸರ್ವನಾಮ ಏಕವಚನದ ಜೊತೆ ಪ್ರಯೋಗವಾಗುವ ಕ್ರಿಯಾಪದಗಳು ಭೂತಕಾಲ ಮತ್ತು ಭವಿಷ್ಯತ್ಕಾಲದಲ್ಲಿ ಮಾತ್ರ 'ಎ' ಕಾರಾಂತವಾಗುತ್ತವೆ. ಆದರೆ ತುಳು ಮತ್ತು ಹವ್ಯಕ ಭಾಷೆಗಳಲ್ಲಿ ವರ್ತಮಾನ ಕಾಲದಲ್ಲಿ ಕೂಡ ಉತ್ತಮ ಪುರುಷ ಸರ್ವನಾಮದ ಏಕವಚನದ ಜೊತೆಗೆ ಪ್ರಯೋಗವಾಗುವ ಕ್ರಿಯಾಪದಗಳು 'ಎ'ಕಾರಾಂತವಾಗುತ್ತವೆ. ತುಳುವಿನಲ್ಲಿ ಉತ್ತಮ ಪುರುಷ ಸರ್ವನಾಮದ ಬಹುವಚನದ ಜೊತೆ ಪ್ರಯೋಗವಾಗುವ ಕ್ರಿಯಾಪದಗಳು ಭೂತಕಾಲದಲ್ಲಿ ಹೆಚ್ಚಾಗಿ 'ಯ'ದಿಂದ ಕೊನೆಗೊಳ್ಳುತ್ತವೆ.

ಉದಾ: ಎಂಕ್ಲು ಪೋಯ (ಕ – ನಾವು ಹೋದೆವು)
ಎಂಕ್ಲು ಪರಿಯ (ಕ– ನಾವು ಕುಡಿದೆವು)
ಎಂಕ್ಲು ತಿಂದ್ಯ (ಕ– ನಾವು ತಿಂದೆವು)

ಇದೇ ರೀತಿ ಹವ್ಯಕ ಭಾಷೆಯಲ್ಲಿ ಕೂಡ ಉತ್ತಮ ಪುರುಷ ಸರ್ವನಾಮ ಬಹುವಚನದ ಜೊತೆಯಲ್ಲಿ ಭೂತಕಾಲದಲ್ಲಿ ಬರುವ ಪದಗಳು 'ಯ'ದಿಂದ ಕೊನೆಗೊಳ್ಳುತ್ತವೆ.

ಉದಾ: ಎಂಗ ಹೋದೆಯ (ಕ – ನಾವು ಹೋದೆವು)
ಎಂಗ ಕುಡುದೆಯ (ಕ – ನಾವು ಕುಡಿದೆವು)
ಎಂಗ ತಿಂದೆಯ (ಕ – ನಾವು ತಿಂದೆವು)

ಹೀಗೆ ಗಮನಿಸುತ್ತಾ ತುಲನೆ ಮಾಡುತ್ತಾ ಹೋದರೆ ತುಳು ಹಾಗೂ ಹವ್ಯಕ ಕನ್ನಡ ಭಾಷೆಗಳಲ್ಲಿ ನೂರಾರು ಸಾದೃಶ್ಯಗಳು ಕಾಣಸಿಗುತ್ತವೆ.

□

೯. ಸಂಸ್ಕೃತ ಸಾಹಿತ್ಯದಲ್ಲಿ ಸಂದೇಶ ಕಾವ್ಯಗಳು

• ಪ್ರೊ. ಸುಬ್ರಾಯ ಈಶ್ವರ ಹೆಗಡೆ

ಸಂಸ್ಕೃತ ಪದ್ಯ ಸಾಹಿತ್ಯದಲ್ಲಿ ಮಹಾಕಾವ್ಯಗಳು ಹಾಗೂ ಖಂಡಕಾವ್ಯಗಳೆಂಬ ಎರಡು ಪ್ರಧಾನ ಪ್ರಕಾರಗಳಿವೆ. ಖಂಡಕಾವ್ಯಗಳಲ್ಲಿ ಹೆಚ್ಚಿನವು ಸಂದೇಶ ಅಥವಾ ದೂತಕಾವ್ಯಗಳಾಗಿವೆ. ಇಂತಹ ಸಂದೇಶ ಕಾವ್ಯಗಳ ಉದಯ ಮತ್ತು ಸ್ಫೂರ್ತಿಗೆ ಮೂಲ ಯಾವುದು ಎಂಬುದನ್ನು ತಿಳಿಯಲು ಋಗ್ವೇದದಲ್ಲಿನ ಒಂದು ಮಹತ್ತರ ಘಟನೆಯನ್ನು ಉದಾಹರಿಸಬಹುದು.

ಋಗ್ವೇದದಲ್ಲಿನ ಶ್ಯಾ-ವಾಶ್ವ-ಆತ್ರೇಯನ ಆಖ್ಯಾನವು ತಪಸ್ಸಿನ ಮೂಲಕ ಪ್ರೇಮದ ಸಾಧನೆ ಮಾಡಬಹುದು ಎನ್ನುವುದಕ್ಕೆ ಒಂದು ಉಜ್ವಲ ದೃಷ್ಟಾಂತವಾಗಿದೆ. (೦೧) ಇಂತಹ ದೂತಕಾವ್ಯಗಳ ಪರಂಪರೆಯು ರಾಮಾಯಣ ಹಾಗೂ ಮಹಾಭಾರತದಲ್ಲಿಯೂ ಪ್ರಚಲಿತವಾಗಿತ್ತು ಎಂದೂ ತಿಳಿದು ಬರುವುದು.

ವಾಲ್ಮೀಕಿ ರಾಮಾಯಣದಲ್ಲಿ ಆಂಜನೇಯ ದೌತ್ಯ (೦೨) ಮಹಾಭಾರತದಲ್ಲಿ ನಳೋಪಾಖ್ಯಾನ (೦೩) ಹೀಗೆ ಅನೇಕ ಉದಾಹರಣೆಗಳನ್ನು ನಾವು ಸಂದೇಶ ಕಾವ್ಯಗಳಿಗೆ ಸಂಬಂಧಿಸಿದಂತೆ ನೋಡಬಹುದು.

ಇತ್ಯಾಖ್ಯಾತೇ ಪವನತನಯಂ ಮೈಥಿಲೀವೋನ್ಮುಖಿ ಸಾ। (೦೪)

ಎಂಬ ಕಾಳಿದಾಸನ ಮೇಘಸಂದೇಶದಲ್ಲಿನ ಈ ವಾಕ್ಯವು ಈ ಮೇಲಿನ ಘಟನೆಗಳ ಪ್ರಭಾವದಿಂದ ರಚಿತವಾಗಿರಬಹುದು. ಸಂದೇಶ ಕಾವ್ಯಗಳ ವೈಶಿಷ್ಟ್ಯವೆಂದರೆ ಪ್ರೇಮ ಪಸಂಗದಲ್ಲಿ ಅಚೇತನ ವಸ್ತುವಿನ ಮೂಲಕ ಸಂದೇಶ ಕಳುಹಿಸುವುದು. ಇದನ್ನು ಕಾಳಿದಾಸನ ಕಾವ್ಯವು ಮೊದಲು ವ್ಯಕ್ತಪಡಿಸಿತು. ಅಲ್ಲದೇ ಇದರಿಂದ ಸ್ಫೂರ್ತಿಯನ್ನು ಹೊಂದಿ ಸಂಸ್ಕೃತ ಸಾಹಿತ್ಯದಲ್ಲಿ ಒಂದು ವಿಶಿಷ್ಟವಾದ ಸಾಹಿತ್ಯದ ಅಭ್ಯುದಯವಾಯಿತು.

ಸಂಸ್ಕೃತದ ಸಂದೇಶ ಕಾವ್ಯಗಳಲ್ಲಿ ಮಹಾಕವಿ ಕಾಳಿದಾಸನ ಮೇಘದೂತವು ಮೊದಲನೆಯ ಗ್ರಂಥವೆನ್ನಬಹುದು. ಇದರಲ್ಲಿ ಕುಬೇರನ ಶಾಪಕ್ಕೊಳಗಾದ ಒಬ್ಬ ವಿರಹಿಯಾದ ಯಕ್ಷನ ಮನೋವ್ಯಥೆಯ ಮಾರ್ಮಿಕವಾದ ಚಿತ್ರಣವಿರುತ್ತದೆ. ಮೇಘ ದೂತವು ಕಾಳಿದಾಸನ, ಮಾನವ ಪ್ರಕೃತಿಯ ಮತ್ತು ಬಾಹ್ಯ ಪ್ರಕೃತಿಯ ಸೂಕ್ಷ್ಮವಾದ

ದರ್ಶನದ ಭವ್ಯ ಭಂಡಾರವಾಗಿದೆ. ಬಾಹ್ಯ ಪ್ರಕೃತಿಗೆ ಇದರಲ್ಲಿರುವಷ್ಟು ಮಹತ್ವ ಸಂಸ್ಕೃತದ ಬೇರಾವ ಗ್ರಂಥದಲ್ಲಿಯೂ ಇಲ್ಲವೆನ್ನಬಹುದು. ಇದರಲ್ಲಿ ಎರಡು ಭಾಗಗಳಿವೆ.

ಪೂರ್ವ ಮೇಘದಲ್ಲಿ ಪ್ರಾರಂಭದಿಂದ ಕೊನೆಯವರೆಗೂ ಪ್ರಕೃತಿಯ ಮನೋಹರ ದೃಶ್ಯಗಳು ವರ್ಣಿತವಾಗಿವೆ. ಪ್ರಕೃತಿಯ ದೃಶ್ಯಗಳಲ್ಲಿ ವಿಜ್ಞಾನಕ್ಕೆ ಸಮ್ಮತವಾದ ಅನೇಕ ವಿಷಯಗಳಿವೆ. (೦೫) ಪೂರ್ವ ಮೇಘವು ಬಾಹ್ಯ ಪ್ರಕೃತಿಯ ಮನೋಹರವಾದ ಚಿತ್ರವಾದರೆ, ಉತ್ತರ ಮೇಘವು ಅಂತಃ ಪ್ರಕೃತಿಯ ಆಧಾರದ ಮೇಲಿನ ಸುಂದರ ವರ್ಣನೆಯಾಗಿರುತ್ತದೆ.

ಬಾಹ್ಯ ಪ್ರಕೃತಿಯ ಮನೋಹರ ಕಾಂತಿಯನ್ನು ಪ್ರಸ್ತುತಗೊಳಿಸುವುದರಲ್ಲಿಯೂ ಹಾಗೂ ಹೃದಯದಲ್ಲಿ ಸತತವೂ ಉದಯಿಸುವ ಭಾವನೆಗಳನ್ನು ಚಿತ್ರಿಸುವುದ ರಲ್ಲಿಯೂ, ಕಾಳಿದಾಸನ ಈ ಕಾವ್ಯಕ್ಕೆ ಸರಿಸಮನಾದುದು ಬೇರೊಂದಿಲ್ಲ. ವಿರಹದಿಂದ ಪೀಡಿತಳಾದ ಪ್ರೇಯಸಿಯೋರ್ವಳ ಹತ್ತಿರಕ್ಕೆ ಮೇಘವನ್ನು ಸಂದೇಶವಾಹಕವಾಗಿ ಕಳುಹಿಸುವ ಅದ್ಭುತವಾದ ಕಲ್ಪನೆಯು ವಿಶ್ವ ಸಾಹಿತ್ಯದಲ್ಲಿಯೇ ಅಪೂರ್ವವಾದುದು. ಹೀಗೆ ಅಚೇತನವಾದ ವಸ್ತುವೊಂದನ್ನು ಪ್ರೇಮ ಪ್ರಸಂಗದಲ್ಲಿ ದೌತ್ಯಕಾರ್ಯಕ್ಕಾಗಿ ಕಳುಹಿಸುವುದು ಹಾಗೂ ಪ್ರಣಯ ವಿಷಯದಲ್ಲಿ ಗಾಢವಾದ ಉತ್ಕಂಠತೆಯನ್ನು ಅಭಿವ್ಯಕ್ತಗೊಳಿಸುವುದು. ನಿಜವಾಗಿಯೂ ಪ್ರತಿಭಾಸಂಪನ್ನನಾದ ಕವಿಯೋರ್ವನ ಉತ್ಕೃಷ್ಟ ಕಲ್ಪನೆಯಾಗಿದೆ.

ಮಹಾಕವಿ ಕಾಳಿದಾಸ ಮೇಘ ಸಂದೇಶದಿಂದ, ಪ್ರಭಾವಿತರಾದ ಶ್ರೇಷ್ಠ ಕವಿಗಳಲ್ಲಿ ೧೯ನೆಯ ಶತಮಾನದ ಮಂಡಕಲ್ ರಾಮಶಾಸ್ತ್ರಿಗಳು ಒಬ್ಬರಾಗಿದ್ದಾರೆ. ಇವರು ಕಾಳಿದಾಸನು ನಿಲ್ಲಿಸಿದ ಹಂತದಿಂದ ಕಾವ್ಯಧಾರೆಯನ್ನು ತಮ್ಮ ಮೇಘ ಪ್ರತಿ ಸಂದೇಶದಲ್ಲಿ ಮುಂದುವರಿಸಿದ್ದಾರೆ.

ಮೋಡದ ಮೂಲಕ ತನ್ನ ಪ್ರಿಯತನಮನ ಸುದ್ದಿ ತಿಳಿದ ಯಕ್ಷ ಪತ್ನಿಗೆ ಅತೀವ ಆನಂದವೂ, ಸಮಾಧಾನವೂ ಆಗುತ್ತದೆ. ಆಕೆ ತನ್ನ ಮನದ ಅಳಲನ್ನು ತೋಡಿ ಕೊಂಡು ಅಲಕಾನಗರದ ತನ್ನ ಮನೆಯ ಸ್ಥಿತಿಗತಿಗಳನ್ನು ವಿವರಿಸಿ ಪತಿಗೆ ಮರು ಸಂದೇಶವನ್ನು ಕಳುಹಿಸಲು ಮೇಘವನ್ನು ಪ್ರಾರ್ಥಿಸುತ್ತಾಳೆ. ಇದರಲ್ಲಿಯೂ ಸಹ ಎರಡು ಸರ್ಗಗಳಿವೆ. ಮೇಘಪ್ರತಿ ಸಂದೇಶದಲ್ಲಿ ಯಕ್ಷಿಣಿಯ ವ್ಯಕ್ತಿತ್ವದ ಸೂಕ್ಷ್ಮ ಒಳನೋಟಗಳನ್ನು ಕಾಣಬಹುದು.

ಈ ಮೇಘ ಸಂದೇಶ ಹಾಗೂ ಮೇಘಪ್ರತಿ ಸಂದೇಶಗಳಲ್ಲಿ ಅನೇಕ ಸಾಮ್ಯಾಂಶಳನ್ನು ಗುರುತುತಿಸಬಹುದು. ಅವುಗಳಲ್ಲಿ ಒಂದನ್ನು ಇಲ್ಲಿ ಉದಾಹರಿಸಲಾಗಿದೆ.

ಮೇಘ ಸಂದೇಶ

ವಕ್ರಂ ಪಂಥಾಯದಪಿ ಭವತಃ ಪ್ರಸ್ತಿತಸ್ಯೋತ್ರರಾಶಾಂ

.... ಲೋಲಾಪಾಂಗ್ವೆರ್ಯದಿ ನ ರಮಸೇಲೋಚನ್ಯೆ: ವಂಚಿತೋಸಿ ॥ (೦೬)

ಉತ್ತರ ದಿಕ್ಕಿಗೆ ಹೊರಟಿರುವ ನಿನಗೆ ಸ್ವಲ್ಪ ಅಡ್ಡದಾರಿಯಾದರೂ, ಉಜ್ಜಯಿನೀ ಪಟ್ಟಣದ ಅರಮನೆಗಳ ಉಪ್ಪರಿಗೆಗಳ ಪರಿಚಯವನ್ನು ನೀನು ತಪ್ಪಿಸಿಕೊಳ್ಳಬೇಡ. ಅಲ್ಲಿ ಬೆಳ್ಳಿಮಿಂಚುಗಳ ಬೆಳಕಿನಿಂದ ಬೆದರಿದ ಪುರಸ್ತ್ರೀಯ ನಡುಗುವ ಕಡೆಗಣ್ಣೋಟಗಳ ಸೊಬಗನ್ನು ನೀನು ಸವಿಯದಿದ್ದರೆ ನಿನಗೆ ಕಣ್ಣಿದ್ದು ವ್ಯರ್ಥವಾದೀತು. (೦೬)

ಮೇಘಪ್ರತಿ ಸಂದೇಶ

ಮಾ ಸ್ಮ ತ್ಯಾಕ್ಷೀ : ವಿಜಯನಗರಂ ಮಾಧವಾಚಾರ್ಯ ವರ್ಯೋ

......................................ವೇದಭಾಷ್ಯಂ ವ್ಯತಾನೀತ್॥(೦೭)

ವಿಜಯನಗರವನ್ನು ಮಾತ್ರ ನೋಡಲು ಮರೆಯಬೇಡ. ಪ್ರಾಚೀನ ಭಾರತದಲ್ಲಿ ಕಲೆ, ಸಂಸ್ಕೃತಿ, ಸಾಹಿತ್ಯ, ಸಂಗೀತ, ವ್ಯಾಪಾರ, ವಾಣಿಜ್ಯಗಳ ಕೇಂದ್ರವಾಗಿದ್ದ ನಗರ ಉಜ್ಜಯಿನಿ. ಮಧ್ಯಯುಗದ ದಕ್ಷಿಣ ಭಾರತದಲ್ಲಿ ಈ ಎಲ್ಲಾ ಗುಣಗಳನ್ನು ಮೈಗೂಡಿಸಿ ಕೊಂಡು ಜಗತ್ ಪ್ರಸಿದ್ಧವಾದುದು ವಿಜಯನಗರ. ಇಂಥ ನಗರಕ್ಕೆ ಹೋಗು ನೋಡಬೇಕಷ್ಟಿದೆ ಎಂದು ಹೇಳಿರುವುದು ಸರಿಯೇ. ಏಕೆಂದರೆ ದಾರಿ ಬಳಸಾದರೂ ಪರವಾಗಿಲ್ಲ. ಉಜ್ಜಯನಿಯನ್ನು ನೋಡದೇ ಹೋಗಬೇಡ ಎಂಬುದಕ್ಕೆ ಇದು ಉತ್ತರವಾಗಿದೆ.

ಒಂದನೆಯ ಶತಮಾನದ ಕಾಳಿದಾಸನು ತನ್ನ ಮೇಘಸಂದೇಶದಲ್ಲಿ ಚಿತ್ರಿಸಿದ ಭಾರತೀಯ ಸಂಸ್ಕೃತಿಯ ಎಲ್ಲಾ ಮೌಲ್ಯ ಪರಂಪರೆಗಳನ್ನು ೧೯ನೆಯ ಶತಮಾನದ ರಾಮಶಾಸ್ತ್ರಿಗಳು ಮೇಘ ಪ್ರತಿಸಂದೇಶದಲ್ಲಿ ಪ್ರತಿಬಿಂಬತವಾಗಿದೆ. ಕಾಳಿದಾಸನು ಉಜ್ಜಯಿನಿ, ಉತ್ತರ ಭಾರತದ ವರ್ಣನೆಗಳನ್ನು ತನ್ನ ಕೃತಿಯಲ್ಲಿ ವರ್ಣಿಸಿದರೆ, ಶಾಸ್ತ್ರಿಗಳು ಮೇಘ ಪ್ರತಿಸಂದೇಶದಲ್ಲಿ ದಕ್ಷಿಣ ಭಾರತ ಹಾಗೂ ಕರ್ನಾಟಕದ ಪ್ರಕೃತಿ ಪರಂಪರೆಗಳನ್ನು ಚಿತ್ರಿಸಿದ್ದಾರೆ.

'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂಬುದನ್ನು ಈ ಕವಿವರ್ಯರು ತಮ್ಮ ಜನ್ಮಭೂಮಿಯ ಬಗ್ಗೆ ಅತ್ಯಾದರ ಗೌರವ ಪ್ರೀತಿಗಳನ್ನು ತಮ್ಮ ಕಾವ್ಯಗಳಲ್ಲಿ ಬಣ್ಣಿಸಿದ್ದಾರೆ. ಈ ಎರಡು ಕಾವ್ಯಗಳಲ್ಲಿ ಮಾನವನ ದಾಂಪತ್ಯ ಜೀವನದ ಒಂದು ಮನೋಜ್ಞ ಚಿತ್ರಣವೂ ಮೂಡಿಬಂದಿದೆ.

ಲೌಕಿಕ ಜೀವನದಲ್ಲಿ ಸಂದೇಶಗಳ, ಸೇವಕರ ಸಹಾಯಗಳು ದಿನನಿತ್ಯದ ಬದುಕಿನಲ್ಲಿ ಅನಿವಾರ್ಯ. ಇದು ತಲತಲಾಂತರದಿಂದ ನಡೆದು ಬಂದ ಪದ್ಧತಿ ಯಾಗಿದೆ. ಆದರೆ ಕಾಲ ಕಳೆದಂತೆ ಕಾಲಕ್ಕನುಗುಣವಾಗಿ ಸಂದೇಶಗಳನ್ನು ಕಳುಹಿಸುವ ಅಥವಾ ಸೇವಕರ ಸೇವೆ ಪಡೆಯುವಲ್ಲಿಯೂ ಬಹಳ ಬದಲಾವಣೆಗಳಾಗಿವೆ. ಮೊದಲು ಸಂದೇಶಗಳು ಪಕ್ಷಿಗಳು, ಮಾನವನ ಸಹಾಯದಿಂದ, ಅಂಚೆ, ಪತ್ರದ್ವಾರಾ, ಟೆಲಿಗ್ರಾಂ, ದೂರವಾಣಿಗಳ ಸಹಾಯಗಳಿಂದ ಕಳುಹಿಸುವ ಪದ್ಧತಿಯೂ ಇತ್ತು ಹಾಗೂ ಈಗಲೂ ಇದೆ. ಆದರೆ ಇತ್ತಿಚೆಗೆ ಇವುಗಳ ಸ್ಥಾನವನ್ನು ಮೊಬೈಲ್‌ಗಳು ಆಕ್ರಮಿಸಿವೆ ಎನ್ನಬಹುದು. ಕೆಲವೇ ನಿಮಿಷಗಳಲ್ಲಿ ವಿಶ್ವವನ್ನೇ ಸಂಪರ್ಕಿಸಬಹುದು.

ಇಲ್ಲವೆ ಸಂದೇಶಗಳನ್ನು ಕಳುಹಿಸಬಹುದಾಗಿದೆ. ಇದಕ್ಕಿಂತಲೂ ಹೆಚ್ಚಿನ ಕ್ರಾಂತಿಕಾರಿ ಬದಲಾವಣೆಗಳನ್ನು ಮುಂದಿನ ದಿನಗಳಲ್ಲಿ ನಿರೀಕ್ಷಿಸಬಹುದೆ? ಎಂಬ ಪ್ರಶ್ನೆಗೆ ಉತ್ತರವಿದೆಯೇ ಎನ್ನುವುದನ್ನು ಕಾದು ನೋಡಬೇಕಾಗಿದೆ.

ಅಡಿಟಿಪ್ಪಣಿಗಳು

೧) ಋಗ್ವೇದ – ಮಂಡಲ – ೫, ಅನುವಾಕ – ೬ –ಸೂಕ್ತ – ೧೫.

೨) ವಾಲ್ಮೀಕಿ ರಾಮಾಯಣ – ಸುಂದರಕಾಂಡ – ಸರ್ಗ ೩೪,೩೫,೩೬ ಪುಟ ೪೧–೪೫.

೩) ಮಹಾಭಾರತ ವನಪರ್ವ – ಅಧ್ಯಾಯ – ೫೨–೭೯ ಪುಟ ೪೭೧–೫೦೧ (ಮೂಲಕೃತಿ)

೪) ಮೇಘಧೂತ – ಉತ್ತರ ಮೇಘ ಶ್ಲೋಕ – ೪೦ – ಪುಟ ೨೨೩ (ಅಂಕಿತ ಪ್ರಕಾಶನ ೨೦೦೫)

೫) ಪೂರ್ವಮೇಘ – ಶ್ಲೋಕ – ೫ ಪುಟ – ೫ (Meghaduta of Kalidasa - Author - R.D. Karmakar) (Third Edition - Delhi - 2001)

೬) ಮೇಘ ಸಂದೇಶ – ಶ್ಲೋಕ – ೨೭ – ಪುಟ – ೨೨

೭) ಮೇಘಪ್ರತಿಸಂದೇಶ – ಶ್ಲೋಕ – ೫೨ – ಪುಟ –೪೮

□

೧೦. ಎರಡು ಟಿಪ್ಪಣಿಗಳು

೧. 'ದ್ರುತಪೂರ್ವವಿಲಂಬಿತಂ'

• ಪ್ರೊ. ಸಿ. ಮಹಾದೇವಪ್ಪ

ನಾಗವರ್ಮನ ಛಂದೋಂಬುಧಿಯ ಸಮವೃತ್ತಪ್ರಕರಣದಲ್ಲಿರುವ ಈ ವೃತ್ತಲಕ್ಷಣ ೧೮೭೫ರ ಮಂಗಳೂರು ಸಂಪಾದಿತ ಗ್ರಂಥದ ಪಾಠವಿದು:

ನ–ಭ–ಭ–ರಂಗಳವೊಂದಿರೆ ಪಾದದೊಳ್
ಶುಭಕರಂ ಯತಿ ನಿಲ್ತಿರೆ ರಂಧದೊಳ್ ।
ಪ್ರಭು – ಕವೀಂದ್ರ – ಸಹಾಯದಿನಾದುದಿಂ
ತಿಭ–ಗತೀ, ದ್ರುತಪೂರ್ವವಿಲಂಬಿತಂ ॥೧೪೭॥

ಇದೇ ವೃತ್ತ ೧೯೭೫ರ ಡಿ.ವಿ.ಕೆ. ಮೂರ್ತಿ ಪ್ರಕಟಣೆಯ ಶ್ರೀ ಕುಕ್ಕಿಲ ಕೃಷ್ಣಭಟ್ಟರ ಸಂಪಾದಿತ ಛಂದೋಂಬುಧಿಯಲ್ಲಿ ವೃತ್ತದ ಹಣೆ ಹೆಸರ ಸಮೇತ ವೃತ್ತಲಕ್ಷಣ ಪಾಠ ಇಂತಿದೆ :

"ದ್ರುತವಿಲಂಬಿತಂ– ನಭಭರ–೯"

"ನಭಭ, ರಂಗಳು, ಮೊಂದಿರೆ–ಪಾದದೊಳ್।
ಶುಭಕ,ರಂ ಯತಿ, ನಿಲ್ತಿರೆ – ರಂಧ್ರದೊಳ್ ॥
ಪ್ರಭುಕ, ವೀಂದ್ರ, ಸಹಾಯುದೊ–ಳಾದುದಿಂ।
ತಿಭಗ,ತಿ ದ್ರುತ, ಪೂರ್ವವಿ, ಲಂಬಿತಂ ॥ ೨ – ೭೩ ॥

ಈ ಮೇಲಿನ ವೃತ್ತಗಳ ಮೂರನೆ ಪಾದದ ಗೀರು ಹಾಕಿರುವ ಪಾಠಗಳ ಅರ್ಥದಲ್ಲಿ ಯಾವ ವ್ಯತ್ಯಾಸವೂ ಇಲ್ಲವೆಂಬುದು ಎಲ್ಲರಿಗೂ ತಿಳಿದದ್ದೆ. ಆದರೆ ೨೦೦೭ರ ಪ್ರಿಂಟ್‌ಪಾರ್ಕ್ ಮುದ್ರಣದಲ್ಲಿ ಮೇಲಣ ಮೂರನೆ ಪಾದ "ಪ್ರಭುಕವೀಂದ್ರ 'ಸಹಾಯ ನಿನಾದುದಿಂ' ಎಂದು ಮಾರ್ಪಟ್ಟಿರುವುದನ್ನು ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಮತ್ತು ಅಧ್ಯಯನಕಾರರಿಗೆ ಎಂದ ಜನಪ್ರಿಯವೃತ್ತಿಯಲ್ಲಿ ಅವರೆಲ್ಲರೂ ತಪ್ಪದೆ ಗಮನಿಸ ಬಹುದು. ಅಷ್ಟೇ ಅಲ್ಲ. ಈ ವೃತ್ತದ ಸಂಬಂಧವಾಗಿ ಗ್ರಂಥಸಂಪಾದಕರಾದ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರು ಮಾಡಿರುವ ವಿವರಣೆ ವಿದ್ವಾಂಸರ ಮನಸ್ಸಿಗೆ ಬಹು ವ್ಯಾಕುಲವನ್ನುಂಟು ಮಾಡುತ್ತದೆ. ನೋಡಿ : "ಗಜಮನೆ, ಪಾದದಲ್ಲಿ ನಗಣ ಭಗಣ

ಭಗಣ ರಗಣಗಳು ಸೇರಿರಲು, ಯತಿ ರಂಧ್ರದಲ್ಲಿ (೯ನೆಯ ಅಕ್ಷರಸ್ಥಾನದಲ್ಲಿ) ಶುಭಪ್ರದವಾಗಿ ನಿಂತಿರಲು, ಹೀಗೆ ಪ್ರಭುಗಳ ಕವಿಶ್ರೇಷ್ಠರ ಸಹಾಯಕನಾದ ನಾಗವರ್ಮನಿಂದ ದ್ರುತ ಎಂಬ ಮಾತು ಹಿಂದೆ ಬರುವ ವಿಲಂಬಿತ (ದ್ರುತ ವಿಲಂಬಿತ)ಎಂಬ ವೃತ್ತವಾಯಿತು. 'ಪ್ರಭುಕವೀಂದ್ರ' ಸಮಸ್ತಪದದ ಅರ್ಥವನ್ನು ಪ್ರಭುಗಳ, ಕವಿಶ್ರೇಷ್ಠರ ಸಹಾಯಕನೆಂದು ನಾಗವರ್ಮನು ತನ್ನನ್ನು ಹೆಮ್ಮೆಪಟ್ಟು ಕೊಂಡಿರುವನೆಂಬ ವಿವರಣೆ ನಾಗವರ್ಮನ ವ್ಯಕ್ತಿತ್ವಕ್ಕೇ ಕುಂದು ತರುವಂಥದು. ರ. ಕಿಟ್ಟೆಲ ಮತ್ತು ಕುಕ್ಕಿಲ ಕೃಷ್ಣಭಟ್ಟರ 'ಪ್ರಭುಕವೀಂದ್ರ' ಏಕವಚನದ ಪಾಠದ ಆಶಯವನ್ನು ಇಲ್ಲಿ ಬಹುವಚನಕ್ಕೆ ತಿರುಚಿ ಅರ್ಥೈಸಿರುವುದು ಎದ್ದುಕಾಣುತ್ತದೆ. ಈ ವಿವರಣೆ ಅಧ್ಯಾಪಕರ ಮಾತು ಬೇಡ, ಜಾಣರಾದ ವಿದ್ಯಾರ್ಥಿಗಳ ಮತಿಗೆ ಹಿಡಿದ ಕೈಗನ್ನಡಿಯೆ?

'ಈ ವೃತ್ತವನ್ನು ನಾಗವರ್ಮನೇ ಸ್ಪಷ್ಟವಾಗಿ "ದ್ರುತಪೂರ್ವವಿಲಂಬಿತ" ಎಂದಿರುವ ಹೆಸರ ನಡುವಣ 'ಪೂರ್ವ' ಪದವನ್ನು ಪ್ರಾಚೀನರಾಗಲಿ, ಆಧುನಿಕರಾಗಲಿ ಏಕೆ ಲೋಪಗೊಳಿಸಿದರು ? ಅಂಥ ದೋಷಯುಕ್ತಪಾಠವನ್ನು ಉಳಿಸಿಕೊಂಡದ್ದಕ್ಕೆ ತಮ್ಮ ನವೀನಗ್ರಂಥಸಂಪಾದನ ಗ್ರಂಥದಲ್ಲಿ ಅದರ ಸಂಪಾದಕರು ಎಡೆಕೊಡಬಹುದೆ? ಹಿಂದೆ ಆದ ತಪ್ಪನ್ನು ಸರಿಯೆಂದು "ಅಕ್ರಮವನ್ನು ಸಕ್ರಮಗೊಳಿಸುವ ನೀತಿ ಸಾಹಿತ್ಯಕ್ಷೇತ್ರಕ್ಕೆ, ಪಂಡಿತವರ್ಗಕ್ಕೆ, ಸರಸ್ವತಿಗೆ ಸಮ್ಮತವೆ? ವಸ್ತುನಿಷ್ಠ ಗ್ರಂಥಸಂಪಾದನೆ ಶಾಸ್ತ್ರೀಯ, ಹಾಗಲ್ಲದಲದುದು ಅಶಾಸ್ತ್ರೀಯ ತಾನೆ? ಈ ವೃತ್ತ ರಚನೆಯಲ್ಲಿ ಸಂಬೋಧನೆಯಿಲ್ಲ; ಇದ್ದಿದ್ದರೆ ಅರಿ, ತಿಳಿ ಕೇಳ ಇತ್ಯಾದಿ ಕ್ರಿಯಾಪದ ಗಳಿರಬೇಕಾ ಗಿದ್ದಿತು. ಹಾಗಿರುವಾಗ ಕಿಟ್ಟೆಲರ ಎಣಿಕೆಯಲ್ಲಿ 'ತಿಭ'ಗತೀ (ಇಭ ಮತ್ತು ಗತೀ) ಎಂದೆ ಬಿಡಿಸಿಕೊಂಡಿರುವ ಸಮಸ್ತಪದವೇ ತಿಭಗತೀ (ಇಭಗತೀ) ಪದ. ಸಮಸ್ತಪದದ ಅರ್ಥದಲ್ಲಿ ಅದು ಬಳಕೆಗೊಂಡಿಲ್ಲ. ಇಲ್ಲಿ ಸಾಂಕೇತಿಕಾರ್ಥದಲ್ಲಿ ವ್ಯಕ್ತಿನಾಮವಾಗಿ ಬಳಸಿರುವ ಕಲ್ಪಿತನಾಮವೇ 'ಇಭ'ವೆಂಬುದು. ಗಜ ಎಂಬುದು ಶಬ್ದಾರ್ಥ. ಅದರ ಪರ್ಯಾಯಾರ್ಥಕ 'ನಾಗ'ಪದ ನಾಗವರ್ಮ ವ್ಯಕ್ತಿನಾಮಪ್ರತೀಕ. ಗತೀ ಶಬ್ದ ಜ್ಞಾನರ್ಥಪ್ರಯೋಗವೇ ಹೊರತು ಕೇವಲ ನಡೆಯೆಂಬ ಕ್ರಿಯಾರ್ಥದಲ್ಲಿ ಬಳಸಿದ ಪದವಲ್ಲ. ಸಂಶೋಧಕನಿರಲಿ ಸಂಪಾದಕನಾದವನಿಗೆ ಯಾವ ಧರ್ಮೀಯ ನಾದವನ ಗ್ರಂಥವನ್ನು ತಾನು ಸಂಪಾದಿಸುತ್ತಿದ್ದೇನೆ ಎಂಬುದರ ಸಾಮಾನ್ಯ ತಿಳಿವಳಿಕೆ ಇದ್ದೇ ಇರಬೇಕು. ಇಲ್ಲದಿದ್ದರೆ ಅರ್ಥ ಅನರ್ಥವಾಗುವುದು ಸಹಜ. ಮೇಲಣ ವೃತ್ತದಲ್ಲಿ ಪ್ರಯೋಗವಾಗಿರುವ 'ಪೂರ್ವ' ಎಂಬ ಪದ ನಾಗವರ್ಮನ ಹುಟ್ಟು ಧರ್ಮವಾದ ಜೈನಧರ್ಮದ ಪಾರಿಭಾಷಿಕ ಪದ. ತನ್ನ ತತ್ಕಾಲದ ಅಸ್ತಿತ್ವದ ಧರ್ಮ ಚಿಂತನೆಯ ಸೂಕ್ಷ್ಮವಿಚಾರವನ್ನು ನಾಗವರ್ಮನು ಇಲ್ಲಿ 'ಇಭಗತೀ' ಮತ್ತು 'ಪೂರ್ವವಿಲಂಬಿತ'ಗೂಢ ಪದಪ್ರಯೋಗಗಳಿಂದ ಪ್ರಕಟಿಸಿದ್ದಾನೆ. ಉದಯಾದಿತ್ಯ ಗುರುವಿನಿಂದ ತಾನು ಶಿವತತ್ತ್ವೋಪದೇಶವನ್ನು ಹೊಂದಿದ ಬಳಿಕ ಆ ತನ್ನ ಜೈನ ಮೂಲ ಧರ್ಮದಿಂದ ತಾನು ಹಿಂದೆ ಸರಿದವನೆಂಬ ಜ್ಞಾನವನ್ನು ಪ್ರಕಟಿಸಿರುವ ಪದವೆ

"ದ್ರುತಪೂರ್ವವಿಲಂಬಿತ" ಪದಪ್ರಯೋಗ. ಪ್ರಾಚೀನ ಜೈನಧರ್ಮವೆ ಪೂರ್ವಗತ ಧರ್ಮ. ಅದೆ 'ಪೂರ್ವ'ವೆಂದು ಬಳಕೆಗೊಂಡಪದವೆಂಬ ಅರಿವು ಗ್ರಂಥಸಂಪಾದಕ ನಿಗಿದ್ದ ಹೊರತು ಕಾವ್ಯ ಪ್ರಯೋಗ ಅರ್ಥವಾಗದು ಎಂಬುದಕ್ಕೆ ಮೇಲಣ ಡಾ॥ ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರ ವಿವರಣೆಯೇ ಸಾಕ್ಷಿ. ಶಾಸ್ತ್ರಗ್ರಂಥರಚನೆಯಲ್ಲಿ ನಾಗವರ್ಮನು ಅಭಿವ್ಯಕ್ತಪಡಿಸಿರುವ ಆತನ ಕವಿತಾಮಹತ್ವದ ಅರಿವು ಅವರಿಗೆ ಇದ್ದುದಕ್ಕೆ ಈವರೆಗೆ ಪ್ರಕಟಿತವಾಗಿರುವ ಅವರ ಛಂದೋಗ್ರಂಥಗಳಲ್ಲಿ ಮಾಹಿತಿ ಇದ್ದಂತಿಲ್ಲ.

ನಿರಹಂಭಾವದ ನಿರ್ಮಮತೆಯ ಸತ್ಯಶುದ್ಧ ಕಾಯಕ
ಸಾಹಿತ್ಯಜ್ಞರಾದ ನಮ್ಮದಾಗಲಿ
ಸದ್ಬುದ್ಧಿ ಸತ್ಯಸಾಧನೆಗೆ ಹಾದಿ
ಓಂ ತತ್ ಸತ್

□

೨. ಸಯ್ಯಡಿಯ ಪಿನಾಕಿ

ಪ್ರಭು ಉದಯಾದಿತ್ಯನೋ ? ಪ್ರಧಾನಿ ನಾಗವರ್ಮನೋ?

ನಾಗವರ್ಮನ ಛಂದೋಂಬುಧಿ ಗ್ರಂಥಾರಂಭದ ದೇವತಾಸ್ತುತಿ ಸಂಬಂಧವಾಗಿ ಮಾಡಿರುವ ಶಿವಸ್ತುತಿಯಲ್ಲಿ ಕವಿ 'ಸಯ್ಯಡಿಯ ಪಿನಾಕಿ'ಯ ವರವನ್ನು ಕೋರಿದ್ದಾನೆ. ಆ ಗೌರೀವಲ್ಲಭ ಪಿನಾಕಪಾಣಿಯೊಡನೆ ತನ್ನ ಪ್ರಭುವನ್ನು ಸಮೀಕರಿಸಿ ಆತನನ್ನು 'ಮಿಕ್ಕನಾಕಿ'ಯೆಂದು ವಿಶೇಷಿಸಿದ್ದಾನೆ. ಗ್ರಂಥದೊಳಗೆ ತನ್ನನ್ನು ನಾಕಿ, ನಾಕಿಗ, ನಾಗಾರ್ಯ ಎಂಬ ಸಂಕ್ಷಿಪ್ತ ಕಲ್ಪಿತನಾಮಗಳಿಂದಲೂ ಕರೆದುಕೊಂಡು ತನ್ನ ಪ್ರಭುವನ್ನು 'ಪಿನಾಕಿ' ಎಂದಿರುವುದನ್ನು ನೋಡಿ:

ಪಿನಾಕಿಯುಂ ನಾಯಕಿಯುಮೆಂದ ಪಾಂಗಿಂ
ಘನಸ್ತನೇ ಕೇಳಿದುಪೇಂದ್ರವಜ್ರಂ ॥ ೨ – ೬೨

ಸಯ್ಯಡಿಯ ಪಿನಾಕಿಯು ತನ್ನಿಂದ ಅನ್ನಪುರುಷನೆಂಬುದನ್ನು ಸೂಚಿಸುವುದಕ್ಕಾಗಿ 'ಮಿಕ್ಕ ನಾಕಿ' ಎಂಬ ಇಂಗಿತಾರ್ಥಕ ವಿಶೇಷಣದ ಪ್ರಯೋಗವಿರುವುದನ್ನು ಗಮನಿಸಬಹುದು. ಈ ಉಪೇಂದ್ರವಜ್ರ ವೃತ್ತದ ಲಕ್ಷಣನಿರೂಪಣೆಯಲ್ಲಿ ತಾವಿಬ್ಬರೂ ನಡಸಿದ ಪದಗತಿಯ ಗಣ ರಚನೆಯುಳ್ಳ, ವೃತ್ತವಿದೆಂದು ತಿಳಿಯಪಡಿಸಿದ್ದಾನೆ. ಶಿವನೊಡನೆ ಸಮಾವೇಶಗೊಂಡ ಮಿಕ್ಕ ನಾಕಿ ಸಯ್ಯಡಿಯ ಪಿನಾಕಿ ಕೂರ್ತು ನಮಗೀಗೆ ವರಂಗಳನುತ್ಸವಂಗಳಂ" ಎಂಬ ವರ್ಣನೆಯಲ್ಲಿ ನಾಕಿಯಾದ ತನಗೂ ತನ್ನಿಂದ ಪೂಜ್ಯ ಪುರುಷನಾದ ಪಿನಾಕಿರಾಜರಿಗೂ ಆ ಸಯ್ಯಡಿ ಊರ ದೇವನಾದ ಪಿನಾಕಿಪಾಣಿ ಶಿವನು ವರವನ್ನು ಕರುಣಿಸಲೆಂದು ಬೇಡಿದ್ದಾನೆ. ಆ ಪಿನಾಕಪಾಣಿಯ ಜೊತೆಗೆ ಪೆನ್ನಾಕಾರ ಪ್ರಭುವಾದ ಉದಯಾದಿತ್ಯ ಗುರುವೂ ತನಗೆ ವರವನ್ನು

ನೀಡಲೆಂದು ನಾಗವರ್ಮನು ಕೋರಿದ್ದಾನೆ. ೨೦೦೭ರ ಪ್ರಿಂಟ್ ಪಾರ್ಕ್ ಮುದ್ರಣದ ಛಂದೋಂಬುಧಿಯ ಪ್ರಸ್ತಾವನೆಯಲ್ಲಿ "ಪಿನಾಕಿ ಛಂದಃಸೂತ್ರಗಳ ಪಿಂಗಳನನ್ನೂ ನಾಕಿ ನಾಕಿಗ ಎಂಬವು ನಾಗವರ್ಮನನ್ನೂ ನಿರ್ದೇಶಿಸುವ ವ್ಯಕ್ತಿನಾಮಗಳು, ದಿಟ."- ಈ ಹೇಳಿಕೆ ಯಾರದೇ ಆಗಿರಲಿ ನಿರಾಧಾರವಾದದ್ದು. ಏಕೆಂದರೆ ಈಗಾಗಲೇ ಶಿವಸ್ತುತಿಯಲ್ಲಿ ಸಯ್ಯಡಿಯ ಪಿನಾಕಿಯ ವರವನ್ನು ನಮಗೆ ಅನುಗ್ರಹಿಸಲೆಂದು ಮಾಡಿರುವ ಪ್ರಾರ್ಥನೆ ಆ ಊರ ದೇವರಿಗೇ ಹೊರತು ಛಂದಸೂತ್ರಕಾರನಾದ ಪಿಂಗಳನಿಗಲ್ಲ ಎಂಬುದು ಖಚಿತ. ಆಕಾರಣ ಪಿನಾಕಿ ಶಿವನಾಗಲಿ, ನಾಗವರ್ಮನ ಪ್ರಭು ಪಿನಾಕಿಯಾಗಲಿ ಪಿಂಗಳನನ್ನು ನಿರ್ದೇಶಿಸುವ ವ್ಯಕ್ತಿನಾಮವಂತೂ ಅಲ್ಲವೆಂಬುದು ಸತ್ಯಸ್ಯ ಸತ್ಯ.

ಗುರ್ವಕ್ಷರವಾಗಿ ಪರಿಗಣಿಸಲ್ಪಡುವ ಸಂದರ್ಭಗಳು ಸಯ್ಯಡಿಯ ನಾಗವರ್ಮನಾದ ತನ್ನ ಒಪ್ಪಿಗೆ ಪಡೆದು ಆದುವುಗಳು ಎನ್ನುವಾಗ ನಾಗವರ್ಮನು ತನ್ನನ್ನು ಸಯ್ಯಡಿಯ ನಾಗವರ್ಮನೆಂದು ಕರೆದುಕೊಂಡಿದ್ದಾನೆ. ಆ ಊರಿನಿಂದ ಪ್ರಿಸಿದ್ಧನಾದ ನಾಗವರ್ಮನೆಂದು ಹೆಸರಿಸಿಕೊಂಡಿದ್ದಾನೆ. ಶ್ಲಿಷ್ಟಾರ್ಥದಿಂದ ತಾನು ನೇರ ನಡೆಯ ಋಜುಚಾರಿತ್ರವಂತನೆಂಬ ಆಂತರ್ಯವೂ ಅಡಗಿರುವುದು ಸಂಭವನೀಯ.

ಪ್ರಭುಕವೀಂದ್ರ ಸಹಾಯದೊಳಾದಿದಿಂ
ತಿಭಗತೀ ದ್ರುತಪೂರ್ವವಿಲಂಬಿತಂ ॥ ೨ - ೭೩

ತನ್ನ ಗ್ರಂಥರಚನೆಯಲ್ಲಿ ಪ್ರಭುಕವೀಂದ್ರನಿಂದ ಲಭ್ಯವಾದ ನೆರವನ್ನು ನಾಗವರ್ಮ ಇಲ್ಲಿ ಸ್ಮರಿಸಿದ್ದಾನೆ. ಛಂದೋವೃತ್ತದ ಹೆಸರಿನ ಅರ್ಥವೇ ದ್ರುತಪೂರ್ವ ಅರ್ಥಾತ್ ಜೈನ ಪುರ್ವಗತ ಧರ್ಮದಿಂದ ಹಿಂದೆಸರಿದ ಸಂಗತಿಯೇ ಇಭಗತಿ ಎಂದರೆ ನಾಗವರ್ಮನ ಶಿವಜ್ಞಾನಾಚರಣೆಯ ಆತ್ಮಾವಿಷ್ಕಾರವಾಗಿದೆ. ಆ ಪ್ರಭುಕವೀಂದ್ರನನ್ನೇ ನಾಗವರ್ಮನು ಸುಕವೀಂದ್ರವಲ್ಲಭ ಅರ್ಥಾತ್ ಹಂಸರಾಜನಾದ ಉದಯಾದಿತ್ಯ, ವಿಷ್ಣುವಿನ ಅಂಶವುಳ್ಳ, ಪೃಥ್ವೀಪತಿಯೆಂದು ನಿರೂಪಿಸಿದ್ದಾನೆ. ಪ್ರಾಚೀನರ ಇಂದ್ರವಂಶ ವೃತ್ತದ ನಾಮಸಾದೃಶ್ಯ ಮಾಡಿದವನು ತನ್ನ ಪ್ರಭುವಾದ ಸೂರ್ಯರಾಜ. ಇನೋದಯ ಇಲ್ಲವೆ ಉದಯಾದಿತ್ಯನೆಂದು ನಾಗವರ್ಮನೇ ಖಚಿತಪಡಿಸಿರುವ ಬಿಚ್ಚು ನುಡಿಗಳು:

ಶ್ರೀಮಾನಿನೀ ಸಯ್ಯಡಿಯಾತನಿಂತಿದಂ
ನಾಮೋಪಮಂ ಮಾಡಿದನಿಂದ್ರವಂಶಮಂ ॥

ಈ ಪ್ರಾಚೀನ ವೃತ್ತಲಕ್ಷಣವನ್ನು ನಿರೂಪಿಸುತ್ತ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು "ಈ ಸಯ್ಯಡಿಯಾತ (ನಾಗವರ್ಮ)" ಎಂಬ ಅವರ ವಿವರಣೆ ಹಾಗೂ 'ಶ್ರೀದೇವಿಯೆ' ಎಂಬ ಕಲ್ಪಿತ ಸಂಬೋಧನೋಕ್ತಿಯನ್ನು ಕವಿಯ 'ಶ್ರೀಮಾನಿನೀ' ಸಮಸ್ತಪದದ ವಿಗ್ರಹ ವಾಕ್ಯವು ದೂರೀಕರಿಸಿ ಅಲ್ಲಗಳೆಯುವ ಬಗೆ : 'ಶ್ರೀಮಾನ್ + ಇನ > ಶ್ರೀಮಾನಿನ + 'ಈ > 'ಶ್ರೀ ಮಾನಿನೀ ಸಯ್ಯಡಿಯಾತ.' ವೃತ್ತಸ್ಥ ವಾಕ್ಯದಲ್ಲಿ 'ಸಯ್ಯಡಿಯಾತ ಕರ್ತೃಪದ, ಅದರ ವಿಶೇಷಣವಾಗಿ ಬಂದಿರುವ ಪದವನ್ನು

ಸಂಬೋಧನಾರ್ಥಕ ನಾಮವಾಚಿಯಾಗಿಸಿ 'ಶ್ರೀದೇವಿಯೆ' ಎಂದು ಅರ್ಥೈಸಿರುವುದೇ ಅಸಂಗತ, ಅನನ್ವಯ ಎಂಬುದನ್ನು ನಾಗವರ್ಮನ ಮೇಲಣ ಶ್ರೀಮಾನಿನೀ ಪದದ ಮಾರ್ಮಿಕ ಗೂಢಾರ್ಥ ಗರ್ಭಿತ ಪದ ಚ್ಛೇದವೈವಿಧ್ಯವೇ ದಿಗ್ದರ್ಶಿಸಿದೆ. ಆಂಗ್ಲ ಭಾಷೆಯ ನುಡಿಯಲ್ಲಿ ಅದರ ಅರ್ಥವಿದು: 'ಇನ' ಶಬ್ದಕ್ಕೆ His mejesty the sun king is one who hails from sayyadi Lord, Master, King, Mejesty, bold, powerful, ಅರ್ಥಗಳಿದ್ದು ಪ್ರಕೃತ ಸುಸಂಬಂಧವಾಗಿ ಹೊಂದಿಕೆಯಾಗಿರುವುದು ಸುವಿದಿತ. ಆದ್ದರಿಂದ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರು ನಿರೂಪಿಸಿರುವಂತೆ "ಸಯ್ಯಡಿಯ ಪಿನಾಕಿ ಅವರೇ ಕಾಣಿಸಿರುವ ಆವರಣದೊಳಗಣ (ನಾಗವರ್ಮ)ನಲ್ಲ, ಅವನ ದೊರೆ ಪೆನ್ನೆ ಪರಿ ನಾಡ ಪ್ರಭು 'ಪಿನಾಕಿ' ಕಲ್ಪಿತನಾಮಕ ಉದಯಾದಿತ್ಯನೇ ಸಯ್ಯಡಿಯ ಪಿನಾಕಿಯೆಂದು ವಿದ್ವಾಂಸರು ಬಲ್ಲರು ಎಂಬ ಲೇಖ ಹೀಗೆ ಅನ್ಯರ ಅನಗತ್ಯ ಅನಿಸಿಕೆಗೆ ಪೂರ್ಣವಿರಾಮ ಚಿಹ್ನೆಹಾಕಿದೆ.

– ಇತಿ ಓಂ –

□

೧೧. ಕವಿ ವೆಂಕಟೇಶ

• ಪ್ರೊ. ಕೆ.ಎಸ್. ಮಧುಸೂದನ

"ಈತನು ಹಾಲಾಸ್ಯ ಮಹಾತ್ಮ್ಯವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ. ಪೌರಕುತ್ಸಗೋತ್ರದವನು. ಆಪಸ್ತಂಭ ಸೂತ್ರದವನು, ಬೃಹಚ್ಚರಣ ಸಂಪ್ರದಾಯ ದವನು. ಇವನ ಸ್ಥಳ ಗುಮ್ಮಳಾಪುರ"[೧] ಕನ್ನಡ ಅಧ್ಯಯನ ಸಂಸ್ಥೆಯ (ಮೈಸೂರು ವಿಶ್ವವಿದ್ಯಾನಿಲಯ) ಕೆ-೨೫೫ ನೆಯ ಸಂಖ್ಯೆಯ ೧೪೯ ಗರಿಗಳಿರುವ ಓಲೆಗರಿಯ ಗಿರಿಜಾಕಲ್ಯಾಣದ ಪ್ರತಿಯಲ್ಲಿ "ದುರ್ಮತಿ ಸಂವತ್ಸರದ ಭಾದ್ರಪದ ಶುದ್ಧ ೧೩ ಗುರುವಾರ ಗುಮ್ಮಳಾಪುರದ ಶಾನಭಾಗ ತಿಮ್ಮಣ್ಣನ ಮಗ ವೆಂಕಣ್ಣ ಬರೆದ ಗಿರಿಜಾಕಲ್ಯಾಣ ಪುಸ್ತಕಕ್ಕೆ ಜಯಮಂಗಳ ಮಹಾ"[೨] ಎಂದಿರುವುದರಿಂದ ಈ ಕಾಲ ೧೦-೦೯-೧೭೪೧ನೆಯ ಗುರುವಾರಕ್ಕೆ ಸಲ್ಲುತ್ತದೆ. ಕವಿಚರಿತೆಕಾರರು ಇವನ ಕಾಲವನ್ನು ಸು. ೧೭೪೦ ಎಂದು ಸೂಚಿಸಿದ್ದಾರೆ. ಇವನು ರುದ್ರಭಟ್ಟನ ಜಗನ್ನಾಥ ವಿಜಯವನ್ನು ಪ್ರತಿಮಾಡಿರುತ್ತಾನೆ. ಅದರ ಕಾಲ ೧೭೪೨ ಅದರಲ್ಲಿ ಕವಿಯು

'ವರಗುಮ್ಮಳಾಪುರಸ್ಥಿತ
ನುರುವೇಂಕಟಶರ್ಮನಧಿಕ ಸಂತಸದಿಂದಂ
ಬರೆದಂ ಬುಧಜನರಿಂತಿದ
ಪರೀಕ್ಷಿಸಿಯೆ ತಪ್ಪ ತಿದ್ದಿ ಮೆರೆಯಿಂ ಗುಣಮಂ

ಎಂದು ತಾನು 'ವರಗುಮ್ಮಳಾಪುರದ'ವನೆಂದು ಹೇಳಿಕೊಂಡಿದ್ದಾನೆ. ಅಲ್ಲೇ ಇನ್ನೊಂದೆಡೆ

"ಕರಮೊಕಾವ್ಯಮ ಕುತ್ಸಗೋತ್ರಭವನಾಪಸ್ತಂಬ ಸೂತ್ರಂ ಬೃಹ
ಚ್ಚರಣಾಲಂಕರಣಂ ಶಿವಾಂಘ್ರಿ ವಿಲಸತ್ಪಾನೀಯ ಸಂಜಾತಸಂ
ಚರಣೋದ್ಭಾಸಿತಬಂಭರಾಯಿತಮತಿ ಶ್ರೀವೇಂಕಟಾಖ್ಯಂ ಕರಂ
ಬರೆದಂ ದುಂದುಭಿವತ್ಸರಾಶ್ವಯುಜಮಾಸಂ ಪೂರ್ಣ್ಬಿರಲ್ಕಾದಿನಂ"

ಎಂದಿರುವುದರಿಂದ ಅವನು ಪೌರಕುತ್ಸಗೋತ್ರದ ಆಪಸ್ತಂಭಸೂತ್ರದ ಬೃಹಚ್ಚರಣ ಬ್ರಾಹ್ಮಣನೆಂಬುದು ಖಚಿತವಾಗುತ್ತದೆ. ಜಗನ್ನಾಥ ವಿಜಯದ ಪ್ರತಿಮಾಡುವಾಗ ಅದರಲ್ಲಿ ಅವನ ಮೂರು ಮಕ್ಕಳ ಜಾತಕಗಳನ್ನೂ ಬರೆದಿದ್ದಾನೆ. ಅವರ ಜನ್ಮ ಕಾಲ

ಕ್ರಿ.ಶ. ೧೭೩೬, ಕ್ರಿ.ಶ. ೧೭೪೪ ಹಾಗೂ ೧೭೫೨ ಆಗಿದೆ.[೩]

ಇವನ ತಂದೆ ತಿಮ್ಮಾರ್ಯ ಹಾಗೂ ತಾಯಿ ತಿಮ್ಮಾಂಬೆ ಇವನ ಗುರು ಯೋಗಿಚಂದ್ರ ಆಶ್ರಯದಾತ ಮಹಿಶೂರ ಸೇನಾನಿ ಕಳಲೆ ನಂಜರಾಜ. ಅವನ ಆಜ್ಞಾನುಸಾರ 'ಹಾಲಾಸ್ಯ ಮಾಹಾತ್ಮ್ಯ'ವನ್ನು ಬರೆದನು.

ಇವನು ಹರಿಹರನ ಗಿರಿಜಾಕಲ್ಯಾಣದ ಓಲೆಗರಿ ಪ್ರತಿಯನ್ನೂ, ರುದ್ರಭಟ್ಟನ ಜಗನ್ನಾಥ ವಿಜಯದ ಓಲೆಗರಿ ಪ್ರತಿಯನ್ನೂ ಮಾಡಿರುವುದಲ್ಲದೆ, 'ಹಾಲಾಸ್ಯ ಮಾಹಾತ್ಮ್ಯ'ದ ಜತೆಗೆ ರುದ್ರಭಟ್ಟನ ಜಗನ್ನಾಥ ವಿಜಯದ ಮಂಗಳ ಶ್ಲೋಕಗಳಿಗೆ 'ಜಗನ್ನಾಥ ವಿಜಯ ಪಂಚಪಾಷಾಣವ್ಯಾಖ್ಯಾನಂ' ಎಂಬ ವ್ಯಾಖ್ಯಾನವನ್ನು ಸಂಸ್ಕೃತದಲ್ಲಿ ರಚಿಸಿ ಉಭಯಭಾಷಾ ಕವಿ ಎನ್ನಿಸಿಕೊಂಡಿದ್ದಾನೆ. ಕವಿಚರಿತೆಕಾರರಿಗೆ ಸಿಕ್ಕಿದ್ದ 'ಹಾಲಾಸ್ಯಮಾಹಾತ್ಮ್ಯ'ದ ಪ್ರತಿ ಅಸಮಗ್ರ. ಆದರೆ ಈಗ ಈ ಕವಿಯ 'ಹಾಲಾಸ್ಯ ಮಾಹಾತ್ಮ್ಯದ' ಓಲೆಗರಿ ಪ್ರತಿಗಳಾಗಲಿ ಕಾಗದದ ಪ್ರತಿಗಳಾಗಲೀ ಎಲ್ಲಿಯೂ ಲಭ್ಯವಿಲ್ಲ. ಈ ಕವಿ ವೆಂಕಟನಿಗೆ ಸಂಬಂಧಿಸಿದ ಒಂದು ಶಾಸನವೂ[೪] ಅವನ ಪೂರ್ವಜನೊಬ್ಬನಿಗೆ ಸಂಬಂಧಿಸಿದ ಒಂದು ತಾಮ್ರಪಟವೂ[೫] ಈಗ ಲಭ್ಯವಿದೆ. ಈ ತಾಮ್ರಪಟವನ್ನು ಕುರಿತು ಮೊದಲಿಗೆ ಡಾ|| ಶಿ.ಚೆ. ನಂದೀಮಠರು ೧೯೫೮ರಲ್ಲಿ 'ಗುಮ್ಮಳಾಪುರದ ದಾನ ಶಾಸನಗಳು'[೬] ಎಂಬ ಶೀರ್ಷಿಕೆಯಡಿ ಪ್ರಕಟಿಸಿದರು. ಶಾಸನವು ಗುಮ್ಮಳಾಪುಂದ ಬಳಿಯ ಹಳೆಊರಿನ ಬಳಿ ಇದ್ದು ಅದರ ಕಾಲ ೩೧-೦೧-೧೭೬೩ ಆಗಿದೆ. ಶ್ರೀಮನ್ಮ ಹೀಶೂರ ಇಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಹೊಸ ಊರ ರಾಮಪ್ಪ, ಚಿಕ್ಕಣ ಮಾಲೆಗಾರ ಹಾಗೂ ಕಳುಲೆ ನಂಜರಾಜ ವಡೆಯರು ಪೌರಕುತ್ಸಗೋತ್ಸದ ಆಪಸ್ತಂಭ ಸೂತ್ರದ ಯಜುಶ್ಯಾಖಾಧ್ಯಾಯಿಗಳಾದ ತಿಂಮಂಣಬುಟ್ಟರ ಪುತ್ರ ಕವಿ ವೆಂಕಟನಿಗೆ ಹೊಸೂರ ಸೀಮೆಗೆ ಸೇರಿದ ಗುಂಮಳಾಪುರದ ಹೋಬಳಿಗೆ ಸಲುವ ಉಳಮಾರನಹಳ್ಳಿ, ಹುರುಳಿಬೀರನಹಳ್ಳಿ, ಮಾರಳ್ಳಿ ಹಾಗೂ ಉಪ್ಪಾರನ ಹಳ್ಳಿಗಳನ್ನು ಸಹಿರಣ್ಯೋದಕದಾನ ಧಾರಾಪೂರ್ವಕವಾಗಿ ಧಾರೆಯನ್ನೆರೆದುಕೊಟ್ಟ ವಿಷಯ ಈ ಶಾಸನದಲ್ಲಿದೆ.

ತಾಮ್ರಪಟದಲ್ಲಿ 'ಶರಣ ವೀರಣ್ಣ ದೇವರು, ಶಾಂತದೇವರು, ಬಿಟ್ಟಮಂಡೆಯ ಪ್ರಭು, ಪ್ರಸಾದದೇವ ಮುಂತಾದ ಅಶೇಷ ವೀರಮಾಹೇಶ್ವರರು ಸ್ಥಳದ ಪ್ರಭುಗಳಾದ (ಸುಗುಟೂರು) ಚಿಕ್ಕರಾಯನಿಂದ ರಾಯಸಮುದ್ರ ಮತ್ತು ತಮ್ಮಾ ಪುರಗ್ರಾಮಗಳನ್ನು ಕಾಲಕ್ರಯಕ್ಕೆಕೊಂಡು ಪೌರಕುತ್ಸಗೋತ್ರದ ಆಪಸ್ತಂಭ ಸೂತ್ರದ ಯಜುಶ್ಯಾಖಾಧ್ಯಾಯಿ ಗಳಾದ ವೆಂಕಟೇಶ್ವರ ಉಪಾಧ್ಯಾ ಎಂಬವರಿಗೆ ನೀಡಿದ ಭೂದಾನಧರ್ಮ ಶಾಸನ'[೭] ಎಂಬರ್ಥ ಬರುವ ಒಕ್ಕಣೆ ಇದೆ. ಕರ್ನಾಟಕ ಕವಿಚರಿತೆಕಾರರು ನೋಡಿದ್ದ ಕವಿ ವೆಂಕಟೇಶನ ಹಾಲಾಸ್ಯ ಮಾಹಾತ್ಮ್ಯದ ಪ್ರತಿಯಲ್ಲಿ ಕವಿಕೊಟ್ಟಿರುವ ತನ್ನ ವಂಶ ಪರಂಪರೆ ಹೀಗಿದೆ: ಅರುಣಗಿರಿದೀಕ್ಷಿತ – ಗಿರೀಶ – ವೆಂಕಟಸೂರಿ (ಇವನೇ ತಾಮ್ರಪಟೋಕ್ತ ವೆಂಕಟೇಶ್ವರ ಉಪಾಧ್ಯಾ) – ಗಿರೀಶ – ತಿಮ್ಮಯಾರ್ಯ – ವೆಂಕಟೇಶ – ತಿಮ್ಮಾರ್ಯ– ಇವನ ಹೆಂಡತಿ ತಿಮ್ಮಾಂಬೆ – ಇವರ ಪುತ್ರನೇ ಪ್ರಸ್ತುತ ಕವಿ ವೆಂಕಟೇಶ.

ಇವನ 'ಹಾಲಾಸ್ಯ ಮಹಾತ್ಮ್ಯ' ಈಗ ಅಲಭ್ಯವಾಗಿದ್ದರೂ ಕವಿಚರಿತಕಾರರು ತಮಗೆ ಲಭ್ಯವಿದ್ದ ಅಸಮಗ್ರ ಓಲೆಗರಿಯಿಂದ ಆ ಕಾವ್ಯದ ೮ ವೃತ್ತಗಳನ್ನೂ ೧ ಕಂದ ಪದ್ಯವನ್ನೂ ನೀಡಿದ್ದಾರೆ.[೮] ಹಾಲಾಸ್ಯ ಮಹಾತ್ಮ್ಯ ಒಂದು ಚಂಪೂ ಕಾವ್ಯ. ಅದರಲ್ಲಿ ಶಿವನ ಲೀಲೆಗಳು ವರ್ಣಿತವಾಗಿವೆ. ಕಾವ್ಯಾರಂಭದಲ್ಲಿ ಕವಿ ತನ್ನ ವಂಶವೃಕ್ಷ, ತನ್ನ ಆಶ್ರಯದಾತನ ವಂಶವೃಕ್ಷ ಹಾಗೂ ತನ್ನ ಗುರು ಪರಂಪರೆಯನ್ನು ನೀಡಿರುತ್ತಾನೆ. ಅವು ಹೀಗಿವೆ.

ಕವಿ ವೆಂಕಟೇಶನ (ಕ್ರಿ. ಶ. ೧೭೪೦) ಪೂರ್ವಿಕರು ತನಗೆ ಹಿಂದಿನಿಂದ "೫೦೦ ವರ್ಷಗಳಿಂದ ಗುಮ್ಮಳಾಪುರದಲ್ಲಿ ಗ್ರಾಮಭೂಸ್ವಾಸ್ಥ್ಯಗಳನ್ನನುಭವಿಸಿಕೊಂಡು ಮರ್ಯಾದೆಯಿಂದ ಇದ್ದರು"[೯] ಎಂದು ಕವಿ ಹೇಳಿಕೊಂಡಿದ್ದಾನೆ. ಇವನ

ಕವಿಯ ವಂಶವೃಕ್ಷ	**ಗುರು ಪರಂಪರೆ**	**ಆಶ್ರಯದಾತ ಪರಂಪರೆ**
ಅರುಣಗಿರಿದೀಕ್ಷಿತ	ದತ್ತಾತ್ರಯಯೋಗಿಚಂದ್ರ	ಕೆಂಪಕ್ಷಮಾಧೀಶ್ವರ (ಬೆಂಗಳೂರು)
ಗಿರೀಶ್ವರ ದೀಕ್ಷಿತ	ಶಿಷ್ಯ ಪರಮಹಂಸ	ನಾಚಪ
ವೆಂಕಟ ಸೂರಿ*	ಶಿಷ್ಯದತ್ತ ನಿರಂಜನ	ಗಿಡ್ಡಪ
ಗಿರೀಶ	ಶಿಷ್ಯ ತಾರಕಯೋಗಿ	ಕೆಂಪನಾಚಯ
ತಿಮ್ಮಯಾರ್ಯ	ಶಿಷ್ಯ ಸ್ವಾತ್ಮಾಭಿರಾಮ	ಏಕರಾಜ (ಎಕ್ಕೋಜಿ)
ವೆಂಕಟೇಶ	ಶಿಷ್ಯ-ಕವಿಯ ಗುರು	ದೊಡ್ಡಕ್ಷಮಾಧೀಶ್ವರ
ತಿಮ್ಮಾರ್ಯ (ಹೆಂ=ತಿಮ್ಮಾಂಬೆ)	ಯೋಗಿಚಂದ್ರ	ವೀರ ರಾಜೇಂದ್ರ
ಕವಿ ವೆಂಕಟೇಶ		ದೊಡ್ಡರಾಜ
		ವೀರರಾಜ
		ಕಳಲೆ ನಂಜರಾಜ (ಕವಿಯ ಆಶ್ರಯದಾತ)

* ಇವರೇ ೨೧-೦೨-೧೪೭೪ರ ತಾಮ್ರಪಟೋಕ್ತ ವೆಂಕಟೇಶ್ವರ ಉಪಾಧ್ಯರು

ವಂಶಪರಂಪರೆಯಲ್ಲಿ ಅರುಣಗಿರಿ ದೀಕ್ಷಿತನೆಂಬುವನು ಪ್ರಸಿದ್ಧನಾಗಿದ್ದಂತೆ ತೋರುತ್ತದೆ. ಏಕರಾಜ (ಎಕ್ಕೋಜಿ) ಕವಿಯ ಮುತ್ತಾತನಾದ ತಿಮ್ಮಯಾರ್ಯನಿಗೆ ಆಂದೋಳಿಕಾಶ್ವಾದಿ ಸನ್ಮಾನವನ್ನು ಮಾಡಿದ್ದನು. ಹಾಗೂ ಈ ತಿಮ್ಮಾರ್ಯನ ತಾನ ವೆಂಕಟಸೂರಿ ಅರ್ಥಾತ್ ವೆಂಕಟೇಶ್ವರ ಉಪಾಧ್ಯನಿಗೆ ಅಶೇಷ ವೀರ ಮಾಹೇಶ್ವರರು ೨೧-೦೨-೧೪೭೪ರಲ್ಲಿ ಗುಮ್ಮಳಾಪುರ, ತಮ್ಮಾಪುರಗಳ ಭೂಮಿಯನ್ನೂ ಗುಮ್ಮಳಾಪುರದ ಪ್ರಥಮ ನಿವೇಶನ ವಠಾರವನ್ನೂ ಸಹಿರಣ್ಯೋದಕವಾಗಿ ದಾನ ಮಾಡಿದರು.[೧೦] ಸ್ವತಃ ಕವಿ ವೆಂಕಟನಿಗೆ ಕಳಲೆ ನಂಜರಾಜನು ೩೧-೦೧-೧೭೬೩ರಲ್ಲಿ ಉಳಿಮಾರನ ಹಳ್ಳಿ, ಹುರಳಿಬೀರನಹಳ್ಳಿ, ಮಾರಳ್ಳಿ, ಉಪಾರನಹಳ್ಳಿಗಳನ್ನು ದತ್ತಿ ನೀಡಿದನು. ಹಿಗಾಗಿ ಇವನ ವಂಶದಲ್ಲಿ ಕವಿಗಳೂ ವಿದ್ವಜ್ಜನರೂ ಇದ್ದಂತೆ ತೋರುತ್ತದೆ.

ಹೀಗಾಗಿ ಸಹಜವಾಗಿಯೇ ಕವಿವೆಂಕಟೇಶನ ಕಾವ್ಯಬಂಧವು ಪ್ರೌಢವಾಗಿದೆ. ಕವಿ ಈ ಕೆಳಕಂಡ ವೃತ್ತಗಳಲ್ಲಿ ಸರಸ್ವತೀ ಪ್ರಾರ್ಥನೆ ಮಾಡಿದ್ದಾನೆ.

೧. ಸತತಾನಂದಿತ ಸತ್ಯಲೋಕೆಸರಸಾಲಂಕಾರೆ ಸಲ್ಲಕ್ಷಣಾ
ನ್ವಿತೆ ಸಂವಿನ್ಮಹಿತಾಕ್ಷರಾತ್ಮಕಿ ಮಹಾಕಾವ್ಯಜ್ಞವಿದ್ಯಾಧರ
ಸ್ತುತೆ ಸದ್ವೃತ್ತಪವಿತ್ರ ಚಾರುಚರಣಭ್ರಾಜಿಷ್ಣು ಮತ್ಕಾವ್ಯ ಭಾ
ರತಿ ನಿಚ್ಚಂ ಚತುರಾಸ್ಯವಸ್ತ್ರವನ ಜಾತಾವಾಸದೊಳ್ ಕ್ರೀಡಿಪಳ್

ಇದರ ಜೊತೆಗೆ ಕಾವ್ಯದ ಮೊದಲಲ್ಲಿ ಶಿವಸ್ತುತಿ, ಪಾರ್ವತಿ, ವಿಷ್ಣು, ಬ್ರಹ್ಮ, ಸರಸ್ವತಿ, ಗಣೇಶ, ಶಂಕರಾಚಾರ್ಯ, ಯೋಗಿಚಂದ್ರ ಗುರು ಇವರುಗಳನ್ನು ಕ್ರಮವಾಗಿ ಪ್ರಾರ್ಥಿಸಿದ್ದಾನೆ.

ವಂಶಸ್ಥವೃತ್ತವೆಂಬ ಜಗತಿ ಛಂದಸ್ಸಿನಲ್ಲಿ ಕವಿ ಮಾಡಿರುವ ನಕ್ಷತ್ರದ ವರ್ಣನೆಯನ್ನು ಗಮನಿಸಿ.

ಪ್ರರೂಢಸಂಧ್ಯಾನಟನೋದ್ಭಟಾಂಬಿಕಾ
ವರೋಲ್ಲಸಚ್ಛೀರ್ಷಕಿರದ್ವಯಜ್ಝರೀ
ಸ್ಫುರತ್ಪೃಷತ್ಸಂತತಿಯೆಂಬಿನಂ ನಭೋಂ
ತರಸ್ಥತಾರಾಳಿಗಣಮೊಪ್ಪಿತೊಳ್ದಿನಿಂ

ಈ ಪದ್ಯ ಸಂಸ್ಕೃತಭೂಯಿಷ್ಟವಾಗಿದ್ದು ಎಂಬಿನಂ, ಒಪ್ಪಿತೊಳ್ದಿನಿಂ – ಎಂಬ ಎರಡು ಘಟಕಗಳು ಮಾತ್ರ ಕನ್ನಡದ್ದಾಗಿದೆ. ತನ್ನ ಕಾವ್ಯದ ಉತ್ಕೃಷ್ಟತೆಯನ್ನು ಕುರಿತು

ಸ್ಫುರದುಕ್ತಿಪ್ರೋಜ್ವಲಾರ್ಕದ್ಯುತಿಜಿತ ಕುಜನೋದ್ಯದ್ಧ್ವಾಂಧಂ ವಿಪಶ್ಚಿ
ತ್ಪರಿಪೋಷಾರ್ಥೌಘ ಸಂಧಂ ಗತನತಭವಬಂಧಂ ಲಸಚ್ಛಾರದಾಸ್ಯಾಂ
ಬುರುಹಪ್ರಾಚುರ್ಯ ಗಂಧಂ ಪರಮಶಿವಕಥಾನೇಕಸಂಬಂಧಮದ್ರೀ
ಶಿರಸಾಲಂಕಾರಬಂಧಂ ಪ್ರಥಿತಪದನಿಬಂಧಂ ಮದೀಯ ಪ್ರಬಂಧಂ.

ರಸಭಾವಂ ಸೊಗಸಾದುದಚ್ಚರಿ ಚಮತ್ಕಾರಂ ಕಳಾರೀತಿಯೇಂ
ಪೊಸತುತ್ಪ್ರೇಕ್ಷೆ ಮನೋಜ್ಞಮುಜ್ವಲಮಲಂಕಾರಂ ನವೀನಾರ್ಥಗ
ರ್ಭ ಸಮಾಸೋಚಿತಕಲ್ಪನಾ ಚರನೆ ಚೆಲ್ವಾಯ್ತೆಂದತಿಪ್ರೀತಿಯಿಂ
ರಸಿಕರ್ ಮೆಚ್ಚೆ ನಿಮಿರ್ಚುವೆಂ ಸುಜನ ಕರ್ಣಶ್ರಾವ್ಯಮಂ ಕಾವ್ಯಮಂ

ಎಂದು ಹೇಳುತ್ತಾನೆ.

ಸರೋವರದ ವರ್ಣನೆಯ ಕಂದಪದ್ಯವೊಂದನ್ನು ಗಮನಿಸಿ:

ಅಂಭೋಜೋತ್ಪಲ ಸಂಭೃತ
ಬಂಭರಕಳಹಂಸಚಕ್ರಕಾರಂಡರವಾ
ರಂಭವಿಜೃಂಭಣಸಂಭ್ರಮ
ಗಂಭೀರಾಸಾರಪೂರಮಾಕಾಸಾರಂ

ಸುಮನೋವಾಹಿನಿಯಿಂ ಪರಿಸ್ಫುರಿಪರಂಭಾಮಂಜು ಘೋಷಾದಿಸ
ತ್ರಮದಾಳಿವ್ರಜದಿಂ ಪೊದಟ್ದಿ ಸುರಸಾಲಶ್ರೇಣಿಯಿಂದಾ ನಗಂ
...........ಒಪ್ಪುಗುಂ'ಎಂದು ಮೇರುಪರ್ವತವನ್ನೂ

ಬಿತ್ತರಂಬಡೆದಿರ್ಪ ಮಾವಿನೊಳೆತ್ತಲುಂ ಮೊಳೆದೋಜಿಕೆಂ
ಪೊತ್ತಿದಂಕುರಮಂ ಕದ್ರುಂಕಿ ಸಮತ್ತಕಾಕಲಿಕಾರವಂ
ಬೆತ್ತು ಚಿತ್ತಜಬೀರಮಂ ಗಟಿಪುತ್ತುಮಿರ್ಪುವಿನೆಂಬಿನಂ
ಮತ್ತಕೋಕಿಲಗಳ್ ವಿರಾಜಿಸಿದತ್ತು ಪಂಚಮರಾವಂದಿಂ


ಎಂದು ಉದ್ಯಾನವನ್ನೂ ವರ್ಣಿಸಿದ್ದಾನೆ.


ಇಡೀ 'ಹಾಲಾಸ್ಯ ಮಹಾತ್ಮ್ಯ' ಕಾವ್ಯವು ದೊರೆಯುವವರೆಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅದರ ಸ್ಥಾನಮಾನವನ್ನು ಹೇಳಲು ಬರುವುದಿಲ್ಲ.

ಒಟ್ಟಾರೆಯಾಗಿ ಕವಿವೆಂಕಟೇಶನೂ ಅವನ ವಂಶರೂ ವಿದ್ವಜ್ಜನರಾಗಿದ್ದ ರೆಂಬುದನ್ನು ಮೇಲಿನ ದೃಷ್ಟಾಂತಗಳಿಂದ ತೀರ್ಮಾನಿಸಬಹುದು.

ಕವಿ ವೆಂಕಟೇಶನ ವಂಶವೃಕ್ಷ

- ಅರುಣಗಿರಿದೀಕ್ಷಿತ
  - ಗಿರೀಶ್ವರ-I
    - ವೆಂಕಟೇಶ್ವರ ಉಪಾಧ್ಯಾ
      - ಗಿರೀಶ್ವರ- II
        - ತಿಮ್ಮಯಾರ್ಯ
          - ವೆಂಕಟೇಶ
            - ತಿಮ್ಮಾರ್ಯ
              - ಕವಿವೆಂಕಟೇಶ
                - ಶಂಕರ
                  - ವೆಂಕಟೇಶ
                    - ಶಿವರಾಮಯ್ಯ
                      - ವೆಂಕಪ್ಪ
                      - ಗುಂಡಪ್ಪ
                      - ತಿಮ್ಮಪ್ಪ
                      - ಮುನೀಶ್ವರಯ್ಯ *
                        - ಗಿರೀಶ್ವರ
                        - ಜಿ.ಕೆ.ಚಂದ್ರ ಶೇಖರ
                        - ಜಿ.ಕೆ.ರಾಧಾಕೃಷ್ಣ
                          - ವಿನಾಯಕ ಪ್ರಸಾದ್
                            - ಕಾರ್ತೀಕ
                          - ಶ್ರೀನಾಥ್
                        - ಜಿ.ಕೆ.ನಾಗರಾಜನ್
                          - ನಂದ ಕಿಶೋರ್
                          - ನಾಗ ಪ್ರಕಾಶ್
                        - ಸುಂದರೇಶ್ವರ
                          - ಮುರಳಿ
                    - ಶಂಕರಪ್ಪ
                    - ಗಿರೀಶ್ವರ - III
                      - ಕೃಷ್ಣಮೂರ್ತಿ





೧. ಜಿ.ಕೆ. ರಾಧಾಕೃಷ್ಣ : District treasury officer (Retd)

೨. ಜಿ.ಕೆ. ನಾಗರಾಜನ್(ದಿವಂಗತ): Retd Teacher, National High School

೩. ಡಾ. ಜಿ.ಎನ್. ನಂದಕಿಶೋರ್ : Prof-of com, APS College of Commerce

೪. ಕಾರ್ತೀಕ್ : M.S. (Duke Uni)

೫. ಜಿ. ವೆಂಕಟನಾರಾಯಣ(ದಿವಂಗತ) : Prof of Maths, National College

೬. ಜಿ.ಎಂ. ಕಮಲನಾಭನ್ : Retd HM, Govt. School, Gummalapura

ಅಡಿ ಟಿಪ್ಪಣಿಗಳು

೧. ಕರ್ನಾಟಕ ಕವಿಚರಿತೆ : ರಾ. ನರಸಿಂಹಾಚಾರ್ಯ, ತೃತೀಯ ಸಂಪುಟ, ೧೯೭೪, ಪುಟ-೫೦
೨. ಹರಿಹರನ ಗಿರಿಜಾಕಲ್ಯಾಣ ಪ್ರಬಂಧಂ : (ಸಂ) ಡಾ॥ ಶಿ.ಚೆ. ನಂದೀಮಠ, ಧಾರವಾಡ, ೧೯೬೮, ಪುಟ - ೬೧ (ಮಾತೃಕೆಗಳ ವಿವರ).
೩. ಜಗನ್ನಾಥ ವಿಜಯಂ : (ಸಂ) ಡಾ. ಆರ್. ಶಾಮಾಶಾಸ್ತ್ರಿ, ಮೈಸೂರು, ೧೯೭೬, p=ix
೪. ಕವಿವಿಶಾಸಂ:೪, ಪುಟ -೭೯, ೮೦, ೮೧, ಕ್ರ.ಸಂ.-೭೧
೫. ಕವಿವಿಶಾಸಂ: ೪, ಪುಟ = ೭೦, ೭೧, ೭೨, ಕ್ರ.ಸಂ = ೬೧
೬. ಶರಣಸಾಹಿತ್ಯ XXi .ಸಂ.೨,೩, ಮೇ, ಜೂನ್ ೧೯೫೮
೭. ಕವಿವಿಶಾಸಂ=೪, ಪು=೭೦ (ಸಾರಾಂಶ ಭಾಗ)
೮. ಕರ್ನಾಟಕ ಕವಿಚರಿತೆ: ಎರಡನೆಯ ಮುದ್ರಣ, ಪು=೫೦-೫೨
೯. ಅಲ್ಲೇ - ಪು, ೫೦
೧೦. ಗುಮ್ಮಳಾಪುರದ ತಾಮ್ರಪಟಗಳು, ಕವಿವಿಶಾಸಂ, ಕ್ರ.ಸಂ.೬೧, P = 70

ಸಂಪಾದಕರು ಮತ್ತು ಲೇಖಕರ ವಿಳಾಸಗಳು

ಸಂಪಾದಕರು

ಪ್ರೊ. ಜಿ. ಅಬ್ದುಲ್ ಬಷೀರ್
ನಿವೃತ್ತ ಕನ್ನಡ ಪ್ರಾಧ್ಯಾಪಕರು
ನಂ.೫, ೮ನೆಯ ಅಡ್ಡರಸ್ತೆ
ಬೈರಸಂದ್ರ, ಜಯನಗರ
೧ನೆಯ ಬ್ಲಾಕ್ ಪೂರ್ವ
ಬೆಂಗಳೂರು – ೫೬೦ ೦೧೧.
ದೂರವಾಣಿ : ೯೦೦೮೭೬೩೩೬

೧. **ಪ್ರೊ. ಆರ್. ರಾಚಪ್ಪ**
ಪ್ರಾಂಶುಪಾಲರು
ಬಸವ ರೆಸಿಡೆನ್ಷಿಯಲ್ ಗರ್ಲ್ಸ್ ಸ್ಕೂಲ್
ಬಸವಾಶ್ರಮ, ಬೆಂಗಳೂರು
೧೮ನೆ ಕಿಮೀ, ಮೈಸೂರು ರಸ್ತೆ
ಬೆಂಗಳೂರು – ೫೬೦ ೦೬೦.

೨. **ಪ್ರೊ. ಎಂ. ಧ್ರುವನಾರಾಯಣ**
೧೦/೨, ೧೩ನೆಯ 'ಎ' ಕ್ರಾಸ್
೨ನೆಯ ಬ್ಲಾಕ್, ಜಯನಗರ
ಬೆಂಗಳೂರು – ೫೬೦ ೦೧೧

೩. **ಡಾ. ಕೆ.ಜಿ. ವೆಂಕಟೇಶ ಜೋಯಿಸ್**
ಕ್ಯುರೇಟರ್, ಕೆಳದಿ ವಸ್ತು ಸಂಗ್ರಹಾಲಯ
ಕುವೆಂಪು ವಿಶ್ವವಿದ್ಯಾಲಯ
ಕೆಳದಿ – ೫೭೭ ೪೦೧
ಸಾಗರ ತಾಲೂಕು
ಶಿವಮೊಗ್ಗ ಜಿಲ್ಲೆ

೪ **ಡಾ. ಬಿ.ಎಸ್. ಗೀತಾ**
೬೮೮, ೬೧ನೆಯ ಕ್ರಾಸ್
೫ನೆಯ ಬ್ಲಾಕ್, ರಾಜಾಜಿನಗರ
ಬೆಂಗಳೂರು – ೫೬೦ ೦೧೦.

೫. **ಶ್ರೀ ಬಿ.ಆರ್. ರವೀಂದ್ರನಾಥ್**
ನಿರ್ದೇಶಕರು
ಭಾಷಾಂತರ ಅಧ್ಯಯನ ಸಂಸ್ಥೆ
೩೩೮/೧, ೧೨ನೆಯ ಮುಖ್ಯರಸ್ತೆ
೫೮ನೆಯ ಅಡ್ಡರಸ್ತೆ, ೩ನೆಯ ಬ್ಲಾಕ್
ರಾಜಾಜಿನಗರ, ಬೆಂಗಳೂರು – ೫೬೦ ೦೧೦.

೬. **ಪ್ರೊ. ಬಸವರಾಜ ಕೋಡಗುಂಟಿ**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ಭಾಷೆ ಮತ್ತು ಅನುವಾದ
ಅಧ್ಯಯನ ವಿಭಾಗ,
ದ್ರಾವಿಡ ವಿಶ್ವವಿದ್ಯಾಲಯ,
ಕುಪ್ಪಂ – ೫೧೭೪೨೫
ಆಂಧ್ರಪ್ರದೇಶ.

೭. **ಶ್ರೀಮತಿ ವಿ. ಲಕ್ಷ್ಮೀ**
ಕನ್ನಡ ಉಪನ್ಯಾಸಕರು,
ಎಪಿಎಸ್ ಇಂಜಿನಿಯರಿಂಗ್ ಕಾಲೇಜು,
ಸೋಮನಹಳ್ಳಿ
ಬೆಂಗಳೂರು – ೫೬೦ ೦೬೨.

೮. **ಪ್ರೊ. ಸುಬ್ರಾಯ ಈಶ್ವರ ಹೆಗಡೆ**
ಸಂಸ್ಕೃತ ಉಪನ್ಯಾಸಕರು,
ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು
ಬೆಂಗಳೂರು – ೫೬೦ ೦೨೦

೯. **ಪ್ರೊ. ಸಿ. ಮಹಾದೇವಪ್ಪ**
#೧೯೭, ೫ನೆಯ ಮುಖ್ಯರಸ್ತೆ
ವೈಯಾಲಿ ಕಾವಲ್
ಬೆಂಗಳೂರು – ೫೬೦ ೦೦೩.

೧೦. **ಪ್ರೊ. ಕೆ.ಎಸ್. ಮಧುಸೂದನ**
ನಂ. ೧೫೫, 'ವೈ', ೩ನೆಯ ಮೈನ್
೭ನೆಯ ಬ್ಲಾಕ್
ಬನಶಂಕರಿ ೩ನೆಯ ಘಟ್ಟ
ಬೆಂಗಳೂರು – ೫೬೦ ೦೮೫

ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ
ಹೊಸ ಪ್ರಕಟಣೆಗಳು

ರಜತೋತ್ಸವ ಮಾಲೆ

೧. ಗ್ರಂಥಸಂಪಾದನಾ ಪರಿಭಾಷಾಕೋಶ	೩೬-೦೦
೨. ಸಾಹಿತ್ಯೋಪಾಸಕರು	೨೦೦-೦೦
೩. ವಾಸವಾಂಬ ಪುರಾಣ	೧೫೦-೦೦
೪. ತಿಮ್ಮಪ್ಪದಾಸರ ಕೀರ್ತನೆಗಳು	೭೫-೦೦
೫. ಬಿ.ಎಂ.ಶ್ರೀಕಂಠಯ್ಯ*	೨೦-೦೦
೬ ಎಂ.ವಿ. ಸೀತಾರಾಮಯ್ಯ	೨೦-೦೦
೭. ಶ್ರೀಕೃಷ್ಣಲೀಲಾಗಾನಂ	೧೦೦-೦೦
೮. ಕನ್ನಡ ತಿರುಕ್ಕುರುಳ್*	೧೦೦-೦೦
೯. ಕಾರಂತ ಕಿರಣ*	೩೦-೦೦
೧೦. ರಜತ ಸಿರಿ (ಸ್ಮರಣ ಸಂಚಿಕೆ)*	-

ಪ್ರತಿಷ್ಠಾನದ ಹೊಸ ಪ್ರಕಟಣೆಗಳು

೧. ಅಲಿಗೆ ಮೇಲಿನ ಹಸ್ತಪ್ರತಿಗಳು	೧೦೦-೦೦
೨. ವೆಂಕಟದಾಸರು ಮತ್ತು ಇತರ ಅದ್ವೈತ ಹರಿದಾಸರ ಕೀರ್ತನೆಗಳು	೭೫-೦೦
೩. ಕನ್ನಡವೆಂಬ ಕನ್ನಡಿ	೩೦-೦೦
೪. ಕನ್ನಡದ ಶರಣ ಎಂ.ಆರ್.ಶ್ರೀ.	೩೦-೦೦
೫. ಶ್ರೀಸಾಹಿತ್ಯ ಮಣಿ ಮಾಲೆ	೧೫೦-೦೦
೬ ಇಂಗ್ಲೀಷ್ ಗೀತಗಳು (ಮೂಲದೊಂದಿಗೆ)	೧೦೦-೦೦
೭. ಪ್ರೊ॥ ಡಿ.ಎಲ್.ಎನ್.ರ ಹೆಚ್ಚಿನ ಬರಹಗಳು, ಭಾಷಣಗಳು	೨೦೦-೦೦
೮. ಕುಂತಿಯ ಅಂತರಾಳ	೫೦-೦೦
೯. ಪರಿಷ್ಕೃತ ಹೊಸಗನ್ನಡದ ವ್ಯಾಕರಣ	೧೦೦-೦೦
೧೦. ಆಯ್ದ ಕವನಗಳು	೧೦-೦೦
೧೧. ಕ.ವೆಂ. ರಾಘವಾಚಾರ್ ಜೀವನ ಸಾಧನೆ	೮೦-೦೦
೧೨. ಸುದ್ದಿ ಸಂಕಮ್ಮ	೫೦-೦೦
೧೩. ಬರಡು ಬರಹಗಳು	೪೦-೦೦
೧೪. ಕಾವ್ಯದ ಒಂದು ಚುಂಗನ್ನು ಹಿಡಿದು	೬೦-೦೦

ಮುದ್ರಣದಲ್ಲಿ

೧೧. ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ
೧೨. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ-೨೫
೧೩. ಎಂ.ವಿ.ಸೀ. ಸಮಗ್ರ ಸಾಹಿತ್ಯಮಾಲೆ-೭; ಪ್ರಾಚೀನ ಸಾಹಿತ್ಯ ಸಮೀಕ್ಷೆ
೧೪. ಸುವರ್ಣ ಕರ್ನಾಟಕ ಮಾಲೆ ವಿಶೇಷ ಸಂಪುಟಗಳು: ೧, ೨, ೩

* ಪ್ರತಿಗಳು ಮುಗಿದಿವೆ.

ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ನಮ್ಮ ಲೇಖಕರು

ಪ್ರೊ. ಜಿ. ಅಬ್ದುಲ್ ಬಷೀರ್
ಪ್ರೊ. ಆರ್. ರಾಚಪ್ಪ
ಪ್ರೊ. ಎಂ. ಧ್ರುವನಾರಾಯಣ
ಡಾ. ಕೆ. ಜಿ. ವೆಂಕಟೇಶ ಜೋಯಿಸ್
ಡಾ. ಬಿ.ಎಸ್. ಗೀತಾ
ಬಿ.ಆರ್. ರವೀಂದ್ರನಾಥ್
ಪ್ರೊ. ಬಸವರಾಜ ಕೋಡಗುಂಟಿ
ವಿ. ಲಕ್ಷ್ಮೀ
ಪ್ರೊ.. ಸುಬ್ರಾಯ ಈಶ್ವರ ಹೆಗಡೆ
ಪ್ರೊ. ಸಿ. ಮಹಾದೇವಪ್ಪ
ಪ್ರೊ.. ಕೆ.ಎಸ್. ಮಧುಸೂದನ